# ಯುಗರಶ್ಮಿ

ಅಹ್ಮದಿ ಪೌರರ ಕರ್ತವ್ಯಗಳು

ಹಜ್ ಕರ್ಮಾನುಷ್ಠಾನದ ಮಹತ್ವ

ಇಸ್ಲಾಂ - ನವೀನ ಪಾಶ್ಚಾತ್ಯರ ನೋಟದಲ್ಲಿ

ಡಾ| ಕೋವೂರರ ಮೂಢ ನಂಬಿಕೆ

ರೌಝಾಬಾಲ್ - ಯೇಸುಕ್ರಿಸ್ತರ ಸಮಾಧಿ?

ಯೇಸುಕ್ರಿಸ್ತರು ಮೃತರಾದುದು ಎಲ್ಲಿ?

ತ್ರೈಮಾಸಿಕ

ಡಿಸೆಂಬರ್ 1976

ಫತಹ್ 1355

ಬೆಲೆ: ರೂ. 1-00.

ನೀವು ಎಲ್ಲರೊಡನೆಯೂ ನ್ಯಾಯ ಮತ್ತು ಅನುಕಂಪದಿಂದ ವರ್ತಿಸಲೂ ಸಂಬಂಧಿಕರಲ್ಲದವರನ್ನು ಸಹ ಸಂಬಂಧಿಕರಂತೆ ಕಾಣಲೂ ಪ್ರತಿಯೊಂದು ಅಶ್ಲೀಲತೆ ಮತ್ತು ಅನಿಚ್ಛಿತ ಸಂಗತಿಯಿಂದ ದೂರ ವಿರುವಂತೆಯೂ ದೇವರು ಆಜ್ಞಾಪಿಸುತ್ತಾನೆ.

—ಪವಿತ್ರ ಖುರ್ಆನ್ (16:91)

# ಯುಗರಶ್ಮಿ

ತ್ರೈಮಾಸಿಕ

23/1008, ಅನ್ಸಾರಿ ರೋಡ್,

ಬಂದರ್, ಮಂಗಳೂರು 575001.

ಸಂಪುಟ: 2 ಸಂಚಿಕೆ: 3

ಅಕ್ಟೋಬರ್ — ಡಿಸೆಂಬರ್ 1976 / ಇಖಾ-ಫತಹ್ 1355

ಸಂಪಾದಕ: ಮುಹಮ್ಮದ್ ಯೂಸುಫ್

ಬಿಡಿ ಪ್ರತಿ: ಒಂದು ರೂಪಾಯಿ ವಾರ್ಷಿಕ ಚಂದಾ: ನಾಲ್ಕು ರೂಪಾಯಿಗಳು

## ವಿಷಯ ಸೂಚಿಕೆ:

ಧರ್ಮಶಾಸ್ತ್ರಾನುಷ್ಠಾನ

ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

ಅಹ್ಮದಿ ಪೌರರ ಕರ್ತವ್ಯಗಳು

ಹಜ್ ಕರ್ಮಾನುಷ್ಠಾನದ ಮಹತ್ವ

ಇಸ್ಲಾಂ – ನವೀನ ಪಾಶ್ಚಾತ್ಯರ ನೋಟದಲ್ಲಿ

ಮಾವೋ ಬೋಧಿಸಿದ ಶಿಸ್ತು

ಡಾ। ಕೋವೂರರ ಮೂಢ ನಂಬಿಕೆ—
ಪತ್ರಿಕಾ ಸಮ್ಮೇಳನದಲ್ಲಿ ಪ್ರಶ್ನೆಗಳ ಸುರಿಮಳೆ

ಸ್ನೇಹದಿಂದ ಜನರ ಹೃದಯಗಳನ್ನು ಜಯಿಸುವೆವು.

ರೌಝಾಬಾಲ್ — ಯೇಸುಕ್ರಿಸ್ತರ ಸಮಾಧಿ ?

ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

ಸಂಪಾದಕರಿಗೆ ಪತ್ರ

ಪುಸ್ತಕ ವಿಭಾಗ – ಯೇಸುಕ್ರಿಸ್ತರು ಮೃತರಾದುದು ಎಲ್ಲಿ ?

بِسْمِ اللّٰهِ الرَّحْمٰنِ الرَّحِيْمِ

نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ

# ಯುಗರಶ್ಮಿ

ಸಂಪುಟ: 2 | ಅಕ್ಟೋಬರ್ – ಡಿಸೆಂಬರ್ 1976 / ಇಖಾ-ಫತಹ್ 1355 | ಸಂಚಿಕೆ: 3

## ಧರ್ಮಶಾಸ್ತ್ರಾನುಷ್ಠಾನ



ಅಹ್ಮದಿಯಾ ಸಂಘಟನೆಯ ಸ್ಥಾಪಕ
**ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್.**

ಧರ್ಮಶಾಸ್ತ್ರಗಳಿಗೆ ಮನುಷ್ಯಜೀವಿತದ ಮೇಲಿರುವ ಸ್ವಾಧೀನ ಶಕ್ತಿಯು ಅವನ ಜೀವಿತವನ್ನು ನಿಯಂತ್ರಿಸುತ್ತದೆ. ಧರ್ಮಶಾಸ್ತ್ರಾನುಷ್ಠಾನ ಮೂಲಕ ಒಬ್ಬನ ಹೃದಯದಲ್ಲುಂಟಾಗುವ ಪರಿವರ್ತನೆಯ ಕಾರಣದಿಂದ ಅವನು ಸಮಸ್ಸೃಷ್ಟಿಗಳ ಹಕ್ಕುಗಳನ್ನು ಸರಿಯಾಗಿ ತಿಳಿದು ಅವರೊಡನೆ ವ್ಯವಹರಿಸುವಾಗ ನೀತಿ, ಧರ್ಮ, ಪರೋಪಕಾರ, ಸಹತಾಪ ಎಂಬೀ ಧರ್ಮಗಳನ್ನು ಔಚಿತ್ಯವಿವೇಚನಾಪೂರ್ವಕವಾಗಿ ಪ್ರಯೋಗಿಸಲು ಪ್ರಾಪ್ತನಾಗುತ್ತಾನೆ. ತನಗೆ ದೇವರು ನೀಡಿದ ಜ್ಞಾನವಿಜ್ಞಾನಗಳಲ್ಲಿಯೂ ಸುಖೈಶ್ವರ್ಯಗಳಲ್ಲಿಯೂ ಇನ್ನಿತರ ಅನುಗ್ರಹಗಳಲ್ಲಿಯೂ ಅನ್ಯರನ್ನೂ ಯಥಾಯೋಗ್ಯ ಪಾಲುಗಾರನನ್ನಾಗಿ ಮಾಡಲು ಅವನು ಪ್ರೇರಿತನಾಗುತ್ತಾನೆ. ಸೂರ್ಯನಂತೆ ಅವನು ತನ್ನ ತೇಜಸ್ಸನ್ನು ಲೋಕಕ್ಕೆ ಪ್ರದಾನ ಮಾಡುತ್ತಾನೆ. ಚಂದ್ರನಂತೆ ಅವನು ತೇಜೋಕಾರಣನೂ ಮಹಾಮಹಿಮನೂ ಆಗಿರುವ ದೇವರಿಂದ ಸ್ವೀಕರಿಸುವ ಪ್ರಕಾಶವನ್ನು ಇತರರಿಗೆ ವಿತರಣೆ ಮಾಡುತ್ತಾನೆ. ಹಗಲಿನಂತೆ ಅವನು ಪ್ರಕಾಶಮಾನವಾಗಿ ಸತ್ಯ ಹಾಗೂ ಸದ್ಗತಿಯ ಮಾರ್ಗಗಳನ್ನು ಅನ್ಯರಿಗೆ ತೋರಿಸಿಕೊಡುತ್ತಾನೆ. ಅವನು ರಾತ್ರಿಯಂತೆ ಬಲಹೀನರ ದೌರ್ಬಲ್ಯಗಳನ್ನೂ ಚಾಪಲ್ಯಗಳನ್ನೂ ಮರೆಯಾಗಿರಿಸಿ ದುರ್ಬಲರಿಗೂ ದುಃಖಿತರಿಗೂ ವಿಶ್ರಾಂತಿಯನ್ನು ಕೊಡುತ್ತಾನೆ. ಅವನು ಆಕಾಶಮಂಡಲದಂತೆ ಭೂಮಿ

# ಮುಹಮ್ಮದ್ ಪೈಗಂಬರರ ನುಡಿ ಮುತ್ತುಗಳು

1. ಒಬ್ಬ ಮುಸ್ಲಿಂ ಇನ್ನೊಬ್ಬ ಮುಸ್ಲಿಮನಿಗೆ ಕನ್ನಡಿಯ ಹಾಗೆ.

2. ಒಳ್ಳೆಯ ಸಂಗತಿಯನ್ನು ಹೇಳಿಕೊಡುವವನು ಅದನ್ನು ಮಾಡಿದವನ ಹಾಗೆ.

3. ಯಾರೊಡನೆ ಸಲಹೆಯನ್ನು ಕೇಳಲಾಗುವುದೋ ಅವನು ವಿಶ್ವಾಸಕ್ಕೆ ತಕ್ಕವನಾಗಿರಬೇಕು.

4. ವಿಶ್ವಾಸಿಯ ವಾಗ್ದಾನವು ಕೈಯಲ್ಲಿ ಸಿಕ್ಕಿದ ವಸ್ತುವಿನಂತೆ ಯಥಾರ್ಥವಾಗಿದೆ.

5. ನಮ್ಮನ್ನು ವಂಚಿಸುವವನು ನಮ್ಮ ಪೈಕಿಯವನಲ್ಲ.

6. ಆವಶ್ಯಕ್ಕೆ ಸಾಕಾಗುವ ಅಲ್ಪ ಧನವು ಮತಿಗೆಡಿಸುವ ಧನಸಮೃದ್ಧಿಗಿಂತ ಒಳ್ಳೆಯದು.

7. ತಾನು ಮಾಡಿದ ದಾನವನ್ನು ವಾಪಾಸು ತೆಗೆಯುವವನು ತಾನು ಮಾಡಿದ ವಾಂತಿಯನ್ನು ತಾನೇ ತಿಂದವನ ಹಾಗೆ.

8. ಮನುಷ್ಯರು ಒಂದು ಬಾಚಣಿಗೆಯ ಹಲ್ಲುಗಳ ಹಾಗೆ.

9. ಮನಸ್ಸಿನ ಐಶ್ವರ್ಯವೇ ಯಥಾರ್ಥ ಐಶ್ವರ್ಯ.

10. ಇನ್ನೊಬ್ಬನ ಅನುಭವದಿಂದ ಪಾಠ ಕಲಿಯುವವನು ಸೌಭಾಗ್ಯವಂತ.

11. ಸ್ವಂತ ನೆಲೆಯನ್ನು ತಿಳಿದವನು ನಾಶ ಹೊಂದಲಾರನು.

12. ಮನುಷ್ಯರಿಗೆ ಕೃತಜ್ಞತೆಯನ್ನು ತೋರಿಸದವನು ಅಲ್ಲಾಹುವಿಗೂ ಕೃತಜ್ಞತೆಯನ್ನು ತೋರಿಸಲಾರನು.

13. ಒಂದರಲ್ಲಿ ನಿನಗಿರುವ ಪ್ರೀತಿಯು ನಿನ್ನನ್ನು ಕುರುಡನನ್ನಾಗಿಯೂ ಕಿವುಡನನ್ನಾಗಿಯೂ ಮಾಡದಿರಲಿ.

14. ದಾರಿದ್ರ್ಯವು ಅವಿಶ್ವಾಸವನ್ನು ಸಮೀಪಗೊಳಿಸುತ್ತದೆ.

15. ಜನರ ನಾಯಕ ಅವರ ಸೇವಕನಾಗಿದ್ದಾನೆ.

—o—o—o—

---

ಪ್ವಲರಿಗೂ ಅಭಯಾರ್ಥಿಗಳಿಗೂ ಸಂಕೇತ ನೀಡಿ ವಿಹಿತಕಾಲಗಳಲ್ಲಿ ಅನುಗ್ರಹಗಳನ್ನು ಸುರಿಸುತ್ತಾನೆ. ಭೂಮಿಯಂತೆ ಅವನು ಅತ್ಯಂತ ವಿನಯದಿಂದ ಇತರರಿಗೆ ಸುಖಕ್ಷೇಮವನ್ನು ನೀಡಲಿಕ್ಕಾಗಿ ಹಿಂಸೆಯನ್ನು ಸ್ವಯಂ ಸಹಿಸಿ ಸಕಲರನ್ನೂ ತನ್ನ ಧರ್ಮಶೀಲವೆಂಬ ಅಂಕದಲ್ಲಿ ಸ್ವೀಕರಿಸಿ ಅವರಿಗೆ ವಿವಿಧ ತರದ ಆಧ್ಯಾತ್ಮಿಕ ಫಲಗಳನ್ನು ನೀಡುತ್ತಾನೆ. ಈ ರೀತಿಯ ಒಂದು ಪರಿವರ್ತನೆ ಪರಿಪೂರ್ಣವಾದ ಧರ್ಮಶಾಸ್ತ್ರಾನುಷ್ಠಾನದಿಂದ ಲಭಿಸುತ್ತದೆ. ಈ ಪರಿಪೂರ್ಣ ನಿಯಮಶಾಸ್ತ್ರವನ್ನು ಅನುಸರಿಸಿ ಜೀವಿಸುವವನಿಗೆ ಸೃಷ್ಟಿಕರ್ತನೊಡನಿರುವ ಕರ್ತವ್ಯವನ್ನೂ ಸೃಷ್ಟಿಗಳೊಡನಿರುವ ಧರ್ಮವನ್ನೂ ಸಂಪೂರ್ಣವಾಗಿ ಅನುಷ್ಠಿಸಲು ಸಾಧ್ಯವಾಗುತ್ತದೆ. ಅವನು ದೇವರಿಗೆ ಆತ್ಮಾರ್ಪಿತನಾಗಿ, ಸಮಸೃಷ್ಟಿಗಳ ಯಥಾರ್ಥ ದಾಸನಾಗಿ ಮಾರ್ಪಡುವನು. ಈ ರೀತಿಯ ಒಂದು ಪರಿವರ್ತನೆ ಐಹಿಕ ಜೀವಿತದಲ್ಲಿ ಧರ್ಮಶಾಸ್ತ್ರಾನುಷ್ಠಾನದಿಂದ ಮನುಷ್ಯನಿಗೆ ಉಂಟಾಗುತ್ತದೆ.

—ಹಶ್ಮತ್ ರಶ್ ಅಹ್ಮದ್.

# ಅಹ್ಮದಿ ಪೌರರ ಕರ್ತವ್ಯಗಳು

"ಸರಕಾರಕ್ಕೆ ವಿಧೇಯತೆ ಮತ್ತು ಕಾನೂನುಗಳ ಪಾಲನೆ ಅತ್ಯಾವಶ್ಯಕವೆಂದು ಅಹ್ಮದಿಯಾ ಸಂಘಟನೆ ಗ್ರಹಿಸುತ್ತದೆ."

"ಸ್ವತಃ ಅಶಾಂತಿಕಾರಕ ಕೃತ್ಯಗಳಿಂದ ದೂರವಿದ್ದು ಇತರರನ್ನೂ ಆ ರೀತಿ ಮಾಡಲು ಪ್ರೇರೇಪಿಸುವುದು ಪ್ರತಿಯೋರ್ವ ಅಹ್ಮದಿ ಮುಸ್ಲಿಮನ ಕರ್ತವ್ಯವಾಗಿದೆ."

(ಹಜ್ರತ್ ಮಿರ್ಝಾ ನಾಸಿರ್ ಅಹ್ಮದ್ - ಖಲೀಫತುಲ್ ಮಸೀಹ್ III ರವರು ರಬ್ವಾ ನಗರದಲ್ಲಿ 25-5-1976ರಂದು ಶುಕ್ರವಾರ ಮಾಡಿದ ಪ್ರಾರ್ಥನಾ ಭಾಷಣದ ಕೆಲವು ಭಾಗಗಳು.)

"ಸತ್ಯ ವಿಶ್ವಾಸಿಗಳೇ, ನೀವು ದೇವರನ್ನೂ ದೇವರ ದೂತ (ಮುಹಮ್ಮದ್ ಪೈಗಂಬರ್)ರನ್ನೂ ಆಜ್ಞೆಗಳನ್ನೀಯಲು ನಿಮ್ಮ ಪೈಕಿ ನಿಯುಕ್ತರಾದವರನ್ನೂ ಅನುಸರಿಸಿರಿ" (ಪವಿತ್ರ ಖುರ್-ಆನ್: ಸೂರತ್ ನಿಸಾ, ವಚನ 60.)

ಪ್ರತಿಯೋರ್ವ ಮನುಷ್ಯನಿಗೆ ಹಕ್ಕುಗಳೂ ಕರ್ತವ್ಯಗಳೂ ಇವೆ. ನಾನು ಈ ದಿನ ಪ್ರತಿಯೋರ್ವ ಅಹ್ಮದಿ ಮುಸ್ಲಿಮನ ಕರ್ತವ್ಯಗಳ ಕುರಿತು ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಹಕ್ಕುಗಳು ಹಲವು ರೀತಿಯವುಗಳಾಗಿವೆ. ಪ್ರತಿಯೊಂದು ದೇಶದ ಪ್ರಜೆಗಳ ಮೇಲೆಯೂ ಪ್ರತಿಯೋರ್ವ ಅಹ್ಮದಿಯ ಮೇಲೆಯೂ ನಿರ್ಬಂಧವಾಗಿರುವ ಕರ್ತವ್ಯಗಳನ್ನು ಸಾಮಾನ್ಯವಾಗಿ "ಪೌರರ ಕರ್ತವ್ಯಗಳು" ಎಂದು ಕರೆಯುತ್ತಾರೆ. ಒಂದು ದೇಶದ ಪ್ರಜೆಗಳ ಕರ್ತವ್ಯಗಳಲ್ಲಿ ಕೆಲವು ಕರ್ತವ್ಯಗಳನ್ನು ಆ ದೇಶದ ಸರಕಾರ ಕಾನೂನುಗಳ ಮೂಲಕ ಹೊರಿಸುತ್ತದೆ; ಕೆಲವು ಕರ್ತವ್ಯಗಳನ್ನು ಇಸ್ಲಾಮಿನ ನಿಯಮ ಸಂಹಿತೆಯಾದ "ಶರೀಯತ್" ಅದನ್ನು ಅನುಸರಿಸುವವರ ಮೇಲೆ ನಿರ್ಬಂಧಗೊಳಿಸುತ್ತದೆ.

ಇಸ್ಲಾಮ್ ಪ್ರಕೃತಿ ಮತವಾದ ಕಾರಣ ಇಸ್ಲಾಮ್ ನಿರ್ದೇಶಿಸುವ ಹಲವು ಕರ್ತವ್ಯಗಳೂ ಸರಕಾರದ ಕಾನೂನುಗಳು ನಿರ್ದೇಶಿಸುವ ಕರ್ತವ್ಯಗಳೂ ಒಂದೇ ಆಗಿರುವುದು ಕಂಡು ಬರುತ್ತವೆ. ಮನುಷ್ಯನ ಪ್ರಕೃತಿಯು ಇಸ್ಲಾಮಿನಿಂದ ಹೊರಗೆ ಪೂರ್ಣವಾಗಿ ವಿಕಸಿತವಾಗಲಾರದು. ಆದುದರಿಂದಲೇ ಇಸ್ಲಾಮ್ ನಿರ್ದೇಶಿಸುವ ತತ್ವಗಳಿಗೆ ವಿರುದ್ಧವಾದ ಕರ್ತವ್ಯಗಳು ನ್ಯೂನತೆಯಿಂದ ಕೂಡಿದ್ದು ಅಪ್ರಾಯೋಗಿಕವೂ ಆಗುತ್ತವೆ. ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನ ಕುರಿತು ಮಾಡಬೇಕಾದ ಕರ್ತವ್ಯಗಳನ್ನು ಇಸ್ಲಾಮ್ ಸವಿಸ್ತಾರವಾಗಿ ವಿವರಿಸಿದೆ.

ಮನುಷ್ಯರು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲೂ ಹಕ್ಕುಗಳನ್ನು ಪಡೆಯಲೂ ಶಾಂತಿಯು ಅತ್ಯಗತ್ಯವಾಗಿದೆ. ಇದೇ ಕಾರಣದಿಂದ ಸರಕಾರವು ಗಲಭೆಯನ್ನೂ ಅಶಾಂತಿಯನ್ನೂ ನಿವಾರಿಸಲು ಸದಾ ಕಾರ್ಯತತ್ಪರವಾಗಿರುತ್ತದೆ. ಇಸ್ಲಾಮ್ ಅಶಾಂತಿಯ ವಿರುದ್ಧ ಹೋರಾಡಿ ಶಾಂತಿಸ್ಥಾಪನೆಗಾಗಿ ಧರ್ಮಯುದ್ಧ ಮಾಡಿತು. ಪವಿತ್ರ ಖುರ್-ಆನ್ ಮೊತ್ತಮೊದಲು ಸಂಬೋಧಿಸಿದ ವನ್ಯಮೃಗಗಳಂತಿದ್ದವರನ್ನು ಅದು ಮನುಷ್ಯರನ್ನಾಗಿ ಮಾಡಿತು. ಆ ಮನುಷ್ಯರನ್ನು ಅದು ಸಚ್ಚಾರಿತ್ರ್ಯವಂತರನ್ನಾಗಿಯೂ ದೈವಭಕ್ತರನ್ನಾಗಿಯೂ ಮಾಡಿತು. "ದೈವಭಕ್ತರು" ಎಂಬುದರ ಉದ್ದೇ »

ಇಂತಹ ವ್ಯಕ್ತಿಗಳು ಇತರರ ಹಕ್ಕುಗಳನ್ನು ನೆರವೇರಿಸಿ ಕೊಡಲು ಬಹಳ ಸೂಕ್ಷ್ಮವಾಗಿ ವರ್ತಿಸುತ್ತಾರೆಂದಾಗಿದೆ. ಏಕೆಂದರೆ ಭಕ್ತರು ಬಹಳ ಸೂಕ್ಷ್ಮ ಪ್ರಕೃತಿಯನ್ನು ಹೊಂದಿರುತ್ತಾರೆ. ಇವರು ತಮ್ಮ ನೆರೆಕರೆಯವರನ್ನು ಗಮನಿಸಿದರು; ತಮ್ಮ ಬಂಧುಗಳನ್ನು ಶ್ರದ್ಧೆಯಿಂದ ನೋಡಿದರು. ಕೆಲವು ಸಾರಿ ಇವರು ಪ್ರೇಮ ಪುರಸ್ಸರವಾಗಿತ್ತ ಕಾಣಿಕೆಗಳನ್ನು ಇತರರು ಸ್ವೀಕರಿಸಲು ಸಹ ಸನ್ನದ್ಧರಾಗಲಿಲ್ಲ. ಮಕ್ಕಾ ನಗರದಿಂದ ಮದೀನಾ ನಗರಕ್ಕೆ ಪಲಾಯನ ಮಾಡಿದ ಮಕ್ಕಾ ನಿವಾಸಿಗಳಾದ ಮುಸ್ಲಿಮರೂ ಮದೀನಾ ನಿವಾಸಿಗಳಾದ ಮುಸ್ಲಿಮರೂ ಭ್ರಾತೃಬಂಧವುಳ್ಳವರೆಂದು ಮುಹಮ್ಮದ್ ಪೈಗಂಬರರು ಘೋಷಿಸಿದಾಗ, ಮಕ್ಕಾ ನಿವಾಸಿಗಳಾಗಿದ್ದವರಲ್ಲಿ ಹಲವರು ತಮ್ಮ ಸಂಪತ್ತನ್ನು ತೊರೆದು ಬಂದುದರಿಂದ, ಮದೀನಾ ನಿವಾಸಿಗಳು ತಮ್ಮ ಧನಸಂಪತ್ತಿನಲ್ಲಿಯೂ ಇನ್ನು ಕೆಲವರು ತಮ್ಮ ಆಸ್ತಿಪಾಸ್ತಿಗಳಲ್ಲಿಯೂ ಮಕ್ಕಾದಿಂದ ವಲಸೆ ಬಂದವರಿಗೆ ಪಾಲು ಕೊಡಲು ಉದ್ಯುಕ್ತರಾದಾಗ ಅವರು ಈ ರೀತಿ ಹೇಳುತ್ತಾ ನಿರಾಕರಿಸಿದರು: "ನಮಗೆ ದೇವರು ನೀಡಿರುವುದರಲ್ಲಿ ನಾವು ತೃಪ್ತರಾಗುವಂತೆಯೂ ನಮಗೆ ಅನುಗ್ರಹಿಸಲಾಗಿರುವ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸುವಂತೆಯೂ ನಮಗೆ ಸಮ್ಮತಿಯನ್ನೀಯಿರಿ. ದೇವರು ನಮ್ಮ ಸ್ಥಿತಿಯನ್ನು ಸುಧಾರಿಸುವನು.'' ಕೆಲವರು ಒಂದು ಕೊಡಲಿಯನ್ನು ಕ್ರಯಕ್ಕೆ ಪಡೆದುಕೊಳ್ಳಲು ಬೇಕಾಗುವಷ್ಟು ಸಾಲಪಡೆದರು. ಇಂತಹ ಜನರಲ್ಲಿ ಕೆಲವರು ಅನಂತರ ಮದೀನದ ಪೇಟೆಯಲ್ಲಿ ಕೋಟಿಗಟ್ಟಲೆ ರೂಪಾಯಿಗಳ ಸಾಮಗ್ರಿಗಳನ್ನು ಕೊಳ್ಳುತ್ತಲೂ ಮಾರುತ್ತಲೂ ಇದ್ದರೆಂದು ಚರಿತ್ರೆಯಲ್ಲಿ ಉಲ್ಲೇಖಿತವಾಗಿದೆ. ಇಸ್ಲಾಮಿನ ಮಹಿಮೆಯ ವಿಷಯ ಬಂದ ಕಾರಣ ಅದನ್ನು ವ್ಯಕ್ತಪಡಿಸಲು ಈ ಸಂಭವಗಳನ್ನು ಹೇಳಬೇಕಾಯಿತು.

ಪೌರರ ಹಕ್ಕುಗಳು ಮತ್ತು ಕರ್ತವ್ಯಗಳ ಕುರಿತು ಇಸ್ಲಾಮ್ ಸವಿಸ್ತಾರವಾಗಿ ವಿವರಿಸಿದೆ. ತನ್ನ ಅನುಯಾಯಿಗಳ ಮನಸ್ಸಿನಲ್ಲಿ ಅವುಗಳ ಕುರಿತು ಉಂಟುಮಾಡಿದ ಪರಿವರ್ತನೆಯನ್ನು ಲೋಕದ ಸರಕಾರಗಳಿಗೆ ಮಾಡಲು ಸಾಧ್ಯವಾಗಲಿಲ್ಲ.

ಇಸ್ಲಾಮಿನ ಧರ್ಮಶಾಸ್ತ್ರದ ಪರಿಧಿಯು ವಿಶಾಲವಾಗಿದೆ. ಇದನ್ನು ಅನುಸರಿಸುವವನು ಖಂಡಿತವಾಗಿಯೂ ಸರಕಾರದ ಕಾನೂನುಗಳನ್ನು ಪಾಲಿಸುವನು. ಸರಕಾರದ ಕಾನೂನುಗಳು ಇಸ್ಲಾಮಿನ ಧಾರ್ಮಿಕ ನಿಯಮಗಳ ಪರಿಧಿಯೊಳಗೆ ಸೇರಿರುತ್ತವೆ.

ಇಸ್ಲಾಮ್ ಗಲಭೆಯನ್ನೂ ಅಶಾಂತಿಯನ್ನೂ ನಿರೋಧಿಸಿದೆ. ಇತರರ ಹಕ್ಕುಗಳನ್ನು ನೆರವೇರಿಸಿ ಕೊಡುವುದು ಮೂಲಭೂತ ಕರ್ತವ್ಯವಾಗಿದೆ. ಸ್ವತಃ ಅಶಾಂತಿಕಾರಕ ಪ್ರವೃತ್ತಿಗಳನ್ನು ಮಾಡಬಾರದೆಂದೂ ಇತರರನ್ನು ಗಲಭೆಗಳಿಂದ ತಡೆಯಬೇಕೆಂದೂ ಇಸ್ಲಾಮ್ ಆಜ್ಞಾಪಿಸುತ್ತದೆ. ಪ್ರತಿಯೊಬ್ಬ ಮುಸ್ಲಿಮನು ನೂರಾರು ಕರ್ತವ್ಯಗಳನ್ನು ಪಾಲಿಸಬೇಕಾಗಿದೆ. ನಾನು ಉದಾಹರಣೆಗಾಗಿ ಈ ಕರ್ತವ್ಯದ ಕುರಿತು ಹೇಳುವುದಾಗಿದೆ: ನಾವು ಸ್ವತಃ ಅಶಾಂತಿಕಾರಕ ಕೃತ್ಯಗಳಿಂದ ದೂರ ಸರಿಯುವುದು ಮಾತ್ರವಲ್ಲದೆ ಇತರರು ಸಹ ಅಶಾಂತಿಯನ್ನುಂಟುಮಾಡಲು ಪ್ರಯತ್ನಿಸದಂತಹ ಪರಿಸರವೇರ್ಪಟ್ಟು ಅವರು ಸಹ ತಮ್ಮ ಕರ್ತವ್ಯಗಳ ಕುರಿತು ಪ್ರಜ್ಞೆಯುಳ್ಳವರಾಗುವಂತೆ ಮಾಡಿ, ಪೌರರ ಹಕ್ಕುಗಳನ್ನು ಪಡೆಯಲು ಶಾಂತ ಪರಿಸ್ಥಿತಿ ಅತ್ಯಾವಶ್ಯಕವೆಂದೂ ಗಲಭೆ ಮತ್ತು ದೊಂಬಿಯ ವಾತಾವರಣದಲ್ಲಿ ನಾಗರಿಕ ಹಕ್ಕುಗಳನ್ನು ಪಡೆಯಲಸಾಧ್ಯವೆಂದೂ ಅವರು ಮನಗಾಣುವಂತೆ ಮಾಡುವುದು ಅತ್ಯಗತ್ಯವಾಗಿದೆ.

ಒಬ್ಬ ಅಹ್ಮದಿ ಮುಸ್ಲಿಮನ ಎರಡನೆಯ ಕರ್ತವ್ಯ ದೇಶದ ಕಾನೂನುಗಳನ್ನು ಸರಿಯಾಗಿ ಪರಿಪಾಲಿಸುವುದಾಗಿದೆ. ಇದಕ್ಕೆ ಬೇಕಾಗಿ ನಮ್ಮನ್ನು ನಮ್ಮ ಸಂಘಟನೆಯ ಆರಂಭದಿಂದಲೇ ತರಬೇತುಗೊಳಿಸಲಾಗಿದೆ. ನಮ್ಮ ಕುರಿತು LAW ABIDING PEOPLE (ಕಾನೂನುಗಳನ್ನು ಪಾಲಿಸುವ ಜನತೆ) ಎಂದು ಹೇಳಬಹುದಾಗಿದೆ. ಕಾನೂನುಗಳ ಪಾಲನೆ ಎಂಬ ಕರ್ತವ್ಯದ ಜೊತೆಗೆ ಕಾನೂನು ಯಾರಿಗೆ ರಾಜ್ಯ ವ್ಯವಸ್ಥೆ ನಡೆಸಲು ಅಧಿಕಾರ ಕೊಟ್ಟಿದೆಯೋ ಅವರನ್ನು ಸಹ ಕಾನೂನಿನ ಪರಿಧಿಯೊಳಗೆ ಅನುಸರಿಸಬೇಕೆಂಬ ಮೂರನೆಯ ಕರ್ತವ್ಯವನ್ನು ಸಹ ನಾವು ಪಾಲಿಸಬೇಕಾಗಿದೆ. ಇಂತಹ ಅಧಿಕಾರಿಗಳು ಕಾನೂನಿಗೆ ವಿರೋಧವಾಗಿ ಯಾವುದೇ ಕೆಲಸ ಮಾಡಬಾರದು ಮತ್ತು ಕಾನೂನಿಗೆ ವಿರೋಧವಾಗಿ ಯಾವುದೇ ಆಜ್ಞೆ ಮಾಡಬಾರದು. ಇಂತಹ ಅಧಿಕಾರಿಗಳ ಆಜ್ಞೆಗಳನ್ನು ಸ್ವೀಕರಿಸುವುದು ನಮ್ಮ ಕರ್ತವ್ಯವಾಗಿದೆ.

ರಾಜ್ಯವ್ಯವಸ್ಥೆಯು ಹೊಣೆಹೊತ್ತ ಅನುಸರಣೀಯರಾದ ಅಧಿಕಾರಿಗಳು ಮಾಡುವ ಆಜ್ಞೆಗಳು–ನಮ್ಮ ಧರ್ಮಶಾಸ್ತ್ರಕ್ಕೆ ವಿರುದ್ಧವಲ್ಲದ ಎಲ್ಲಾ ಆಜ್ಞೆಗಳು–ಅನುಸರಿಸಲ್ಪಡಬೇಕಾಗಿವೆ.

ಆದರೆ ನಮ್ಮ ಧರ್ಮಶಾಸ್ತ್ರಕ್ಕೆ ವಿರುದ್ಧವಾದ ಯಾವುದೇ ಆಜ್ಞೆಯನ್ನು ಪಾಲಿಸಬಾರದು. ಉದಾಹರಣೆಗಾಗಿ ಆಫ್ರಿಕದ ವಿಗ್ರಹಾರಾಧಕ ಸರಕಾರವೊಂದು, "ನಾವು ಕೆತ್ತಿದ ಕಲ್ಲಿನ ವಿಗ್ರಹದ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿರಿ'' — ಎಂದರೆ ಆ ಆಜ್ಞೆಯನ್ನು ಪಾಲಿಸಬಾರದು. ಇದೇ ರೀತಿ ಒಂದು ಸರಕಾರವು, "ಗೋರಿಯ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿರಿ'' ಎಂದು ಆಜ್ಞಾಪಿಸಿದರೆ ಏಕದೈವಾರಾಧಕನಾದ ಮುಸ್ಲಿಮನು ಈ ಆಜ್ಞೆಯನ್ನು ಪಾಲಿಸಲು ಎಂದಿಗೂ ಸಿದ್ಧನಾಗಲಾರ. ಈಗಿನ ಕಾಲದಲ್ಲಿ ಪ್ರಪಂಚಾದ್ಯಂತ ಉಂಟಾಗಿರುವ ರಾಜಕೀಯ ಪ್ರಜ್ಞೆಯ ಕಾರಣದಿಂದಾಗಿ ಮನುಷ್ಯ ಸ್ವಭಾವಕ್ಕೆ ವಿರುದ್ಧವಾದ ಇಂತಹ ಕಾನೂನುಗಳನ್ನು ಯಾವುದೇ ಸರಕಾರ ಮಾಡಬಹುದೆಂದು ನಾನು ಗ್ರಹಿಸುವುದಿಲ್ಲ. ಒಟ್ಟಾರೆ ಹೇಳುವುದಾದರೆ ನಮ್ಮ ಧರ್ಮಶಾಸ್ತ್ರಕ್ಕೆ ವಿರುದ್ಧವಲ್ಲದ ಎಲ್ಲಾ ಸರಕಾರೀ ಆಜ್ಞೆಗಳನ್ನು ಪಾಲಿಸುವುದು ನಮ್ಮ ಕರ್ತವ್ಯವಾಗಿದೆ.

ಅಹ್ಮದಿ ಮುಸ್ಲಿಮರು ಯಾವುದೇ ರಾಷ್ಟ್ರದಲ್ಲಿ ಜೀವಿಸುತ್ತಿರಲಿ, ಯಾವುದೇ ರಾಷ್ಟ್ರದ ಪ್ರಜೆಯಾಗಿರಲಿ ಅವರು ಆಯಾ ರಾಷ್ಟ್ರಗಳ ದೇಶಭಕ್ತರಾಗಿ ಜೀವಿಸುತ್ತಿರುವರು. ರಾಷ್ಟ್ರ ದ್ರೋಹದ ಕುರಿತು ನಮಗೆ ಊಹಿಸಲು ಸಹ ಸಾಧ್ಯವಿಲ್ಲವೆಂದು ನಾವು ದೃಢವಾಗಿ ನಂಬಿದ್ದೇವೆ. ನಮ್ಮನ್ನು ಇತರರು ಎಷ್ಟು ಬೇಕಾದರೂ ಅಪಹಾಸ್ಯ ಮಾಡಿದರೂ ನಮ್ಮನ್ನು ನಿಕೃಷ್ಟ ದೃಷ್ಟಿಯಿಂದ ನೋಡಿದರೂ ದೇಶದ ದೃಢತೆ, ಸರಕಾರದ ಅಭಿವೃದ್ಧಿ ಮತ್ತು ಸರಕಾರವನ್ನು ವಿದ್ರೋಹಗಳಿಂದ ರಕ್ಷಿಸುವುದು ಇವುಗಳ ಅತ್ಯಧಿಕ ಜವಾಬ್ದಾರಿ ಅಹ್ಮದಿಯ ಸಂಘಟನೆ ಮತ್ತದರ ಸದಸ್ಯರ ಮೇಲಿದೆಯೆಂದು ನಾವು ದೃಢವಾಗಿ ನಂಬುತ್ತೇವೆ. ಇದಕ್ಕೆ ಸಹಾಯ ರೂಪವಾಗಿ ನಾವು ದೇವರ ಸಹಾಯವನ್ನು ಸದಾ ಯಾಚಿಸುತ್ತೇವೆ. ದೇವರು ಭಕ್ತರ ಬೇಡಿಕೆಗಳನ್ನು ಎಂದಿಗೂ ತಿರಸ್ಕರಿಸುವುದಿಲ್ಲ.

ಅಹ್ಮದಿ ಮುಸ್ಲಿಮರು ಎಂದಿಗೂ ರಾಷ್ಟ್ರದ್ರೋಹಿಗಳಾಗಲಾರರು. ಅವರು ಸದಾ ದೇಶಭಕ್ತರಾಗಿರುವರು. ಬೇರೆ ಬೇರೆ ದೇಶಗಳ ನಿವಾಸಿಗಳ ಯೋಚನೆಗಳಲ್ಲಿ ವ್ಯತ್ಯಾಸವಿರಬಹುದು; ರಾಜಕೀಯ ವೇದಿಕೆಗಳಲ್ಲಿ ಮತ್ತು ಯೋಜನೆಗಳಲ್ಲಿ ವ್ಯತ್ಯಾಸವಿರಬಹುದು. ನಮ್ಮದು ರಾಜಕೀಯ ಸಂಘಟನೆಯಲ್ಲ; ನಮ್ಮದು ಬರೇ ಧಾರ್ಮಿಕ ಸಂಘಟನೆಯಾಗಿದೆ. ದೇವರೊಡನೆ ಪ್ರಾರ್ಥನೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ನಾವು ದೇವರಿಂದ ಪಡೆಯುವುದೆಲ್ಲವೂ ಆತನ ಅನುಗ್ರಹದಿಂದಲೇ ಹೊರತು ನಮ್ಮ ಯೋಗ್ಯತೆಯ ಕಾರಣದಿಂದಲ್ಲ. ದೇವರ ಬಾಗಿಲಿನಲ್ಲಿ ತಟ್ಟಿದರೆ ಖಂಡಿತವಾಗಿಯೂ ಆ ಬಾಗಿಲು ತೆರೆಯಲ್ಪಡುವುದೆಂದು ನಮ್ಮ ಅನುಭವದಿಂದ ತಿಳಿದುಬಂದಿದೆ. ನಮ್ಮ ಪ್ರಾರ್ಥನೆಗಳನ್ನು ನಮ್ಮ ಸ್ವಂತ ಕೋರಿಕೆಗಳಿಗಾಗಿ ಮಾತ್ರ ಸೀಮಿತಗೊಳಿಸದೆ ನಮ್ಮ ನಮ್ಮ ದೇಶ ಬಲಶಾಲಿಯಾಗಿ ಅಭಿವೃದ್ಧಿ ಹೊಂದಲಿಯೆಂದೂ, ಸುಖಶಾಂತಿ ನೆಲಸಿ ಅದರಲ್ಲಿರುವ ಪ್ರತಿಯೊರ್ವ ಪ್ರಜೆಗೆ ಇತರರು ಹಕ್ಕುಗಳನ್ನು ನೆರವೇರಿಸಿಕೊಡುವಂತಹ ಮತ್ತು ಯಾವುದೇ ವ್ಯಕ್ತಿ ಮರ್ದಿಸಲ್ಪಡದಂತಹ ಮತ್ತು ಹಿಂಸೆಯು ನಿಶ್ಶೇಷವಾಗಿ ನಶಿಸಿದ ಸಮಾಜವು ಸ್ಥಾಪಿತವಾಗಲಿಯೆಂದೂ ಪ್ರಾರ್ಥಿಸುವ.

—0—0—0—

Phone: 73196 Phone Branch: 75894

ಉತ್ತಮ ತರದ ಮರಗೆಣಸಿನ ಚಿಪ್ಸ್ ಮತ್ತು ಹಿಟ್ಟಿನ ರಖಂ ವ್ಯಾಪಾರಸ್ಥರು

KESSEE TRADING CORPORATION

Dealers in: **Tapioca** Chips & Flour

**9/135, Gunny Street, CALICUT - 1.**

# ಹಜ್ ಕರ್ಮಾನುಷ್ಠಾನದ ಮಹತ್ವ

—ಮೌಲಾನಾ ಅಬ್ದುಲ್ಲಾ ಸಾಹೇಬ್ H. A.

ಸೃಷ್ಟಿಕರ್ತನೂ ರಕ್ಷಕನೂ ಆದ ದೇವರೊಡನೆ ಮನುಷ್ಯರಿಗಿರುವ ಭಕ್ತಿ, ಪ್ರೇಮ, ಕೃತಜ್ಞತೆ ಎಂಬಿತ್ಯಾದಿ ಮನೋಭಾವಗಳನ್ನು ಮಾತಿನಿಂದಲೂ ಪ್ರವೃತ್ತಿಯಿಂದಲೂ ಪ್ರಕಟಿಸಿ ಅವನ ಪ್ರೀತಿಯನ್ನೂ ಸಾಮೀಪ್ಯವನ್ನೂ ಸಂಪಾದಿಸಲಿಕ್ಕಾಗಿ ಇಸ್ಲಾಂ ಮತವು ನಿರ್ದೇಶಿಸಿದ ಕರ್ಮಮಾರ್ಗಗಳಲ್ಲೊಂದು ಹಜ್. ಮನುಷ್ಯನ ಜೀವಿತೋದ್ದೇಶ 'ಇಬಾದತ್' ಎಂಬ ಸೇವೆಯೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಇಬಾದತ್ ಎಂದರೆ ದೇವರಿಗೆ ಸಂಪೂರ್ಣ ವಿಧೇಯನಾಗಿ, ಅವನೊಡನೆ ಪರಮ ಸ್ನೇಹವನ್ನೂ ಭಕ್ತಿಯನ್ನೂ ತ್ರಿವಿಧಕರಣಗಳಿಂದ ಪ್ರದರ್ಶಿಸಿ ಅವನ ಪವಿತ್ರ ಗುಣಗಳನ್ನು ತನ್ನಲ್ಲಿ ಪ್ರತಿಫಲಿಸಲಿಕ್ಕಾಗಿ ಮನುಷ್ಯನು ಮಾಡಬೇಕಾದ ದಾಸ್ಯವೃತ್ತಿಯಾಗಿದೆ. ಈ ಪರಮವಾದ ಭಕ್ತಿಮಾರ್ಗದಲ್ಲಿ ಚಲಿಸುವವನು ಯಥಾರ್ಥ 'ಅಬ್ದುಲ್ಲಾ' ಅಥವಾ ದೇವದಾಸ. ಇಂತಹ ದೇವದಾಸರಲ್ಲಿ ಅಗ್ರಗಣ್ಯರಾದ ಮುಹಮ್ಮದ್ ನಬಿಯವರನ್ನು ಕುರಿತು ಪವಿತ್ರ ಖುರ್‌ಆನ್ ಪ್ರಸ್ತಾವಿಸಿದ್ದು 'ಅಬ್ದ್' (ದಾಸ) ಎಂಬ ಸ್ಥಾನಿಕ ಹೆಸರಿನಲ್ಲಾಗಿದೆ. ಓರ್ವ 'ಅಬ್ದ್‌ನ' ಕರ್ತವ್ಯವೇನೆಂದರೆ "ಸರ್ವಸ್ವವನ್ನೂ ಲೋಕನಾಥನಲ್ಲಿ ಸಮರ್ಪಿಸಿ ಅವನ ಇಚ್ಛೆಗೆ ಪೂರ್ಣವಾಗಿ ವಿಧೇಯನಾಗುವುದು" ಎಂದು ಖುರ್‌ಆನ್ ಘೋಷಿಸುತ್ತದೆ. ಈ ರೀತಿಯಲ್ಲಿ ಪರಿಶುದ್ಧ ಜೀವಿತವನ್ನು ನಡೆಸಿ ದೈವಸಾಮೀಪ್ಯವನ್ನು ಸಂಪಾದಿಸಿರುವ ಮಹಾತ್ಮರ ಸ್ಮರಣೆಗಳನ್ನು ಪುನರುಜ್ಜೀವನಗೊಳಿಸಿ ಅವರ ಹಾಗೆ ಪರಿಶುದ್ಧರಾಗಬೇಕೆಂಬ ವಾಂಛೆಯನ್ನು ಸೃಷ್ಟಿಸಿ, ಅವರ ಸ್ಮರಣೆಯನ್ನು ಲೋಕದಲ್ಲಿ ನೆಲೆನಿಲ್ಲಿಸಲು ಎಂತಹ ತ್ಯಾಗವನ್ನೂ ಮಾಡಲು ಸನ್ನದ್ಧತೆಯನ್ನು ಉಂಟುಮಾಡುವ ಒಂದು ಕರ್ಮಸಮುಚ್ಚಯವಾಗಿದೆ ಹಜ್. ಹಝ್ರತ್ ಇಬ್ರಾಹಿಂ ಪ್ರವಾದಿ ಸ್ವಂತ ಪತ್ನಿಯನ್ನೂ ವಾರ್ಧಕ್ಯ ಕಾಲದಲ್ಲಿ ತನಗುಂಟಾದ ಏಕ ಪುತ್ರನನ್ನೂ ದೈವಾಜ್ಞೆಯ ಪ್ರಕಾರ, ಮೇಲೆ ಅತ್ಯುಷ್ಣಕರವಾದ ಸೂರ್ಯಕಿರಣಗಳಿಂದಲೂ ಕೆಳಗೆ ಸುಡುವ ಮರಳರಾಶಿಯ ಹೊರತು ನೀರಿನ ಹನಿಯಾಗಲೀ, ಹಸಿರು ಚಿಗುರಿದ ಸ್ಥಳವಾಗಲೀ, ಇಲ್ಲದ ಒಂದು ಮರಳಗಾಡಿನಲ್ಲಿ ಬಿಟ್ಟು ಒಂದಕ್ಷರವನ್ನೂ ಉಸುರದೆ ಹಿಂತಿರುಗಿದರು. ಅವರ ಈ ವರ್ತನೆ ದೈವಾಜ್ಞೆಯನ್ನನುಸರಿಸಿಯಾಗಿದೆಯೋ ಎಂದು ಪತ್ನಿ ಹಾಜಿರಾ ಕೇಳಿದಾಗ ಅವರು 'ಹೌದು' ಎಂಬರ್ಥದ ಸಂಜ್ಞೆಯನ್ನು ಮಾಡಿ ವ್ಯಾಕುಲಚಿತ್ತನಾಗಿ ವಾಪಾಸು ಬಂದುಬಿಟ್ಟರು. ವಿಜನವೂ ಫಲಶೂನ್ಯವೂ ಆಗಿದ್ದ ಆ ಮರಳಗಾಡಿನಲ್ಲಿ ಹಝ್ರತ್ ಹಾಜಿರಾ ಮತ್ತು ಪುತ್ರ ಇಸ್ಮಾಯೀಲ್ ಹಲವಾರು ದುಃಖಗಳನ್ನೂ ಕಷ್ಟತೆಗಳನ್ನೂ ಅನುಭವಿಸಬೇಕಾಯಿತು. ಈ ರೀತಿಯಲ್ಲಿ ಇಬ್ರಾಹಿಂ ಪ್ರವಾದಿಯವರು ತನ್ನ ಪುತ್ರನನ್ನು ದೇವರಿಗಾಗಿ ಬಲಿಮಾಡಲು, ಪುತ್ರನು ಅದಕ್ಕೆ ವಿಧೇಯನಾದನು; ಮಾತೆ ಸಂತೃಪ್ತಿಯನ್ನು ತೋರ್ಪಡಿಸಿದಳು. ತನ್ಮೂಲಕ ಇಸ್ಮಾಯೀಲ್ ಪ್ರವಾದಿಗೆ ಮಾನಸಿಕವೂ ಆತ್ಮಿಕವೂ ಆದ ಉತ್ಕರ್ಷತೆಗಳು ಸಿದ್ಧಿಸಿದುವು. ಈ ಮಹತ್ತರದ ಸಂಭವಗಳ ನೆಲವೀಡಾಗಿದೆ ಇಂದಿನ ಮಕ್ಕಾ ಪಟ್ಟಣ. ಇಸ್ಮಾಯೀಲ್ ಪ್ರವಾದಿಯ ಸಂತತಿಗಳಲ್ಲಿ ಸೇರಿದ ಮುಹಮ್ಮದ್ ಪೈಗಂಬರರ ಜನ್ಮದೇಶವೂ ತಾನು ಪ್ರವಾದಿಯೆಂದು ಘೋಷಿಸಿದ ನಂತರದ ಹದಿಮೂರು ವರ್ಷಗಳ ಕಾಲ ಪೈಗಂಬರರ ತ್ಯಾಗಪರವಾದ ಮಹತ್ ಪ್ರವರ್ತನೆಗಳ ಕೇಂದ್ರವೂ ಸಹ ಇದೇ ಪಟ್ಟಣವಾಗಿದೆ. ಸತ್ಯಮಂತ ಪ್ರಬೋಧನೆಯ ಹೇತುವಾಗಿ ಈ ಪಟ್ಟಣವಾಸಿಗಳ ಕೈಗಳಿಂದ ಪೈಗಂಬರರಿಗೆ ಹಲವಿಧ ಕಷ್ಟನಷ್ಟಗಳನ್ನು ಅನುಭವಿಸಬೇಕಾಯಿತು. ಇಂತಹ ಪವಿತ್ರ ಸ್ಮರಣೆಗಳಿಂದ ಕೂಡಿದ ಪಟ್ಟಣದಲ್ಲಿ, ಸ್ವಂತ ನಾಡು, ಬೀಡು, ಕುಟುಂಬಗಳನ್ನು ಬಿಟ್ಟು ಯಾತ್ರಾಕ್ಲೇಶಗಳನ್ನು ಸಹಿಸಿ ಬಂದು ತಲುಪುವ ಪ್ರತಿಯೊಬ್ಬನ ಹೃದಯ ಭಕ್ತಿಭರಿತವಾಗುತ್ತದೆ. ಪೈಗಂಬರರು ತನ್ನಿಂದ ಪ್ರಬೋಧಿಸಲ್ಪಟ್ಟ ಇಸ್ಲಾಂ ಮತವನ್ನು ಶತ್ರುವಿನಿಂದ ಸಂರಕ್ಷಿಸಲಿಕ್ಕಾಗಿ ಚಿಂತಾಕುಲನಾಗಿ ಅದರ ಸುತ್ತು ಕಾವಲು ನಡೆಸಿದ ಪ್ರಕಾರ ಪ್ರತಿಯೊಬ್ಬ ಹಜ್

ಕರ್ಮಾನುಷ್ಠಾನಿ ಸಹ ಪಾದರಕ್ಷೆ ಇಲ್ಲದೆಯೂ, ತಲೆಯನ್ನು ಮುಚ್ಚದೆಯೂ, ಒಂದೇ ರೀತಿಯ ಎರಡು ವಸ್ತ್ರಗಳನ್ನು ಮಾತ್ರ ಧರಿಸಿ ಇಸ್ಲಾಂಮತದ ಕೇಂದ್ರವಾದ 'ಕಅಬಾ'ದ ಸುತ್ತಲೂ ಪ್ರದಕ್ಷಿಣೆ ಬರುತ್ತಾನೆ. ಇದೇ ರೀತಿಯಲ್ಲಿ ಹಝ್‌ರತ್ ಹಾಜಿರಾ, ತಾನು ಮತ್ತು ತನ್ನ ಮಗನು ಬಾಯಾರಿಕೆಯಿಂದ ಬಳಲಿ ಬೆಂಡಾದಾಗ ನೀರನ್ನು ಹುಡುಕಿ ಅದರ ಪರಿಸರಗಳಲ್ಲಿ ಮತ್ತು ಗುಡ್ಡ ಪ್ರದೇಶಗಳಲ್ಲಿ ಓಡಿ ನಡೆದಾಡಿದ ಸ್ಮಾರಕವಾಗಿ ಹಜ್ ಕರ್ಮಾನುಷ್ಠಾನಿ ಆ ಸ್ಥಳಗಳಲ್ಲಿ ಓಡಿ ನಡೆದಾಡಿ ಅವರ ಸ್ಮರಣೆಯನ್ನು ತನ್ನ ಹೃದಯದಲ್ಲಿ ಸ್ಥಾಯಿಯಾಗಿರಿಸುತ್ತಾನೆ. ಹೀಗೆ ಆ ಮಹಾತ್ಮರ ಜೀವಿತದ ಕಷ್ಟಾನುಭವಗಳನ್ನೂ ಅವರ ಪರಿತ್ಯಾಗಗಳನ್ನೂ ಹಜ್ ಕರ್ಮಾನುಷ್ಠಾನಿ ತನ್ನ ವರ್ತನೆಗಳಿಂದ ರೂಪಕೊಟ್ಟು ಯಾವುದೇ ಬಗೆಯ ತ್ಯಾಗಕ್ಕೆ ತಾನು ಸನ್ನದ್ಧನೆಂದು ಪ್ರಕಟಗೊಳಿಸುತ್ತಾನೆ. ಸಹೃದಯನಾದ ಒಬ್ಬ ಸತ್ಯವಿಶ್ವಾಸಿಗೆ ತನ್ನ ಸ್ನೇಹಾದರಕ್ಕೆ ಪಾತ್ರರಾದ ಮಹಾತ್ಮರ ಸ್ಮಾರಕ ಸ್ಥಳಗಳನ್ನು ಸಂದರ್ಶಿಸುವಾಗ ಪರಿಶುದ್ಧವಾದ ಅನುಭವಗಳೂ ಸತ್ಕರ್ಮ ಪ್ರೀತಿಯೂ ದೈವಭಕ್ತಿಯೂ ಉಂಟಾಗುವುದು ಮಾತ್ರವಲ್ಲ ದೇವರ ಮಹಾತ್ಮೆಗಳು ಗೋಚರವಾಗುತ್ತವೆ. ಈ ರೀತಿಯ ಮನೋದ್ವೇಗದಿಂದಲೂ ಆತ್ಮಿಕ ಚಿಂತನೆಗಳಿಂದಲೂ ಭಕ್ತಿ ಮತ್ತು ವಿನಯಾನುಸರಣೆಗಳನ್ನು ಹೆಚ್ಚಿಸಿ ಪರಮಾತ್ಮನ ಪ್ರೀತಿಗೆ ಪಾತ್ರರಾಗಿ ಅವನ ಸಾಮೀಪ್ಯವನ್ನು ಪಡೆಯುವುದು ಹಜ್ ಕರ್ಮಾನುಷ್ಠಾನದ ಉದ್ದೇಶವಾಗಿದೆ. ದೈವಿಕ ಮಹತ್ವಗಳು ಪ್ರಕಟವಾದ ಸ್ಥಳಗಳನ್ನು ಸಂದರ್ಶಿಸಿ, ಅದಕ್ಕೆ ಕಾರಣಭೂತರಾದ ಮಹಾತ್ಮರ ಪ್ರವೃತ್ತಿಗಳನ್ನು ಅಂತರ್ ದೃಷ್ಟಿಯಿಂದ ಕಾಣುವಾಗ ಹಜ್ ಕರ್ಮಾನುಷ್ಠಾನಿಗೆ ಒಂದು ಕಡೆಯಲ್ಲಿ ದೇವರೊಡನೆ ತೀವ್ರ ಭಕ್ತಿಯೂ ಇನ್ನೊಂದು ಕಡೆಯಲ್ಲಿ ಆ ಮಹಾತ್ಮರಲ್ಲಿ ದೃಢ ವಿಶ್ವಾಸವೂ ಅವರ ಸ್ಮರಣೆಯನ್ನು ಲೋಕದಲ್ಲಿ ಬಾಕಿಯಾಗಿರಿಸಿ ಅವರ ಯಥಾರ್ಥ ಅನುಚರರಾಗಬೇಕೆಂಬ ಪ್ರಜ್ಞೆಯೂ ಉಂಟಾಗುತ್ತದೆ. ಹೀಗಿರುವ ಪ್ರಜ್ಞೆಯು ಒಬ್ಬನ ಹೃದಯದಲ್ಲಿ ಹುಟ್ಟುವಾಗ ಅದು ಅವನ ಆತ್ಮಿಕಾಭ್ಯುದಯಕ್ಕೆ ಕಾರಣವಾಗುವುದು. ಒಬ್ಬ ಯಥಾರ್ಥ ಭಕ್ತನಿಗೆ ದೇವರ ಮಹಿಮಾ ವಿಲಾಸಗಳುಂಟಾಗಿರುವ ಸ್ಥಳಗಳೊಡನೆ ತನಗಿರುವ ಬಹುಮಾನಾದರತೆಗಳನ್ನು ಹಜ್ ಕರ್ಮಾನುಷ್ಠಾನಿ ಸಹ ತನ್ನ ವರ್ತನೆ ಮೂಲಕ ತೋರಿಸುತ್ತಾನೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ವಿವಿಧ ದೇಶಗಳ ಜನರು ರಾಜ-ಪ್ರಜೆ, ಧನಿಕ-ದರಿದ್ರ, ದೊಡ್ಡವ-ಸಣ್ಣವ ಕರಿಯ-ಬಿಳಿಯ ಎಂಬಿತ್ಯಾದಿ ವ್ಯತ್ಯಾಸವಿಲ್ಲದೆ ಪ್ರಾಪಂಚಿಕ ವಿಷಯಗಳನ್ನೆಲ್ಲಾ ತ್ಯಜಿಸಿ ಒಂದೇ ರೀತಿಯ ಉಡುಪಿನಲ್ಲಿ ಒಂದೇ ಉದ್ದೇಶದಿಂದ ಒಂದು ಸ್ಥಳದಲ್ಲಿ ಸಮ್ಮೇಳಿಸಿ ಧ್ಯಾನಗಳಿಂದಲೂ ಸ್ತೋತ್ರಗಳಿಂದಲೂ ಏಕನಾದ ಭಗವಂತನನ್ನು ಏಕರೀತಿಯಲ್ಲಿ ಭಜಿಸಿ, ಗತಿಸಿದ ಮಹಾತ್ಮರ ಮಹಾ ಪ್ರವೃತ್ತಿಗಳನ್ನು ಸ್ಮರಿಸುವುದರಿಂದ ಅವರು ದೈವೇಕತ್ವವನ್ನೂ ಮನುಷ್ಯ ಸಮತ್ವವನ್ನೂ ಪ್ರಾಯೋಗಿಕವನ್ನಾಗಿ ಮಾಡಿ, ಆತ್ಮಿಕ ಹಾಗೂ ಭೌತಿಕವಾದ ಎಲ್ಲಾ ವಿಧ ಉನ್ನತಿಗಳಿಗೂ ತ್ಯಾಗಗಳು ಅತ್ಯಾವಶ್ಯಕವೆಂದೂ, ತಾವು ಅಂತಹ ತ್ಯಾಗಗಳಿಗೆ ಸನ್ನದ್ಧರೆಂದೂ ವ್ಯಕ್ತಗೊಳಿಸುತ್ತಾರೆ. ಹೀಗೆ ವ್ಯಷ್ಟಿಯಾಗಿಯೂ ಸಮಷ್ಟಿಯಾಗಿಯೂ ಇರುವ ಒಂದು ಧಾರ್ಮಿಕ ವಿಧಿಗೆ ಹಜ್ ಕರ್ಮ ನಮ್ಮನ್ನು ಸಹಾಯಿಸುತ್ತದೆ. ಮಾತ್ರವಲ್ಲ, ವಿವಿಧ ದೇಶಗಳ ನಾನಾ ತರದ ಜನರ ಸಂಪರ್ಕದಿಂದ ಪರಸ್ಪರ ಪರಿಚಯವೂ ಮೈತ್ರಿಭಾವವೂ ಉಂಟಾಗುತ್ತದೆ; ಒಂದು ದೇಶದವರಿಗೆ ಇತರ ದೇಶದವರ ಸದ್ಗುಣಗಳನ್ನು ಪಡೆಯಲೂ ದುರ್ಗುಣಗಳನ್ನು ತ್ಯಜಿಸಲೂ ಸಾಧ್ಯವಾಗುತ್ತದೆ; ತನ್ಮೂಲಕ ಸಮುದಾಯಕ್ಕೆ ಒಂದು ಪರಿಷ್ಕೃತಿ ಲಭಿಸುತ್ತದೆ. ಒಟ್ಟಾರೆ, ಮುಸ್ಲಿಮರೆಲ್ಲಾ ಸಮಭಾವನೆಯಿಂದಲೂ ಸಹೋದರ ಸ್ನೇಹದಿಂದಲೂ ಒಂದೇ ದಾರದಿಂದ ಎಂಬಂತೆ ಪೋಣಿಸಲ್ಪಡಲು ಹಜ್ ಕರ್ಮ ಸಹಕಾರಿಯಾಗಿದೆ ಎಂದು ಹೇಳಬಹುದು.

# ಇಸ್ಲಾಂ - ನವೀನ ಪಾಶ್ಚಾತ್ಯರ ನೋಟದಲ್ಲಿ

★ ಗ್ರಂಥಕರ್ತೆ: ಪ್ರೊಫೆಸರ್ ಲೋರಾ ವಿ. ವಾಗ್ಲಿಯೇರಿ

ನೇಪಲ್ಸ್ ಯುನಿವರ್ಸಿಟಿಯ ಅರೆಬಿಕ್-ಮುಸ್ಲಿಂ ಚರಿತ್ರೆ ವಿಭಾಗಗಳಲ್ಲಿ ಪ್ರೊಫೆಸರ್ ಆಗಿದ್ದ ಪ್ರಸಿದ್ಧ ಗ್ರಂಥಕರ್ತೆ ಡಾ। ಲೋರಾ ವಿ. ವಾಗ್ಲಿಯೇರಿ, Apologia dell' Islamismo ಎಂಬ ಹೆಸರಿನಲ್ಲಿ ಇಟಾಲಿಯನ್ ಭಾಷೆಯಲ್ಲಿ ಬರೆದ ಈ ಗ್ರಂಥವನ್ನು ರೋಮಿನ A. F. Formiggini ಪ್ರಥಮವಾಗಿ ಪ್ರಕಟಿಸಿದರು. ಅನಂತರ ಅಮೇರಿಕದ ಹಾವರ್ ಫೋರ್ಡ್ ಕಾಲೇಜಿನ (ಪೆನ್ಸಿಲ್‌ವೇನಿಯಾ) Dr. Aldo Caselli PhD. (Econ) ಅವರು An Interpretation of Islam ಎಂಬ ಹೆಸರಿನಲ್ಲಿ ಇದನ್ನು ಇಂಗ್ಲಿಷಿಗೆ ಭಾಷಾಂತರಿಸಿದರು. 1957ರಲ್ಲಿ ವಾಷಿಂಗ್‌ಟನಿನ ಅಹ್ಮದಿಯಾ ಫರ್ಖುಲ್ ಮಸೀದಿಯವರು ಇಂಗ್ಲಿಷ್ ಭಾಷಾಂತರವನ್ನು ಪ್ರಥಮವಾಗಿ ಪ್ರಕಟಿಸಿದರು. ಇಂಗ್ಲಿಷ್ ಭಾಷಾಂತರದಿಂದ ಇದು ಕನ್ನಡಕ್ಕೆ ಅನುವಾದಿಸಲ್ಪಟ್ಟಿದೆ.

—ಸಂಪಾದಕ.

## ಅಧ್ಯಾಯ 1

## ಇಸ್ಲಾಮ್ ಧರ್ಮದ ಕ್ಷಿಪ್ರ ಪ್ರಸರಣೆ

ನಾಗರಿಕತೆ ಮತ್ತು ಮಾನವ ವಿಚಾರಧಾರೆಗಳ ಕೂಡು ರಸ್ತೆಗಳಿಂದ ದೂರವಿದ್ದ ಅಸಂಸ್ಕೃತ ಜನರಿಂದ ತುಂಬಿದ್ದ ಒಣಬರಡು ಭೂಮಿಯಲ್ಲಿ, ಇಸ್ಲಾಮ್ ಧರ್ಮವು ಶುದ್ಧೀಕೃತವೂ ನಿರ್ಮಲವೂ ಆದ ನೀರಿನ ಒಸರಿನಂತೆ ವೃದ್ಧಿಗೊಂಡಿತು. ಈ ನೀರ ಒರತೆಯು ಹಿರಿಯ ಪ್ರಮಾಣದಿಂದಾಗಿ ಅದೊಂದು ಹಳ್ಳವಾಯಿತು, ಅನಂತರ ನದಿಯಾಯಿತು, ಅನಂತರ ಅದು ಉಕ್ಕಿ ಹರಿದು ಸಾವಿರಾರು ಕಾಲುವೆಗಳಾಗಿ ಪರಿವರ್ತಿತವಾಗಿ ದೇಶದಾದ್ಯಂತ ವ್ಯಾಪಿಸಿತು. ಈ ಅದ್ಭುತ ಜಲದ ರುಚಿ ನೋಡಿದ ಒಗ್ಗಟ್ಟಿಲ್ಲದ ಜನತೆ ಒಂದುಗೂಡಿತು; ಅವರ ಅನೈಕ್ಯವು ನಿವಾರಿಸಲ್ಪಟ್ಟಿತು. ಒಂದೇ ಮೂಲದಿಂದ ಉದ್ಭವಿಸಿದ ವಿವಿಧ ಕುಲಗಳನ್ನು ಒಂದಾಗಿಸಿದ್ದ ರಕ್ತಸಿಂಚನದ ಪರಮೋನ್ನತ ನಿಯಮವು ಸ್ಥಾನಭ್ರಷ್ಟವಾಗಿ ಹೊಸ ಭಾವನೆಗೆ ಸ್ಥಾನವನ್ನಿತ್ತಿತು. ನೀತಿ, ಧರ್ಮ ಮತ್ತು ಭ್ರಾತೃತ್ವದಿಂದ ಜನರನ್ನೊಂದುಗೂಡಿಸುವುದೇ ಈ ಹೊಸ ಭಾವನೆಯಾಗಿತ್ತು. ಇಸ್ಲಾಮ್ ಧರ್ಮವೆಂಬ ಒಸರು ತಡೆಯಲಸಾಧ್ಯವಾದ ನದಿಯಾಗಿ ಮಾರ್ಪಾಟು ಹೊಂದಿದಾಗ ಅದರ ಪರಿಶುದ್ಧವಾದ, ಬಲವತ್ತಾದ ಪ್ರವಾಹವು ಹಳೆಯ ನಾಗರಿಕತೆಗಳನ್ನು ಪ್ರತಿನಿಧಿಸುತ್ತಿದ್ದ ರಾಜ್ಯಗಳನ್ನು ಸುತ್ತುವರಿಯಿತು. ಆ ರಾಜ್ಯಗಳ ಜನರು ಈ ಸಂಭವದ ಮಹತ್ವವನ್ನರಿಯುವ ಮೊದಲೇ ಅದು ಅವರನ್ನು ಸ್ವಾಧೀನಗೊಳಿಸಿ ಅಡೆತಡೆಗಳನ್ನು ನಿವಾರಿಸಿ, ರಾಜ್ಯಗಳನ್ನು ಸಮಗೊಳಿಸಿ ತೂಕಡಿಸುತ್ತಿದ್ದವರ ಮನಸ್ಸನ್ನು ಅದರ ಶಬ್ದದಿಂದ ಎಚ್ಚರಗೊಳಿಸಿ, ಅತ್ಯಧಿಕ ವಿಭಿನ್ನವಾದ ಜನಸಮುದಾಯಗಳನ್ನು ಒಂದುಗೂಡಿಸಿ ಒಂದು ಐಕ್ಯ ಜನಾಂಗವನ್ನಾಗಿ ಮಾಡಿತು.

ಇಂತಹ ಅದ್ಭುತ ಸಂಭವವು ಚರಿತ್ರೆಯಲ್ಲಿ ಹಿಂದೆ ಯಾವಾಗಲಾದರೂ ನಡೆದಿಲ್ಲ. ಇಸ್ಲಾಮ್ ಧರ್ಮವು ಅತ್ಯಧಿಕ ವೇಗದಲ್ಲಿ ದಿಗ್ವಿಜಯ ಮಾಡಿ ಕೆಲವೇ ಮಂದಿ ಉತ್ಸಾಹಿಗಳ ಮತದ ಸ್ಥಾನದಿಂದ ಮಿಲಿಯಾಂತರ ಜನರ ಮತವಾಗಿ ಬದಲಾದುದು

ಹೇಗೆಂದು ಗ್ರಹಿಸಲು ಕಷ್ಟ ಸಾಧ್ಯವಾಗಿದೆ. ತರಬೇತಿಗೊಳಿಸಲ್ಪಡದ ಕಾದಾಳುಗಳು ಅವರಿಗಿಂತ ನಾಗರಿಕತೆ, ಸಂಪತ್ತು, ಅನುಭವ, ಮತ್ತು ಸಾಮರ್ಥ್ಯಗಳಲ್ಲಿ ಉತ್ತಮರಾದ ಜನರನ್ನು ಜಯಿಸುವಂತೆ ಮಾಡಿದ ರಹಸ್ಯ ಶಕ್ತಿಗಳು ಯಾವುವೆಂದು ಕಂಡುಹಿಡಿಯುವುದು ಇಂದಿಗೂ ಮಾನವ ಬುದ್ಧಿಗೆ ಸಮಸ್ಯಾತ್ಮಕವಾಗಿದೆ. ಈ ಜನರು ಅತ್ಯಲ್ಪ ಕಾಲದಲ್ಲಿ ವಿಸ್ತಾರವಾದ ಭೂಭಾಗವನ್ನು ಸ್ವಾಧೀನಪಡಿಸಿ, ನೂರಾರು ವರ್ಷಗಳ ಯುದ್ಧಗಳು ಸಹ ಅವರನ್ನು ಸ್ಥಾನಭ್ರಷ್ಟರಾಗುವಂತೆ ಮಾಡಲು ಅಸಮರ್ಥವಾಗುವಂತೆ ಬಲವಾಗಿ ನೆಲೆಯೂರಿ, ತಮ್ಮ ಅನುಯಾಯಿಗಳನ್ನು ತಮ್ಮ ಆದರ್ಶಗಳಿಗಾಗಿ ಅತ್ಯುತ್ಸಾಹ ತೋರಿಸುವಂತೆ ಪ್ರೇರೇಪಿಸಿ, ಇತರ ಮತಗಳಿಗೆ ಅಪರಿಚಿತವಾದ, ಸದಾ ಜೀವಂತ ಶಕ್ತಿಯನ್ನು ಮುಹಮ್ಮದ್ ಪೈಗಂಬರರ ಮರಣದ ಹತ್ತು ಶತಮಾನಗಳ ನಂತರವೂ ಕಾಪಾಡುವಂತೆ ಮಾಡಿ, ಆದಿ ಮುಸ್ಲಿಮರ ಕಾಲ ಮತ್ತು ಸಂಸ್ಕೃತಿಗಿಂತ ವಿಭಿನ್ನವಾದ ಅವಸ್ಥೆಯಲ್ಲಿದ್ದ ತಮ್ಮ ಅನುಯಾಯಿಗಳ ಹೃದಯದಲ್ಲಿ ಯಾವುದೇ ತ್ಯಾಗಕ್ಕೆ ಸಿದ್ಧಗೊಳಿಸುವ ಜ್ವಲಂತ ವಿಶ್ವಾಸವನ್ನು ಹೊಂದುವಂತೆ ಮಾಡಿದುದು ಆಶ್ಚರ್ಯಕರವಾಗಿದೆ.

ಮುಹಮ್ಮದ್ ಪೈಗಂಬರರ ಮಕ್ಕಾದ ಜೀವನ ಕಾಲದಲ್ಲಿ ಏಕದೈವ ವಿಶ್ವಾಸದ ಕುರಿತು ಮಾತ್ರ ಆತ್ಮಾಸಕ್ತಿಯನ್ನು ಹೊಂದಿದ್ದ ಇಸ್ಲಾಮ್ ಧರ್ಮವು, ಪೈಗಂಬರ್ ಮತ್ತು ಅವರ ಅನುಯಾಯಿಗಳು ಮದೀನಕ್ಕೆ ವಲಸೆ ಹೋದ ನಂತರ ಒಂದು ಬಲಶಾಲಿ ರಾಜಕೀಯ ಶಕ್ತಿಯಾಯಿತು. ಕುರೈಷ್ ಕುಲದ ಮೂದಲಿಕೆ ಮತ್ತು ಹಿಂಸೆಯನ್ನು ತಾಳ್ಮೆಯಿಂದ ಸೈರಿಸುತ್ತಿದ್ದ ಮುಹಮ್ಮದ್ ಪೈಗಂಬರರಿಗೆ ಆತ್ಮರಕ್ಷಣೆಗಾಗಿ ಆಯುಧವನ್ನೆತ್ತಲು ದೇವರು ಅನುಮತಿಸಿದಾಗ ಅವರು ಖಡ್ಗವನ್ನೆತ್ತಲು ನಿರ್ಬಂಧಿತರಾದರು. ಆದರೆ ಮೇಲಕ್ಕೆತ್ತಿದ ಈ ಖಡ್ಗವನ್ನು ಕೆಳಗಿರಿಸಲು ವೈರಿಗಳು ಅನಂತರ ಅವರಿಗೆ ಯಾವುದೇ ಬಿಡುವು ಕೊಡಲಿಲ್ಲ.

ಅತೀವ ಹಿಂಸೆಗೆ ಗುರಿಯಾಗಿದ್ದ ಮುಸ್ಲಿಮರಿಗೆ ದೇವರು ಬಲಾತ್ಕಾರವನ್ನು ಬಲದಿಂದ ಎದುರಿಸುವ ಅನುಮತಿಯನ್ನಿತ್ತ, ಇಸ್ಲಾಮಿನ ಅಭಿವೃದ್ಧಿ ಮತ್ತು ನೈಜ ಸಾಮಾಜಿಕ ಮತ್ತು ರಾಜಕೀಯ ಕ್ರಾಂತಿಯ ಆರಂಭವನ್ನು ಸೂಚಿಸುವ ಆ ಸ್ಮರಣೀಯ ದಿನದಿಂದ ಎರಡು ವರ್ಷಗಳು ಕಳೆಯುವುದರೊಳಗೆ ಮುಹಮ್ಮದ್ ಪೈಗಂಬರರ ಶಿಷ್ಯರು ಮಕ್ಕಾ ನಿವಾಸಿಗಳ ವಿರುದ್ಧ ಮಾಡಿದ ಪ್ರಥಮ ಯುದ್ಧದಲ್ಲಿ ಜಯಶಾಲಿಗಳಾದರು. ಆ ದಿನದಿಂದ, ಅನಿವಾರ್ಯವಾದ ಕೆಲವು ತಡೆಗಳ ಹೊರತಾಗಿ, ಧಾರ್ಮಿಕ ಮತ್ತು ರಾಜಕೀಯ ರಂಗಗಳಲ್ಲಿ ನಿರಂತರವಾದ ಕಾದಾಟ, ಯುದ್ಧ ಮತ್ತು ವಿಜಯಗಳನ್ನು ಇಸ್ಲಾಮ್ ಧರ್ಮವು ಕಂಡಿತು. ಎಂಟನೆಯ ವರ್ಷದಲ್ಲಿ ಇದು ಮಕ್ಕಾ ವಿಜಯವೆಂಬ ಅತ್ಯಂತ ಪ್ರಮುಖ ಸಂಭವದಲ್ಲಿ ಪರಾಕಾಷ್ಠೆಯನ್ನು ತಲುಪಿತು.

ಅರಬ್ ಯೋಧರು ತಮ್ಮ ಮರುಭೂಮಿಯ ಗಡಿಗಳನ್ನು ದಾಟಿ ಪೆಲೆಸ್ತೀನ್ ಮತ್ತು ಸಿರಿಯಾದ ತನಕ ಮುಂದುವರಿದರು. ಮುಂದಿನ ಆಕ್ರಮಣವು ತೊಡಗಬಹುದೆಂದು ಶಂಕಿಸಲಾದ ಸಿರಿಯಾ ದೇಶದ ವಿರುದ್ಧ ದಂಡಯಾತ್ರೆಯು ಕೈಗೊಳ್ಳಲು ಬೇಕಾದ ಸಿದ್ಧತೆಯನ್ನು ಮಾಡುತ್ತಿರುವಾಗ ಎಷ್ಟೋ ಮಾನವ ಹೃದಯದಲ್ಲಿ ಅತ್ಯಂತ ಆವೇಶವನ್ನುಂಟುಮಾಡಿದ್ದ ಮತ್ತು ಕ್ಷಿಪ್ರವಾಗಿಯೇ ದೂರ ದೂರದ ಜನಾಂಗಗಳಿಗೆ ಬಲಯುತವಾದ ಆಕರ್ಷಣೆಯನ್ನುಂಟು ಮಾಡಲಿದ್ದ ಪೈಗಂಬರರ ಶಬ್ದವು ಹಿಜರಿ ಹನ್ನೊಂದನೆಯ ವರ್ಷದಲ್ಲಿ ಅವರ ಮರಣದಿಂದ ಸದಾಕಾಲಕ್ಕೆ ನೀರವಗೊಳಿಸಲ್ಪಟ್ಟಿತು.

ಪೈಗಂಬರರ ಮರಣ ಕಾಲದಲ್ಲಿ ಅರೇಬಿಯ ದೇಶವು ಏಕೀಕರಿಸಲ್ಪಟ್ಟಿದ್ದಿತು. ಒಳನಾಡ ಅರಬಿಗಳ (Bedouins) ವಿಚ್ಛೇಧಕ ಕೃತ್ಯಗಳು ಇಸ್ಲಾಮಿಗಿಂತ ಪೂರ್ವದ ಅರಾಜಕತೆಯನ್ನು ಪುನರಾರಂಭಿಸಲು ಯತ್ನಿಸಿದರೂ ಮದೀನದ ಸರಕಾರವು ಅವರನ್ನು ಸೋಲಿಸಿ ಕೀಳಡಗಿಸಿದುದರಿಂದ ಅವರ ಉದ್ದೇಶಗಳು ಫಲಿಸಲಿಲ್ಲ. ಶತಮಾನಗಳಷ್ಟು ಕಾಲ ನಿರಂತರವಾದ ಭ್ರಾತೃಘಾತಕ ಯುದ್ಧಗಳಿಗೆ ರಂಗವಾಗಿದ್ದ ರಾಜ್ಯವು ಕೊನೆಗೆ ಭದ್ರತೆಯನ್ನೂ ಶಾಂತಿಯನ್ನೂ ಪಡೆದುದು ಇಸ್ಲಾಮ್ ಧರ್ಮದ ಮೊದಲ ಪವಾಡವೆಂದು ಹೇಳಬಹುದು.

ದೇವರಿಂದ ಪ್ರವಾದಿಗೆ ಲಭಿಸಿದ ಇಸ್ಲಾಂ ಧರ್ಮವು "ಎಲ್ಲಾ ಜನಾಂಗಗಳಿಗೂ ಅನುಗ್ರಹ" ಎಂದು ಅದರ ಸಾರ್ವಲೌಕಿಕತೆಯ ಕುರಿತು ಪವಿತ್ರ ಖುರ್‌ಆನಿನಲ್ಲಿ ಉಲ್ಲೇಖಿತವಾದ ವಚನ ಲೋಕವನ್ನೆಲ್ಲಾ ನೇರವಾಗಿ ಆಹ್ವಾನಿಸುವಂಥದ್ದಾಗಿದೆ. ಈ ವಚನದಿಂದಾಗಿ

ಪೈಗಂಬರರು ತನ್ನ ಸಂದೇಶವು ಅರೇಬಿಯಂದ ಗಡಿಯಿಂ ಹೊರಗೆ ಸಹ ವ್ಯಾಪಿಸುವುದೆಂದೂ ತನಗೆ ಅವತೀರ್ಣವಾದ ದಿವ್ಯ ವಚನಗಳನ್ನು ವಿವಿಧ ಭಾಷೆಗಳನ್ನಾಡುವ ವಿಭಿನ್ನ ಜನಾಂಗಗಳಿಗೆ ತಲುಪಿಸುವುದು ಅಗತ್ಯವೆಂದೂ ಖಚಿತವಾಗಿ ನಂಬಿದ್ದರೆಂದು ಸೂಚಿಸುತ್ತದೆ. ಪೈಗಂಬರರು "ಕೆಂಪು ಮತ್ತು ಕಪ್ಪು ಜನರು" ಎಂದು ಸಂಭೋಧಿಸಿ ಅಥವಾ ಇನ್ನಿತರ ನುಡಿಗಳನ್ನು ಉಪಯೋಗಿಸಿ ಮಾತಾಡುತ್ತಿದ್ದರು ಎಂದು ಅವರ ನುಡಿಗಳ ಸಂಗ್ರಹ ಗ್ರಂಥಗಳಲ್ಲಿ ಉಲ್ಲೇಖಿತವಾದುದು ಈ ನಂಬಿಕೆಯನ್ನು ವ್ಯಕ್ತಗೊಳಿಸುತ್ತದೆ. ಅರೇಬಿಯಂದ ಹೊರಗಡೆ ದೊರೆಯಲಿರುವ ವಿಜಯಗಳ ಕುರಿತು ಹೇಳಿದ ಮಾತುಗಳೂ ಪೈಗಂಬರರು ಸ್ವತಃ ವಿದೇಶಗಳೊಂದಿಗೆ ಮಾಡಲೆತ್ನಿಸಿದ ಸಂಪರ್ಕಗಳೂ ಇದನ್ನು ಸ್ಪಷ್ಟಪಡಿಸುವ ಇನ್ನಿತ್ತರ ಸಾಕ್ಷ್ಯಗಳಾಗಿವೆ.

ಮುಹಮ್ಮದ್ ಪೈಗಂಬರರ ನಂತರ ಉತ್ತರಾಧಿಕಾರಿಗಳಾಗಿ ಇಸ್ಲಾಮಿಕ ಸಾಮ್ರಾಜ್ಯದ ಅಧಿಕಾರಕ್ಕೆ ಬಂದ ಖಲೀಫರು, ಪೈಗಂಬರರ ಚಿಂತನೆಗಳ ವಿಧೇಯ ವ್ಯಾಖ್ಯಾನಗಾರರಾಗಿ, ಅವರು ತೆರೆದ ದಾರಿಯಲ್ಲಿ ನಡೆದು ಇಸ್ಲಾಮಿನ ಪತಾಕೆಯನ್ನು ಪೂರ್ವದಲ್ಲಿ ಏಸ್ಯಾ ಖಂಡದ ಮಧ್ಯದ ವರೆಗೆಯೂ ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರದ ವರೆಗೆಯೂ ತಲುಪಿಸಿದರು.

ನೂರಾರು ವರ್ಷಗಳ ವರೆಗೆ ಬೈಝಾಂಟಿನ್ ಸಾಮ್ರಾಜ್ಯದೊಂದಿಗೆ ಯುದ್ಧ ಮಾಡುತ್ತಾ ಸೋಲದೆಯೂ ಗೆಲ್ಲದೆಯೂ ಇದ್ದ ಪರ್ಶಿಯನ್ ಸಾಮ್ರಾಜ್ಯವು ಹಿಜರಿ ಹದಿನಾರನೆಯ ವರ್ಷದಲ್ಲಿ ಖದಿಸಿಯ್ಯಾದ ಯುದ್ಧದಲ್ಲಿ ಎಂದೆಂದಿಗೂ ತಲೆಯೆತ್ತಲಾಗದ ಸೋಲನ್ನನುಭವಿಸಿ ಶಿಥಿಲಗೊಂಡಿತು. ಪಲಾಯನಗೈದ ಪರ್ಶಿಯನ್ ಸಾಮ್ರಾಟನು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಓಡುತ್ತಾ ತನ್ನ ಗತ ಸಾಮ್ರಾಜ್ಯದ ಅತಿ ದೂರದ ಗಡಿಯನ್ನು ತಲುಪಿ ಕೊನೆಗೆ ಹಿಜರಿ ಮೂವತ್ತೊಂದನೆಯ ವರ್ಷದಲ್ಲಿ ಮರಣಹೊಂದಿದನು. ಹೀಗೆ ಪರ್ಶಿಯನ್ ಸಾಮ್ರಾಜ್ಯವು ಅರಬಿಗಳ ರಾಜ್ಯದ ಭಾಗವಾಯಿತು.

ಇಷ್ಟರಲ್ಲಿಯೇ ಪೆಲೆಸ್ತೀನ್ ಮತ್ತು ಸಿರಿಯಾಗಳ ಜಯಿಸುವಿಕೆ ಸಂಪೂರ್ಣವಾಗಿತ್ತು. ಹಿಜರಿ ಹತ್ತೊಂಭತ್ತನೆಯ ವರ್ಷದೊಳಗೆ ಈ ರಾಜ್ಯಗಳು ಅರಬಿಗಳ ವಶವಾಗಿದ್ದುವು. ಹಿಜರಿ ಇಪ್ಪತ್ತೊಂದನೆಯ ವರ್ಷದಲ್ಲಿ ವಿಜಯಶಾಲಿಯಾದ ಸೈನ್ಯವು ಅರ್ಮೇನಿಯಾದ ಕೇಂದ್ರವಾದ ಮೋಸುಲನ್ನು ತಲುಪಿದ್ದಿತು. ಒಂದು ನೌಕಾಪಡೆಯು ವಿರಚಿತವಾಗಿ ಸಿರಿಯಾದ ಒಂದು ಬಂದರಿನಿಂದ ಒಂದು ವರ್ಷದ ಯುದ್ಧದ ಸಾಮಾನು ಸರಂಜಾಮುಗಳೊಂದಿಗೆ ಬೈಝಾಂಟಿನ್ ಸಾಮ್ರಾಜ್ಯದ ರಾಜಧಾನಿಗೆ ಧಾಳಿಯಿಡಲು ಹೊರಟಿತು. ಹಿಜರಿ ಹದಿನೆಂಟನೆಯ ವರ್ಷದಲ್ಲಿ ಪ್ರಥಮ ಅರಬಿ ಸೈನ್ಯವು ಈಜಿಪ್ಟಿನಲ್ಲಿ ಪ್ರವೇಶಮಾಡಿತು. ಹಿಜರಿ 21ನೆಯ ವರ್ಷದಲ್ಲಿ ಅಲೆಕ್ಸಾಂಡ್ರಾ ನಗರ ವಶವಾಯಿತು. ಹಿಜರಿ 23ರಲ್ಲಿ ಟ್ರಿಪೊಲಿ ನಗರ ಅರಬಿಗಳ ಕೈವಶವಾಯಿತು. ಹಿಜರಿ ವರ್ಷ 27ರಲ್ಲಿ ದಕ್ಷಿಣ ಟ್ಯುನೀಷಿಯಾದ ವಿರುದ್ಧ ಪ್ರಥಮ ಮುಖ್ಯ ದಂಡಯಾತ್ರೆಯನ್ನು ಕೈಗೊಳ್ಳಲಾಯಿತು. ಹೀಗೆ ತಾರೀಕುಗಳ ಪಟ್ಟಿ ಯಾಕೆ ಮಾಡುವುದು? ಸಂಕ್ಷಿಪ್ತವಾಗಿ ಹೇಳುವುದಾದರೆ, ಸೈನ್ಯವು ಬಹಳ ವೇಗವಾಗಿ ಮುಂದುವರಿಯಿತೆಂದೂ ಯುದ್ಧಗಳ ನಂತರ ಯುದ್ಧಗಳು ನಡೆದುವೆಂದೂ ವಿಜಯವು ಜಯಶಾಲಿಗಳ ಪಾದಗಳಿಗೆ ರೆಕ್ಕೆಗಳನ್ನು ಕೊಟ್ಟಿತೆಂದೂ ಹೇಳಬಹುದು. ಅಬೂಬಕರ್ (ಖಲೀಫರಾದುದು ಹಿಜರಿ 13ನೆಯ ವರ್ಷದಲ್ಲಿ), ಉಮರ್ (ಖಲೀಫರಾದುದು ಹಿಜರಿ 23ನೆಯ ವರ್ಷದಲ್ಲಿ) ಮತ್ತು ಉಸ್ಮಾನ್ (ಖಲೀಫರಾದುದು ಹಿಜರಿ 35ನೆಯ ವರ್ಷದಲ್ಲಿ) ಖಲೀಫರಾಗಿದ್ದ ಕಾಲದಲ್ಲಿ ಅದ್ಭುತ ವಿಜಯದ ಸಂತೋಷಕರ ವಾರ್ತೆಗಳು ಪುನಃ ಪುನಃ ಕೇಳಿ ಬರುತ್ತಿದ್ದುವು. ಇದರ ನಂತರ ಜಯಿಸಲ್ಪಟ್ಟ ರಾಜ್ಯಗಳನ್ನು ಸುವ್ಯಸ್ಥಿತವಾಗಿ ಒಂದುಗೂಡಿಸಲಾಯಿತು. ಇದು ವಿಜಯಗಳಿಸುವಿಕೆಗಿಂತ ಕಮ್ಮಿ ಆಶ್ಚರ್ಯಕರವಾದ ಸಾಧನೆಯಾಗಿಲ್ಲ.

ಎರಡು ನಾಗರಿಕತೆಗಳೂ ಎರಡು ಮತಗಳೂ ಅಧಃಪತನಗೊಳಿಸಲ್ಪಟ್ಟ ನಂತರ, ಉತ್ಸಾಹೀ ಜೀವನದ ಹೊಸ ಪ್ರವಾಹವು ಈ ಬಳಲಿದ ಜನಾಂಗಗಳ ರಕ್ತನಾಳಗಳಲ್ಲಿ ಹರಿಯಿತು. ಆಶ್ಚರ್ಯಗೊಂಡ ಲೋಕದ ಮುಂದುಗಡೆ, ಸುಲಭವಾಗಿ ಅನುಸರಿಸಬಹುದಾದ, ಹೃದಯಕ್ಕೂ ಬುದ್ಧಿಗೂ ಅನುಯೋಜ್ಯವಾದ ಮತವು ಪ್ರದರ್ಶಿಸಲ್ಪಟ್ಟಿತು. ಆ ಕಾಲದಲ್ಲಿ ಸ್ಥಾಪಿತವಾಗಿದ್ದ ಸರಕಾರಗಳ ನೀತಿ ನ್ಯಾಯಗಳಿಗಿಂತ ಉತ್ತಮವಾದುದನ್ನು ಹೊಂದಿದ್ದ ಹೊಸ ಸರಕಾರವು ಸ್ಥಾಪಿತವಾಯಿತು. ಧನಿಕರ ಮತ್ತು ಅಧಿಕಾರಿಗಳ ಖಜಾನೆಗಳಲ್ಲಿ ಅಡಗಿಸಿದ್ದ

ಬಂಗಾರವು ಹೊರಬಂದು ಬಡವರ ಕೈಸೇರಿ ಉತ್ತಮವಾದ ಧನಸಂಚಾರ ವ್ಯವಸ್ಥೆ ಸ್ಥಾಪಿತವಾಯಿತು. ನೀತಿವಂತ ಪ್ರಜಾಪ್ರಭುತ್ವ ತತ್ವಗಳಿಗೆ ಅನುಸಾರವಾಗಿ ನಡೆಸಲ್ಪಡುತ್ತಿರುವ ಸರಕಾರದಿಂದ ಪ್ರೋತ್ಸಾಹಿಸಲ್ಪಡುತ್ತಿದ್ದ ವಿದ್ಯಾವಂತ, ಸಮರ್ಥ, ಬುದ್ಧಿವಂತ ಜನರು ಉನ್ನತ್ತ ಅಧಿಕಾರಗಳನ್ನು ಗಳಿಸಲು ಸಾಧ್ಯವಾಯಿತು. ದಂಡಯಾತ್ರೆಯ ಸಮಯದಲ್ಲಿ ಸೈನಿಕರಿಂದ ನಡೆದಿರಬಹುದಾದಕೆಲವು ಅನಿವಾರ್ಯ ಅನಿಷ್ಟಕೃತ್ಯಗಳ ನಂತರ, ನೂರಾರು ವರ್ಷಗಳಷ್ಟು ಕಾಲದಲ್ಲಿ ಎಂದಿಗೂ ಆಸ್ಯಾಖಂಡವು ಕಾಣದ ಸುಖ ಸಂಪತ್ತಿನ ಯುಗವು ಪ್ರಾರಂಭವಾಯಿತು. ಜಯಿಸಲ್ಪಟ್ಟ ಜನಾಂಗಗಳ ಜೀವನ, ಸಂಪತ್ತು ಮತ್ತು ಹಕ್ಕುಗಳು ಮುಸ್ಲಿಮರು ಗಳಿಸಿದಷ್ಟೇ ರಕ್ಷಣೆಯನ್ನು ಪಡೆದುವು

ಇಂತಹ ಅಗಾಧವಾದ ರಾಜಕೀಯ ಧಾರ್ಮಿಕ ಬದಲಾವಣೆಯಿಂದ ಗಾಬರಿಗೊಂಡ ಜನರು ಇದು ಹೇಗೆ ಸಂಭವಿಸಿತೆಂದು ತಮ್ಮನ್ನೇ ಕೇಳತೊಡಗಿದರು. ಹಲವರು ಸ್ವಯಂ ಕುರುಡರಾಗಿದ್ದರು ಅಥವಾ ಉದ್ದೇಶಪೂರ್ವಕವಾಗಿ ಕಣ್ಣುಮುಚ್ಚಿ ತಪ್ಪು ಊಹಾಪೋಹಗಳ ಚಕ್ರವ್ಯೂಹದಲ್ಲಿ ದೀರ್ಘಕಾಲ ವ್ಯರ್ಥವಾಗಿ ಅಲೆದಾಡಿದರು. ಇಂತಹ ವಿಶ್ವಾಸ ಮುನ್ನಡೆಗೆ ಒಂದು ಪವಿತ್ರ ಶಕ್ತಿಯೇ ಪ್ರಥಮ ಪ್ರೇರಣೆ ನೀಡಬಲ್ಲುದೆಂಬುದನ್ನು ಗ್ರಹಿಸಲು ಅವರು ಅಸಮರ್ಥರಾದರು. ಧರ್ಮ ಶಾಸ್ತ್ರವನ್ನು ತಂದ ಮಹಾ ಪ್ರವಾದಿಗಳ ಪರಂಪರೆಯನ್ನು ಕೊನೆಗೊಳಿಸಿದ ಮುಹಮ್ಮದ್ ಪೈಗಂಬರರ ಉದ್ದೇಶ ಸಿದ್ಧಿಗೆ ದೇವ ಧೀಮಂತಿಕೆ ಮಾತ್ರವೇ ಕಾರಣವೆಂದು ನಂಬಲು ಅವರು ಇಷ್ಟಪಡಲಿಲ್ಲ. ಇಸ್ಲಾಮಿನ ಸಂದೇಶವು ಸಾರ್ವಲೌಕಿಕವಾಗಿದ್ದು ಜನಾಂಗ, ರಾಜ್ಯ ಅಥವ ವರ್ಣದ ಮೇರೆಗಳನ್ನು ದಾಟಿ ಹೋಗುವಂತಹದಾಗಿದ್ದಿತು. ಕುರುಡರಾಗಿದ್ದವರು ಅಥವಾ ಸ್ವತಃ ಸತ್ಯವನ್ನು ನೋಡಲು ಇಚ್ಛಿಸದವರು ಇಸ್ಲಾಮ್ ಧರ್ಮದ ಸಾರವು "ಭೀಕರ ಆಕ್ರಮಣ"ವೆಂದು ಸಾರಿದರು. ಇಸ್ಲಾಂ ಧರ್ಮವು ಖಡ್ಗದಿಂದ ಜನರ ಮೇಲೆ ಹೊರಿಸಲ್ಪಟ್ಟಿತೆಂದೂ ಅದು ಅಸಹಿಷ್ಣುತೆಯನ್ನು ತೋರಿಸುವ ಮತವೆಂದೂ ಪ್ರಚಾರ ಮಾಡಿದರು. ಮುಹಮ್ಮದ್ ಪೈಗಂಬರರನ್ನು ಸುಳ್ಳು ಹೇಳುವವನೆಂದೂ ಕ್ರೂರಿಯೆಂದೂ ಕಾಮಾಂಧನೆಂದೂ ಅವರು ಆರೋಪಿಸಿದರು. ಅವರು ಪೈಗಂಬರರ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯು ಸ್ತುತ್ಯರ್ಹವಾದ ಕಾರ್ಯಗಳನ್ನು ಅಲ್ಲಗೆಳೆದರು. ಅವರು ಪೈಗಂಬರರ ಶಿಷ್ಯರ ಭಕ್ತಿಯನ್ನು ಸ್ವಾರ್ಥವೆಂದು ವರ್ಣಿಸಿ, ಶಿಷ್ಯರು ಕೇವಲ ಧನಸಂಪತ್ತು ಮತ್ತು ಪ್ರಾಪಂಚಿಕ ಅಭಿವೃದ್ಧಿಗಾಗಿ ಉತ್ಸಾಹಿತರಾದವರೆಂದು ಚಿತ್ರೀಕರಿಸಿದರು.

ಇಸ್ಲಾಮಿನ "ಆಕ್ರಮಣ ಮನೋಭಾವ"ದ ಕುರಿತು ಮೊದಲು ವಿಚಾರಿಸುವುದಗತ್ಯ. ಇದರ ಅರ್ಥ, ಮುಹಮ್ಮದ್ ಪೈಗಂಬರರು ಇತರ ಮತಸ್ಥಾಪಕರಿಗಿಂತ ವ್ಯತಿರಿಕ್ತವಾಗಿ ತನ್ನ ಖಡ್ಗವನ್ನು ಉಪಯೋಗಿಸಿದರೆಂದೂ ಸೇನೆಯನ್ನು ಮುಂದಿನ ವಿಜಯಕ್ಕಾಗಿ ದಂಡಯಾತ್ರೆಗೆ ಅಣಿಗೊಳಿಸಿದರೆಂದೂ ಅವರ ಆದರ್ಶವನ್ನು ಅನುಯಾಯಿಗಳು ಅನುಸರಿದರೆಂದೂ ಹೇಳುವುದಾದರೆ, ಇದು ಸರಿಯೆಂದೇ ಹೇಳಬಹುದು. ಆದರೆ ಇದು ಯಾಕೆ ಸಂಭವಿಸಿತೆಂದು ಸಹ ಇದೇ ಸಂದರ್ಭದಲ್ಲಿ ತೆರೆದ ಮನಸ್ಸಿನಿಂದ ಪರ್ಯಾಲೋಚಿಸುವುದಗತ್ಯ. ದಿಗ್ವಿಜಯ ಮಾಡುವುದು ಇಸ್ಲಾಮಿನ ಮೂಲ ಸಿದ್ಧಾಂತಕ್ಕನುಗುಣವಾಗಿದೆಯೆಂದೂ ವಿನಾಶಕಾರೀ ಯುದ್ಧವು ಈ ಧರ್ಮವನ್ನು ಹೇರಲು ಅಗತ್ಯವಾದ ದಾರಿಯೆಂದೂ ಆರೋಪಿಸುವುದಾದರೆ ಖುರ್‌ಆನಿನ ಸಾಕ್ಷ್ಯಗಳಿಂದಲೂ, ಮುಹಮ್ಮದ್ ಪೈಗಂಬರರ ವರ್ತನೆಗಳ ಉದಾಹರಣೆಗಳಿಂದಲೂ ಈ ಆರೋಪವನ್ನು ಸಂಪೂರ್ಣ ಸುಳ್ಳೆಂದು ಸಿದ್ಧಪಡಿಸಬಹುದು.

ಪೈಗಂಬರರು ತನ್ನ ದೈವಿಕ ದರ್ಶನಗಳ ಕುರಿತು ಮಕ್ಕಾದ ಜನತೆಗೆ ಹೇಳುತ್ತಿದ್ದಾಗ ಅವರು ಜನರಿಂದ ಹಿಂಸೆಯನ್ನು ಸಹಿಸಬೇಕಾಗುತ್ತಿತು. ಇದು ಖುರೈಷ್ ಕುಲದ ಅವಿಶ್ವಾಸವನ್ನು ಪ್ರೋತ್ಸಾಹಿಸುತ್ತಿತ್ತು. ಅವರು ಮದೀನಕ್ಕೆ ಹೋಗುವ ಕಠಿಣ ತೀರ್ಮಾನವನ್ನು ಕೈಗೊಂಡು ಮದೀನದಲ್ಲಿ ಅವರು ರಾಜಕೀಯ ಹೋರಾಟದ ಕೇಂದ್ರಬಿಂದುವಾಗಿ ಪರಿಣಮಿಸಿದಾಗ ಅವರಿಗೆ ಎರಡೇ ಎರಡು ಸಂಗತಿಗಳಲ್ಲೊಂದನ್ನು ಆಯ್ದುಕೊಳ್ಳಬೇಕಾಗಿದ್ದಿತು. ಅವರಿಗೆ ಅಲ್ಲಿ ದೈವೇಚ್ಛೆಗೆ ವಿರುದ್ಧವಾಗಿ ಮಾನಹೀನನಾಗಿ ಸಾಯಬೇಕಾಗಿದ್ದಿತು ಅಥವಾ ತನ್ನನ್ನು ಮತ್ತು ತನ್ನ ಚಿಕ್ಕ ಸಮುದಾಯವನ್ನು ವಿನಾಶದಿಂದ ರಕ್ಷಿಸಲು ಹೋರಾಡಬೇಕಾಗಿದ್ದಿತು. ಈ ಹೋರಾಟದಲ್ಲಿ ಒಂದು ಭಾಗದಲ್ಲಿ ಅರಬಿ ಬಹು

ದೈವಾರಾಧಕರ ಅರಾಜಕತೆಯೂ, ಭೌತಿಕತೆಯೂ ಮತ್ತು ಅಸಹಿಷ್ಣುಗಳಾದ ನಾಗರಿಕ ಯಹೂದಿಗಳ ಭಿನ್ನಾಭಿಪ್ರಾಯಗಳೂ, ಸುಳ್ಳು ಮತ್ತು ಇನ್ನೊಂದು ಭಾಗದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಪುನರುಜ್ಜೀವನದ ಅತ್ಯುತ್ತಮ ಆದರ್ಶಗಳೂ ಇದ್ದುವು.

ಪೈಗಂಬರರು ತನ್ನ ಆದರ್ಶ ಸಿದ್ಧಿಯನ್ನು ಗಳಿಸಲು ಎಂತಹ ಹೋರಾಟಗೈಯ್ಯಲೂ ತಯಾರಾಗಿದ್ದರು. ಆದರೆ ಅವರು ಹೋರಾಡಿದುದು ಗರ್ವಿಷ್ಠನ ಜೊತೆಯಲ್ಲಿ ಸಾಧು ಹೋರಾಡಿದಂತೆಯಾಗಿತ್ತು. ಅವರಿಗೆ ಸ್ವತಃ ಇಷ್ಟವಿಲ್ಲದಿದ್ದರೂ ಅವರನ್ನು ಶಕ್ತಿಪ್ರದರ್ಶನದಿಂದ ನಾಶಗೊಳಿಸಲೆತ್ನಿಸಿದವರ ವಿರುದ್ಧ ಯುದ್ಧ ಮಾಡಲು ಅವರು ನಿರ್ಬಂಧಿತರಾದರು. ಅವರಿಗೆ ಈ ಹೋರಾಟದಲ್ಲಿ ಬಹಳ ಅಲ್ಪ ಸಹಾಯ ದೊರೆತರೂ, ತಾನು ಅಂಧಕಾರದಲ್ಲಿ ಸರಿಯಾದ ದಾರಿ ತೋರಿಸಲು ನಿಯುಕ್ತನಾಗಿರುವೆನೆಂದೂ ತಾನು ಹಲವಾರು ಜೀವಿಗಳಿಗೆ ಸತ್ಯವನ್ನು ತಲುಪಿಸಲು ದಾರಿಯನ್ನು ತೆರೆಯುತ್ತಿರುವೆನೆಂದೂ ದೃಢ ನಿಶ್ಚಯವಿದ್ದಿತು. ಮದೀನಕ್ಕೆ ತಲುಪಿದ ನಂತರ ಮೊತ್ತ ಮೊದಲು ಅವರು ತನ್ನ ಸ್ನೇಹಹಸ್ತವನ್ನು ಅಭಿವೃದ್ಧಿ ಹೊಂದುತ್ತಿರುವ ಶ್ರೀಮಂತರನ್ನು ಪ್ರತಿನಿಧಿಸುತ್ತಿದ್ದ ಯಹೂದಿಗಳಿಗೆ ಚಾಚಿದರು. ಅವರನ್ನು ರಾಜಕೀಯ ಮತ್ತು ಸಾಮಾಜಿಕ ಐಕ್ಯಕ್ಕಾಗಿ ನಿಷ್ಠೆಯಿಂದ ಕೂಡಿದ ಸಹಾಯಕ್ಕಾಗಿ ಅಪೇಕ್ಷಿಸಿದರು. ಆದರೆ ಅವರು ತನ್ನ ಕಠಿಣ ವಿರೋಧಿಗಳೆಂದೂ ಅವರು ಸುಳ್ಳು ಮತ್ತು ವಂಚನೆಯ ಮಾರ್ಗದಲ್ಲಿ ಮುಂದುವರಿಯಲಿಚ್ಛಿಸುತ್ತಿರುವರೆಂದೂ ಭಾಸವಾದಾಗ ಪೈಗಂಬರರಿಗೆ ಅವರೊಡನೆ ಯುದ್ಧ ಮಾಡಿ ಅವರನ್ನು ಶಿಕ್ಷಿಸದೆ ಇರಲು ನಿರ್ವಾಹವಿರಲಿಲ್ಲ. ಹೊರಗಿನ ಶತ್ರುಗಳ ವಿರುದ್ಧ ಯುದ್ಧ ಮಾಡುವುದು ಆಗಿನ ಕಾಲದ ಆವಶ್ಯಕತೆಗಳಲ್ಲೊಂದಾಗಿತ್ತು. ಮರುಭೂಮಿಯ ಅರಬಿಗಳಿಗೆ ಶಾಶ್ವತವಾದ ಶಾಂತಜೀವನ ನಡೆಸುವುದು ಅಸಾಧ್ಯವಾಗಿತ್ತು. ಯುದ್ಧ ನಡೆಸುತ್ತಲೇ ಇರುವುದು ಶತಮಾನಗಳ ರೂಢಿಯಾಗಿತ್ತು. ಪೈಗಂಬರರು ಒಳಗಿನ ಸಮಸ್ಯೆಗಳ ಪರಿಹಾರವನ್ನು ಕಂಡ ನಂತರ ಹೊರಗಿನ ಖುರೈಷ್ ಮತ್ತಿತರ ಸಂಧಾನದಲ್ಲೇರ್ಪಡದ ಗೋತ್ರಗಳ ವಿರುದ್ಧ ಯುದ್ಧ ಮಾಡಬೇಕಾಯಿತು. ಯುದ್ಧವು ಅದರೊಳಗಡಗಿರುವ ವಿಪತ್ತುಗಳು ಮತ್ತು ವಿಜಯಗಳ ಕಾರಣವಾಗಿ ಒಂದು ಹೊಸ ಸಮುದಾಯದಲ್ಲಿ ಒಕ್ಕಟನ್ನು ಸ್ಥಾಪಿಸಲು ಸಹಾಯಮಾಡಿತು. ಅದು ಮಕ್ಕದಿಂದ ಮದೀನಕ್ಕೆ ಪೈಗಂಬರರ ಜೊತೆ ವಲಸೆ ಹೋದ ಅನುಯಾಯಿಗಳ ಜೀವಿತ ಮಾರ್ಗವನ್ನು ರೂಪಿಸಿತು. ಅದು ಹಳ್ಳಿಗಾಡಿನ ಅರಬಿಗಳ ಸ್ವಾಭಾವಿಕ ಇಚ್ಛೆಗಳನ್ನು ತೃಪ್ತಿಗೊಳಿಸಿತು. ಅನಾಗರಿಕ ತರದ ಆ ಯುದ್ಧಗಳು ಅವುಗಳ ಅಪಾಯಗಳಿಂದಲೂ, ಅದಕ್ಕೆ ಬೇಕಾದ ಧೈರ್ಯ ಮತ್ತು ಸಾಹಸದಿಂದಲೂ ಆಕರ್ಷಣೀಯವಾಗಿದ್ದು ಅವು ಜೀವನವನ್ನು ಸಂರಕ್ಷಿಸಲು ದಾರಿಯಾಗಿಯೂ ಪೈಗಂಬರರ ಉದ್ದೇಶವನ್ನು ಪೂರ್ಣಗೊಳಿಸಲು ಸಹಕಾರಿಯೂ ಆಗಿದ್ದುವು. ಯುದ್ಧವು ಸತ್ಯಧರ್ಮವನ್ನು ಸಂರಕ್ಷಿಸಲೂ ಉತ್ಕರ್ಷಗೊಳಿಸಲೂ ಸದಾ ಕಾಲದಲ್ಲಿ ಒಂದು ದಾರಿಯಾಗಿದ್ದಿತು. ಅದು ಅತ್ಯಗತ್ಯವಾದ ಒಂದು ಆತ್ಮರಕ್ಷಕ ಸಾಧನವಾಗಿದ್ದಿತಲ್ಲದೆ ಅನ್ಯಾಯಕರವಾದ ಹಿಂಸೆಯ ಸಾಧನವಾಗಿ ಎಂದಿಗೂ ಬಳಸಲ್ಪಡಲಿಲ್ಲ.

ಖುರ್‌ಆನ್ ಸ್ಪಷ್ಟವಾಗಿ ಈರೀತಿ ಹೇಳುತ್ತದೆ:—

"ದೇವರ ದಾರಿಯಲ್ಲಿ ನಿಮ್ಮೊಡನೆ ಹೋರಾಡುವವರ ವಿರುದ್ಧ ಯುದ್ಧ ಮಾಡಿರಿ. ಆದರೆ ಮೇರೆ ಮೀರಬೇಡಿರಿ. ದೇವರು ಮೇರೆ ಮೀರುವವರನ್ನು ಇಷ್ಟಪಡುವುದಿಲ್ಲ'' (2:191).

''ಉಪದ್ರವವು ಅಂತ್ಯವಾಗಿ ಧರ್ಮವು ದೇವರಿಗೆ ಬೇಕಾಗಿ ಸ್ವತಂತ್ರವಾಗಿ ಸ್ವೀಕಾರ್ಯವಾಗುವ ತನಕ ಹೋರಾಡಿರಿ. ವಿರೋಧಿಗಳು ಎದುರಿಸುವುದನ್ನು ನಿಲ್ಲಿಸಿದರೆ, ಅಕ್ರಮಿಗಳ ಹೊರತು ಇತರರ ಮೇಲೆ ಆಕ್ರಮಣವು ಸಲ್ಲದೆಂದು ತಿಳಿಯಿರಿ.'' (2 : 194)

ಆದರೆ ಅನಂತರ ಮುಸ್ಲಿಮರು ಒಂದು ಮಿತಿಯವರೆಗೆ ಅಕ್ರಮಕಾರಿ ಪ್ರವೃತ್ತಿಗಳಿಂದ ಉತ್ತೇಜಿತರಾಗಿ ತಮ್ಮ ವಿಜಯಯಾತ್ರೆಗಳನ್ನು ಮುಂದುವರಿಸಲಿಲ್ಲ ಎಂದು ಹೇಳುವುದಾದರೆ ಅದು ಮಾನವ ಸ್ವಭಾವದ ಕುರಿತು ಅಜ್ಞತೆಯನ್ನು ಮಾತ್ರ ಪ್ರದರ್ಶಿಸುವುದು. ಆದರೆ ಇದಕ್ಕೆ ಕಾರಣವಾಗಿ ಅವರ ಮತವನ್ನು ಆರೋಪಿಸುವುದು ನ್ಯಾಯವೇ ? ಅವರಿಗೆ ತಮ್ಮ ಶಕ್ತಿಯ ಅರಿವಾಗಿ ವಿರೋಧಿಗಳ ಬಲಹೀನತೆ ತಿಳಿದಾಗ ಲೋಕದ ಯಾವ ಶಕ್ತಿಗೆ ತಾನೆ ಅವರ ಉತ್ಸಾಹವನ್ನು ತಡೆದು ನಿಯಮದ ಪರಿಧಿಯೊಳಗೆ ನಿಲ್ಲಿಸಲು ಸಾಧ್ಯವಿದ್ದಿತು? ಆದರೆ ತಮ್ಮ

ಶಕ್ತಿ ಮತ್ತು ವಿಜಯವು ಉತ್ತುಂಗ ಶಿಖರವನ್ನು ತಲುಪಿದಾಗಲೂ ಅರಬಿಗಳು ತಮ್ಮ ವಿರೋಧಿಗಳೊಡನೆ ಈ ರೀತಿ ಹೇಳಲು ಯಾವಾಗಲೂ ಸನ್ನದ್ಧರಾಗಿದ್ದರು: "ಯುದ್ಧವನ್ನು ತ್ಯಜಿಸಿ ಒಂದು ಅಲ್ಪ ತೆರಿಗೆ ಇತ್ತರೆ ನಾವು ಸಂರಕ್ಷಣೆಯನ್ನೀಯುವೆವು. ಅಥವಾ ಇಸ್ಲಾಮ್ ಧರ್ಮ ಸ್ವೀಕರಿಸಿ ನಮ್ಮ ಸಮಾಜಕ್ಕೆ ಸೇರಿದರೆ ನಮ್ಮಂತಹ ಹಕ್ಕುಗಳನ್ನು ಪಡೆಯುವಿರಿ''.

ಪೈಗಂಬರರ ಭವಿಷ್ಯವಾಣಿಗಳನ್ನೂ ಮುಸ್ಲಿಮರ ಮೊದಲಿನ ವಿಜಯಗಳನ್ನೂ ಪರಾಂಬರಿಸಿ ನೋಡಿದರೆ ಇಸ್ಲಾಮ್ ಖಡ್ಗದಿಂದ ಜನರ ಮೇಲೆ ಹೇರಲಾಯಿತೆಂದೂ ಆ ಧರ್ಮದ ತ್ವರಿತ ಹಬ್ಬುವಿಕೆಗೆ ಇದೇ ಕಾರಣವೆಂದೂ ಆರೋಪಿಸುವುದು ಅಸಂಬದ್ಧವೆಂದು ಸುಲಭವಾಗಿ ತಿಳಿಯಬಹುದು. ಖುರ್‌ಆನ್ ಹೀಗೆನ್ನುತ್ತದೆ:—

"ಧರ್ಮದ ವಿಷಯದಲ್ಲಿ ಬಲಾತ್ಕಾರವಿಲ್ಲ. ಸತ್ಯವು ಮಿಥ್ಯದಿಂದ ಪ್ರತ್ಯೇಕವಾಗಿ ಬಹಿರಂಗವಾಗಿದೆ. ದಾರಿ ತಪ್ಪಿಸುವವರನ್ನು ನಿರಾಕರಿಸಿ ದೇವರನ್ನು ಸ್ವೀಕರಿಸುವವರು ಖಚಿತವಾಗಿಯೂ ಬಲಿಷ್ಠವಾದ ಎಂದೆಂದಿಗೂ ತುಂಡಾಗದ ಹಿಡಿಕೆಯನ್ನು ಹಿಡಿದಿರುವರು. ದೇವರು ಎಲ್ಲವನ್ನು ಕೇಳುವವನೂ ಎಲ್ಲವನ್ನು ತಿಳಿದವನೂ ಆಗಿರುವನು.'' (.2:257)

"ಹೇಳು: ಸತ್ಯವು ದೇವರಿಂದ ಬಂದುದಾಗಿದೆ. ಇಚ್ಛಿಸುವವರು ಸ್ವೀಕರಿಸಲಿ. ಇಚ್ಛಿಸುವವರು ನಿರಾಕರಿಸಲಿ.'' (18:30)

ಪೈಗಂಬರರು ಈ ದೈವಿಕ ನಿಯಮಗಳನ್ನು ಪಾಲಿಸುತ್ತಾ ಬಹಳ ಸಹಿಷ್ಣುವಾಗಿದ್ದು ಏಕದೈವಾರಾಧಕ ಮತಗಳ ಅನುಯಾಯಿಗಳಿಗೆ ಪ್ರತ್ಯೇಕ ಸಹಾನುಭೂತಿಯುಳ್ಳವರಾಗಿದ್ದರು. ಅವರು ಬಹುದೈವಾರಾಧಕ ಧರ್ಮಗಳ ಅನುಯಾಯಿಗಳೊಡನೆಯೂ ಸಹನೆಯಿಂದ ವರ್ತಿಸಲು ಅರಿತಿದ್ದರು. ಸಮಯವು ಕಳೆದಂತೆ ಮತಾಂತರದ ಉದ್ದೇಶವು ಪೂರ್ತಿಯಾಗುವುದೆಂಬ ದೃಢ ನಂಬಿಕೆಯಿಂದ ಅವರು ಕಾಯುತ್ತಿದ್ದರು. ಮರಳುಗಾಡಿನ ಅರಬಿಗಳು ಯಾವುದೇ ವಿಧದ ನಿರ್ಬಂಧಕ್ಕೊಳಪಡುವುದನ್ನು ಸಹಿಸಲಾರರೆಂದು ತಿಳಿದಿದ್ದ ಪೈಗಂಬರರು ಆ ಅರಬಿಗಳು ಹೆಸರಿಗೆ ಮಾತ್ರ ಮತಾಂತರಗೊಂಡುದರಿಂದಲೂ ತೃಪ್ತರಾಗಿದ್ದರು. ಕೊನೆಗೆ ದೇವರು ಮಾನವ ಹೃದಯವನ್ನು ಪ್ರವೇಶಿಸುವನೆಂದು ಪೈಗಂಬರರು ಚೆನ್ನಾಗಿ ಅರಿತಿದ್ದರು.

"ವಿಶ್ವಾಸವು ದೇವರಿಂದ ಮಾತ್ರ ಅನುಗ್ರಹಿಸಲ್ಪಡುವುದೆಂದು ತಿಳಿದಿದ್ದೂ ನೀನು ಜನರನ್ನು ನಂಬಲು ಯಾಕೆ ಒತ್ತಾಯಿಸುತ್ತಿರುವೆ?'' ಎಂದು ಪೈಗಂಬರರು ಒಮ್ಮೆ ತನ್ನೊಬ್ಬ ಶಿಷ್ಯನೊಡನೆ ಕೇಳಿದ್ದರು. ಸಹಿಷ್ಣುತೆಯನ್ನು ಬೋಧಿಸುವ ಖುರ್‌ಆನಿನ ವಚನಗಳು ಅವರಿಗೆ ಅವತೀರ್ಣವಾದಾಗ ಅವರು ಕೆಲವು ಕನಸುಗಾರರಾದ ಅನುಯಾಯಿಗಳಿಂದ ಆವೃತನಾದ ಕನಸುಗಾರನೋ ಅಥವಾ ತನ್ನ ಶಕ್ತಿ ಹೀನತೆಯ ಅರಿವಿನಿಂದ ಕಂಗಾಲಾದ ತತ್ವಜ್ಞಾನಿಯೋ ಆಗಿರಲಿಲ್ಲ. ಆ ಸಮಯದಲ್ಲಿ ಪೈಗಂಬರರು ಅತ್ಯಂತ ಬಲಿಷ್ಠರಾಗಿದ್ದು, ಸುವ್ಯವಸ್ಥಿತ ರಾಜ್ಯವೊಂದರ ಪ್ರಮುಖನೂ ಉತ್ತಮ, ವಿಧೇಯ ಮತ್ತು ಯಾರೊಡನೆಯೂ ಹೋರಾಡಲು ಸಮರ್ಥ ಸೈನ್ಯದ ಅಧಿಪತಿಯೂ ಆಗಿದ್ದರು.

ಇಸ್ಲಾಮಿನ ಆದಿಕಾಲೀನ ಖಲೀಫರು ಇತರ ಏಕದೈವಾರಾಧಕ ಮತಗಳ ಅನುಯಾಯಿಗಳಿಗೆ ತೋರಿದ ಸಹಾನುಭೂತಿಯ ಉದಾಹರಣೆಗಳು ನಮಗೆ ಇಸ್ಲಾಮಿನ ಪ್ರಾರಂಭಿಕ ದಶಕಗಳ ಚರಿತ್ರೆಯಿಂದ ಲಭ್ಯವಾಗುತ್ತವೆ. ಪೈಗಂಬರರು ನಜ್ರಾನಿನ ಕ್ರೈಸ್ತರಿಗೆ ಅವರ ಸಂಸ್ಥೆಗಳು ರಕ್ಷಿಸಲ್ಪಡುವುದೆಂದು ಭರವಸೆಯಿತ್ತಂತೆಯೂ ಯಮನಿನ ಯಹೂದಿಗಳನ್ನು ಧಾರ್ಮಿಕ ವಿಶ್ವಾಸದ ಹೇತುವಾಗಿ ಉಪದ್ರವಿಸಬಾರದೆಂದು ಅಲ್ಲಿಗೆ ಹೊರಟ ಸೈನ್ಯಕ್ಕೆ ಆಜ್ಞಾಪಿಸಿದಂತೆಯೂ, ಖಲೀಫರು ತಮ್ಮ ಸೈನ್ಯಾಧಿಪತಿಗಳಿಗೆ ಯುದ್ಧದಲ್ಲಿ ಸೈನ್ಯವು ನಡೆಯಬೇಕಾದ ಕಟ್ಟುಕಟ್ಟಳೆಗಳನ್ನು ವಿಧಿಸುತ್ತಿದ್ದರು. ಈ ವಿಜಯಶಾಲಿ ಸೇನಾಧಿಪತಿಗಳು, ಸೋತವರೊಡನೆ ಒಪ್ಪಂದ ಮಾಡುವಾಗ ಪೈಗಂಬರರ ಆದರ್ಶವನ್ನು ಪಾಲಿಸಿದರು. ಈ ಒಪ್ಪಂದಗಳ ಪ್ರಕಾರ ಸೋತವರು ತಮ್ಮ ಹಳೆಯ ಮತಗಳನ್ನೂ ಆಚಾರ ವಿಚಾರಗಳನ್ನೂ ಅನುಸರಿಸಲು ಸ್ವಾತಂತ್ರ್ಯಕೊಡಲ್ಪಟ್ಟರು. ಇಂತಹಜನರು 'ಜಿಝಿಯಾ' ಎಂಬ ಒಂದು ನ್ಯಾಯ ಸಮ್ಮತನಾದ ತೆರಿಗೆಯನ್ನು ಕೊಡಬೇಕಾಗಿತ್ತು. ಈ ತೆರಿಗೆ ಮುಸ್ಲಿಮರು ಸ್ವತಃ ತಮ್ಮ ಸರಕಾರಗಳಿಗೆ ಕೊಡಲು ನಿರ್ಬಂಧಿತರಾಗಿರುವ ತೆರಿಗೆಗಳಿಗಿಂತ ಬಹಳ ಕಮ್ಮಿಯಾಗಿತ್ತು. "ಝಿಮ್ಮಿ'' ಎಂದು ಕರೆಯಲ್ಪಡುವ ಈ ಅಮುಸ್ಲಿಮ್ ಪ್ರಜೆಗಳು ಮುಸ್ಲಿಮರಷ್ಟೇ ಸಂರಕ್ಷಣೆಯನ್ನು ಪಡೆಯುತ್ತಿದ್ದರು. ಪೈಗಂಬರರ ಮತ್ತು ಅವರ ಧರ್ಮನಿಷ್ಠ ಖಲೀಫರ

ಆಚರಣೆಗಳು ಅನಂತರದ ಮುಸ್ಲಿಮರಿಗೆ ನಿಯಮಗಳಾಗಿ ಪರಿಣಮಿಸಿದುದರಿಂದ ಇಸ್ಲಾಮ್ ಧಾರ್ಮಿಕ ಸ್ವಾತಂತ್ರ್ಯವನ್ನು ಕೇವಲ ಬೋಧಿಸಿದುದು ಮಾತ್ರವಲ್ಲದೆ ಅದನ್ನು ತನ್ನ ಧಾರ್ಮಿಕ ಶಾಸನಗಳ ಒಂದು ಭಾಗವಾಗಿ ಮಾಡಿತೆಂದರೆ ಅದು ಅತಿಶಯೋಕ್ತಿಯಾಗಲಾರದು.

ಗೆಲ್ಲಲ್ಪಟ್ಟ ಜನರೊಡನೆ ಒಪ್ಪಂದಮಾಡಿದ ನಂತರ ಮುಸ್ಲಿಮರು ಅವರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನಿತ್ತರಲ್ಲದೆ ಅವರನ್ನು ಮತಾಂತರಗೊಳಿಸಲು ಯಾವುದೇ ಬಲಾತ್ಕಾರವನ್ನು ಕೈಗೊಳ್ಳಲಿಲ್ಲ ಮುಸ್ಲಿಮ್ ಸೈನ್ಯಗಳನ್ನು ಛಲಗಾರರಾದ ಮತ್ತು ಜನರ್ಚ್ಛಂದ ಮತಪ್ರಚಾರಕರು ಹಿಂಬಾಲಿಸುತ್ತಿರಲಿಲ್ಲ. ಇವರಿಗೆ ಮತಪ್ರಚಾರಕ್ಕಾಗಿ ಅಥವಾ ಮತದ ಮೇಲೆ ಮಾಡಲಾಗುವ ಆಕ್ರಮಣಗಳನ್ನು ತಡೆಯಲಿಕ್ಕಾಗಿ ಯಾವುದೇ ವಿಶಿಷ್ಟ ಮೆಚ್ಚುಗೆಯ ಸ್ಥಾನವನ್ನು ಕೊಡಲಾಗುತ್ತಿರಲಿಲ್ಲ. ಒಂದು ಕಾಲದಲ್ಲಿ ನವಮತಾಂತರ ಹೊಂದಿದವರು ನ್ಯಾಯಾಧೀಶರ ಮುಂದೆ ಹಾಜರಾಗಿ “ನಮ್ಮ ಮತಾಂತರ ಯಾವುದೇ ನಿರ್ಬಂಧದ ಕಾರಣದಿಂದ ಅಥವಾ ಪ್ರಾಪಂಚಿಕ ಲಾಭದ ಆಶೆಯಿಂದ ನಡೆದುದಲ್ಲ” ಎಂದು ಘೋಷಿಸಲು ನಿರ್ಬಂಧಿತರಾಗಿದ್ದುದು ಇಸ್ಲಾಮ್ ಧರ್ಮದ ಪ್ರಗತಿಗೆ ಖಂಡಿತವಾಗಿಯೂ ಸಹಕಾರಿಯಾಗಿ ಇಲ್ಲ. ಉಮಯೀ (OMAYYAD) ವಂಶದ ಖಲೀಫರ ಕಾಲದಲ್ಲಿ ಮತಾಂತರದ ಪ್ರವಾಹವನ್ನು ತಡೆಯಲು ಒಂದು ಪ್ರಯತ್ನ ಸಹ ನಡೆಯಿತು. ಆ ಕಾಲದಲ್ಲಿ ಮತಾಂತರದ ಕಾರಣದಿಂದ ಜಿಝಿಯಾ ತೆರಿಗೆಯ ವಸೂಲಾತಿ ಕಮ್ಮಿಯಾಗಿ ಸರಕಾರದ ಆದಾಯ ಕುಂಠಿತವಾದುದು ಆರ್ಥಿಕವಾಗಿ ಗಾಬರಿಗೆ ಕಾರಣವಾಗಿತ್ತು. ಯಹೂದಿಗಳೂ ಕ್ರೈಸ್ತರೂ ಅವರ ಧಾರ್ಮಿಕ ವಿಶ್ವಾಸಗಳ ಕುರಿತು ಪ್ರಶ್ನಿಸಲ್ಪಡದೆ ಶಾಂತವಾಗಿ ಜೀವಿಸಲು ಅನುಮತಿಸಲ್ಪಟ್ಟುದಲ್ಲದೆ ಅವರ ವ್ಯಕ್ತಿಪರವಾದ ಯೋಗ್ಯತೆಗಳು ಆಳುವವರ ಗಮನವನ್ನು ಹರಿಯಿಸುವಷ್ಟು ವಿಶಿಷ್ಟವಾದಾಗ ಅವರು ಸರಕಾರದ ಅಧಿಕಾರ ಸ್ಥಾನಗಳಿಗೆ ಸಹ ನೇಮಿಸಲ್ಪಟ್ಟರು. ಮತಾನುಸರಣೆಯ ವಿಷಯದಲ್ಲಿ ಕ್ರೈಸ್ತರಿಗೂ ಯಹೂದಿಗಳಿಗೂ ಕೆಲವು ನಿರ್ಬಂಧ ಹೊರಿಸಿದುದು, ಕ್ರೈಸ್ತರೂ ಯಹೂದಿಗಳೂ ಗುರುತಿಸಲ್ಪಡುವಂತೆ ಕೆಲವು ಚಿಹ್ನೆಗಳನ್ನು ಬಹಿರಂಗವಾಗಿ ಧರಿಸಲು ನಿರ್ಬಂಧಗೊಳಿಸಿದುದು, ಹೊಸ ಕ್ರೈಸ್ತ ದೇವಾಲಯಗಳ ನಿರ್ಮಾಣ ಮತ್ತು ಹಳೆಯವುಗಳ ದುರಸ್ತಿ ತಡೆದುದು— ಇವುಗಳೆಲ್ಲಾ ಅರಬಿಗಳಲ್ಲದ ಜನಾಂಗದವರು ಅನಂತರ ಇಸ್ಲಾಮನ್ನು ಪ್ರವೇಶಿಸಿ ಮತಭ್ರಾಂತರಾಗಿ ಇಸ್ಲಾಮಿನೊಳಗೆ ಮತಾಂಧತೆಯನ್ನು ಆಯಾತಗೊಳಿಸಿದ ಕಾರಣದಿಂದಾಗಿ ಸಂಭವಿಸಿದುವು.

ಮುಸ್ಲಿಮರು ಸಹ ಕಾಲಕ್ರಮೇಣ ಇತರ ಎಲ್ಲಾ ಮತಗಳ ಅನುಯಾಯಿಗಳಂತೆ ದ್ವೇಷಪರವೂ ರಕ್ತಹರಿಸುವಂತಹದೂ ಆದ ಕೆಲವು ದುಷ್ಪ್ರವೃತ್ತಿಗಳನ್ನು ಬಹಿರಂಗಗೊಳಿಸಿದರೆಂಬ ಸಂಗತಿ ಅಲ್ಲಗಳೆಯಲಾಗದು. ಆದರೆ ಇವುಗಳಿಗೆ ಕಾರಣ ಇಸ್ಲಾಮ್ ಧರ್ಮಕ್ಕೆ ಸಂಬಂಧಿಸದೆ ಇದ್ದು ಅವುಗಳಿಗೆ ಬೇರೆಯೇ ಕಾರಣಗಳು ಇದ್ದುವು. ಯಥಾರ್ಥವಾಗಿ ಇಸ್ಲಾಮ್ ಧರ್ಮವು ಇವರ ಈ ದುಷ್ಪ್ರೇರಣೆಗಳನ್ನು ಶಾಂತಗೊಳ್ಳುವಂತೆ ಮಾಡಿ ಸೌಮ್ಯತೆ ಮತ್ತು ಸಹಾನುಭೂತಿಗಳಿಗೆ ಸ್ಥಾನ ಪ್ರಾಪ್ತಿಯಾಗುವಂತೆ ಮಾಡಿತು. ಇಸ್ಲಾಮ್ ಧರ್ಮದೊಳಗೆ ಸಹ ಪಂಗಡ ಪಂಗಡಗಳೊಳಗೆ ಜಗಳಗಳು ಮತ್ತು ಹಿಂಸಾಚರಣೆಗಳು ನಡೆಯದೇ ಇರಲಿಲ್ಲ. ಆದರೆ ಇವುಗಳಿಗೆ ಧರ್ಮವು ಕಾರಣವಾಗಿರಲಿಲ್ಲ. ರಾಜಕೀಯ ಪ್ರತಿಸ್ಪರ್ಧೆಯೇ ಇವುಗಳಿಗೆ ಕಾರಣವಾಗಿತ್ತು. ಇಸ್ಲಾಮ್ ಧರ್ಮವು ಇವುಗಳನ್ನು ಸಮ್ಮತಿಸುವುದಾಗಲೀ ನ್ಯಾಯೀಕರಿಸುವುದಾಗಲೀ ಇಲ್ಲ.

ದ್ವೇಷಾಸೂಯೆಗಳಿಂದ ಅಂಧರಾಗಿ ಇಸ್ಲಾಮಿನ ಅನೇಕ ಬಲಶಾಲಿಗಳಾದ ವೈರಿಗಳು ದೇವರ ಪೈಗಂಬರರ ಮೇಲೆ ಹಲವಾರು ದೂಷಣೆಗಳನ್ನು ಲೇಪಿಸಲು ಯತ್ನಿಸಿರುವರು. ಮುಹಮ್ಮದರು ತಾವು ಪೈಗಂಬರರಾಗಿ ನಿಯುಕ್ತರಾಗುವ ಮೊದಲು ತಮ್ಮ ಮನಸ್ಸಾಕ್ಷಿಯ ಶುದ್ಧತೆಗಾಗಿಯೂ ಜೀವಿತದ ಪಾವಿತ್ರ್ಯತೆಗಾಗಿಯೂ ಸ್ವದೇಶೀಯರಿಂದ ಆದರಿಸಲ್ಪಡುತ್ತಿದ್ದರೆಂಬುದನ್ನು ಇವರು ಬೇಕೆಂದೇ ಮರೆಯುತ್ತಾರೆ. ಮುಹಮ್ಮದರು ಸ್ವತಃ ಅನೃತವಾದಿಯಾಗಿದ್ದರೆ ಅವರು ಹೇಗತಾನೆ ಸುಳ್ಳುಗಾರರನ್ನೂ ಕಪಟಿಗಳನ್ನೂ ಖುರ್‌ಆನಿನ ಎಚ್ಚರದಾಯಕ ವಚನಗಳ ಮೂಲಕ ನರಕಾಗ್ನಿಯಿಂದ ಹೆದರಿಸಬಲ್ಲರಾಗಿದ್ದರೆಂದು ಇವರು ತಮ್ಮನ್ನೇ ತಾವು ಕೇಳುವುದಿಲ್ಲ. ತನ್ನ ದೇಶದವರಿಂದ ಅನಾದರಿಸಲ್ಪಟ್ಟರೂ ಸಾಮಾನ್ಯ ಮನುಷ್ಯ ಗುಣಗಳನ್ನು ಹೊಂದಿದ್ದ ಈ ವ್ಯಕ್ತಿ ಧರ್ಮಬೋಧನೆ ಮಾಡಲು ಧೈರ್ಯ ತಾಳಿದುದು

ಆಂತರಿಕ ಶಕ್ತಿಗಳ ನಿರಂತರ ಒತ್ತಡದಿಂದಲ್ಲದೆ ಅನ್ಯಥಾ ಅಲ್ಲ. ನಿರಾಶದಾಯಕವಾಗಿ ಕಾಣುವ ಒಂದು ಹೋರಾಟವನ್ನು ಅವರು ಪ್ರಾರಂಭಿಸಿದುದಾದರೂ ಹೇಗೆ? ಹತ್ತು ವರ್ಷಗಳ ತನಕ ಯಾವುದೇ ಜಯಗಳಿಸದೆ, ಲೆಕ್ಕವಿಲ್ಲದ ದುಃಖಕ್ಲೇಶಗಳನ್ನನುಭವಿಸಿ; ತನ್ನ ಹೋರಾಟವನ್ನು ತನ್ನ ದೌತ್ಯದ ಸದುದ್ದೇಶದ ಪೂರ್ಣ ಅರಿವಿಲ್ಲದೆ ಮುಂದುವರಿಸಲು ಹೇಗೆ ಸಾಧ್ಯ? ಹಲವಾರು ಉಚ್ಛ ಕುಲದ ಬುದ್ಧಿವಂತ ಜನರು ಪೈಗಂಬರರನ್ನು ನಂಬಿ ಅವರ ಜೊತೆಗಾರರಾಗಿ — ಹೆಚ್ಚಾಗಿ ಗುಲಾಮರು, ಗುಲಾಮಗಿರಿಯಿಂದ ಸ್ವತಂತ್ರಗೊಳಿಸಲ್ಪಟ್ಟವರು ಮತ್ತು ದರಿದ್ರರು ಸೇರಿದ್ದ ಸಮುದಾಯವನ್ನು–ಸೇರಿದುದು ಪೈಗಂಬರರ ನುಡಿಗಳಲ್ಲಿ ಸತ್ಯದ ಸರಳತೆಯು ಕಂಡುದರಿಂದಲ್ಲದೆ ಇನ್ನು ಯಾವುದರಿಂದ? ನಾವು ಹೆಚ್ಚಾಗಿ ಹೇಳಬೇಕೆಂದಿಲ್ಲ; ಪಾಶ್ಚಾತ್ಯರಲ್ಲಿ ಹಲವರು ಮುಹಮ್ಮದರ ಅಂತಃಕರಣ ಶುದ್ಧತೆಯನ್ನು ಸಮ್ಮತಿಸಿರುವರು.

ಕ್ರೌರ್ಯದ ಆಕ್ಷೇಪವನ್ನು ಉತ್ತರಿಸುವುದು ಸುಲಭ. ರಾಷ್ಟ್ರದ ಪ್ರಮುಖನೂ, ಜನತೆಯ ಜೀವನ ಮತ್ತು ಸ್ವಾತಂತ್ರ್ಯದ ರಕ್ಷಕನೂ ಆಗಿದ್ದ ಮುಹಮ್ಮದರು ನ್ಯಾಯ ಪಾಲನೆ ಮಾಡುವಾಗ ಅಪರಾಧಿಗಳಾಗಿದ್ದವರನ್ನು ಕಠಿಣವಾಗಿ ಶಿಕ್ಷಿಸಿದ್ದು ಏಕೆಂದು ಆ ಕಾಲದ ಪರಿಸ್ಥಿತಿಯನ್ನೂ ಆ ಅನಾಗರಿಕ ಜನಸಮುದಾಯದ ರೀತಿ ನೀತಿಗಳನ್ನೂ ಪರಿಗಣಿಸಿ ನೋಡಬೇಕಾಗಿದೆ. ಮುಹಮ್ಮದರು ದೇವರ ಧರ್ಮದ ಪ್ರಚಾರಕರೆಂಬ ನೆಲೆಯಲ್ಲಿ ತನ್ನ ಸ್ವಂತ ವಿರೋಧಿಗಳಿಗೂ ದಯೆಯನ್ನು ಸೌಮ್ಯತೆಯನ್ನು ತೋರಿಸುವವರಾಗಿದ್ದರು. ನ್ಯಾಯ ಮತ್ತು ದಯೆಯೆಂಬ ಮಾನವನ ಎರಡು ಉತ್ಕೃಷ್ಟ ಗುಣಗಳ ಬೆರಕೆಯನ್ನು ಮುಹಮ್ಮದರು ಹೊಂದಿದ್ದರು. ಅವರ ಜೀವನ ಚರಿತ್ರೆಯಲ್ಲಿ ಉಲ್ಲೇಖಿಸಲ್ಪಟ್ಟ ಅನೇಕ ಉದಾಹರಣೆಗಳಿಂದ ಇದನ್ನು ಸಮರ್ಥಿಸಲು ಸುಲಭ ಸಾಧ್ಯವಿದೆ. ಪೈಗಂಬರರ ಒಬ್ಬ ಜೀವನ ಚರಿತ್ರೆಗಾರ ಈರೀತಿ ಬರೆದಿರುವನು: —

"ಮಾನವ ಜೀವನದ ಭೀಕರ ಅವಶ್ಯಕತೆಗಳಲ್ಲಿ ಒಂದಾದ ಯುದ್ಧದ ಕ್ರೂರತೆಯನ್ನು ಅವರು ಕಡಿಮೆಗೊಳಿಸಿದರು." ಈ ಕೆಳಗಿನಂತೆ ಪೈಗಂಬರರು ತನ್ನ ಸೈನಿಕರಿಗೆ ಆಜ್ಞಾಪಿಸುತ್ತಿದ್ದರೆಂದು ಇನ್ನೊಬ್ಬ ಚರಿತ್ರೆಗಾರ ವರದಿ ಮಾಡಿರುವನು:—

"ವೃದ್ಧರನ್ನು, ಮಹಿಳೆಯರನ್ನು, ಮಕ್ಕಳನ್ನು ರಕ್ಷಿಸಿರಿ. ನಿಮ್ಮನ್ನು ತಡೆಯದವರ ಮನೆಗಳನ್ನು ನಾಶ ಮಾಡಬೇಡಿರಿ. ಅವರ ಉದರ ನಿರ್ವಹಣದ ದಾರಿಯನ್ನು ಭಂಗಗೊಳಿಸದಿರಿ. ಫಲಕೊಡುವ ವೃಕ್ಷಗಳನ್ನೂ ಖರ್ಜೂರದ ಮರಗಳನ್ನೂ ನಾಶಮಾಡಬೇಡಿರಿ."

ಪೈಗಂಬರರ ಮೇಲೆ ಮಾಡಲಾದ ಉಚ್ಛೃಂಖಲತೆಯ ಆರೋಪವನ್ನು ಇನ್ನೊಂದು ಅಧ್ಯಾಯದಲ್ಲಿ ನಾವು ವಿವರಿಸುವೆವು. ಈ ಬಹು ದೈವಾರಾಧಕರೂ ಅನಾಗರಿಕರೂ ಆದ ಜನರ ಸದಾ ಹೋರಾಡುವ ಗುಂಪನ್ನು ಉನ್ನತ ನೈತಿಕ ಭಾವನೆಗಳಿಂದ ಉತ್ತೇಜಿತರಾದ ಮತ್ತು ಐಕ್ಯಮತ್ಯವನ್ನು ಹೊಂದಿದ ಏಕದೈವಾರಾಧಕ ಜನಾಂಗವನ್ನಾಗಿ ಕೆಲವೇ ವರ್ಷಗಳ ಅವಧಿಯಲ್ಲಿ ಅವರು ಮಾರ್ಪಡಿಸಿದುದು ಎಷ್ಟು ಮಹತ್ತಾದುದೂ ಶ್ರೇಷ್ಠವೂ ಆಗಿದೆಯೆಂದು ನಾವು ವ್ಯಕ್ತಗೊಳಿಸುವೆವು. ಮುಹಮ್ಮದರ ಅನುಯಾಯಿಗಳಲ್ಲಿ ಹೆಚ್ಚು ಜನರು ಸ್ವಾರ್ಥಿಗಳಾದ ಲಾಭಾಕಾಂಕ್ಷಿಗಳೆಂದೂ ದುರಾಶೆಯ ಸುಲಿಗೆಗಾರರೆಂದೂ ಅವರು ಮುಹಮ್ಮದರ ಪಕ್ಷಕ್ಕೆ ಸೇರಿದುದು ಕೇವಲ ಸುಲಿಗೆಯಿಂದ ದೊರಕಬಹುದಾದ ಸಂಪತ್ತಿಗಾಗಿಯೂ ಮತ್ತು ಭೂಭಾಗಗಳನ್ನು ಗೆಲ್ಲಲಿಕ್ಕಾಗಿಯೂ ಎಂಬ ಆರೋಪವನ್ನು ಸತ್ಯ ಸಂಗತಿಗಳ ಸಾಕ್ಷ್ಯಗಳು ಅಲ್ಲಗಳೆಯುವುವು. ಪೈಗಂಬರರ ಅನುಯಾಯಿಗಳ ಮಿರುಗುವ ಉತ್ಸಾಹ, ಮೇರೆಯಿಲ್ಲದ ಅನುಕಂಪ, ಅತ್ಯಂತ ವಿಧೇಯತೆಯ ಕುರಿತು ಉದಾಹರಣೆಗಳನ್ನು ಕೊಡುತ್ತಾ ಹೋಗುವುದಾದರೆ ಬಹಳ ದೀರ್ಘವಾಗಿ ಬರೆಯಬೇಕಾದೀತು. ಆದರೆ ನಾವು ಇಷ್ಟು ಮಾತ್ರ ಹೇಳಬಲ್ಲೆವು:– ಕೆಲವು ಹೋರಾಟಗಳನ್ನು ಗೆಲ್ಲಲು, ಹೋರಾಟದ ನ್ಯಾಯ ಸಮ್ಮತಿಯ ಕುರಿತು ದೃಢ ವಿಶ್ವಾಸವೆಂಬ ಶಕ್ತಿಯುತವಾದ ನೈತಿಕ ಬಲವಿಲ್ಲದೆ ಸಾಧ್ಯವಿಲ್ಲ. ಇಂತಹ ನೈತಿಕ ಬಲವನ್ನು ಇಸ್ಲಾಮ್ ಪಡೆದಿದ್ದಿತು.

ಇಸ್ಲಾಮಿನ ವಿರುದ್ಧವಾಗಿ ಸರ್ವಸಾಮಾನ್ಯವಾಗಿ ಮಾಡಲಾಗುವ ಆಕ್ಷೇಪಗಳನ್ನು ವಿಮರ್ಶಿಸಿದ ನಂತರ ನಾವು ಈ ಕೆಳಗಿನ ಸಂಗತಿಯ ಕುರಿತು ಗಮನ ಹರಿಯಿಸಬೇಕಾಗಿದೆ:

ಮುಸ್ಲಿಮ್ ದೇಶಗಳಲ್ಲಿ ಅನ್ಯ ಧರ್ಮದವರಿಗೆ ಮತ ಸ್ವಾತಂತ್ರ್ಯವಿದ್ದೂ, ಮತಾಂತರಗೊಳಿಸುವ

ಹೇಳತಕ್ಕಂತಹ ಯಾವುದೇ ಕಾರ್ಯೋನ್ಮುಖ ಸಂಸ್ಥೆಗಳು ಇಲ್ಲದಿದ್ದರೂ, ಸಾಮಾನ್ಯವಾಗಿ ಮತಾನುಸರಣೆಯು ಅಧಃಪತನಗೊಳ್ಳುತ್ತಿರುವ ಈ ಕಾಲದಲ್ಲಿಯೂ ಇಸ್ಲಾಮ್ ಮತವು ಆಸ್ಯಾ ಮತ್ತು ಆಫ್ರಿಕ ಖಂಡಗಳಲ್ಲಿ ಮುಂದುವರಿಯುತ್ತಿರುವುದರ ಕಾರಣವನ್ನು ವಿವರಿಸುವುದಾದರೂ ಹೇಗೆ? ಈಗ ದಂಡ ಯಾತ್ರೆಗಾರನ ಖಡ್ಗವು ಇಸ್ಲಾಮಿನ ವಿಜಯಕ್ಕೆ ದಾರಿ ಮಾಡಿಕೊಡುತ್ತದೆಯೆಂದು ಹೇಳಲು ಸಾಧ್ಯವಿಲ್ಲ. ತದ್ವಿರುದ್ಧವಾಗಿ, ಮುಂಚೆ ಮುಸ್ಲಿಮ್ ರಾಜ್ಯಭಾರ ನಡೆಯುತ್ತಿದ್ದ ಕೆಲವು ದೇಶಗಳಲ್ಲಿ ಇಂದು ಅನ್ಯ ಮತೀಯರಿಂದ ನಡೆಸಲ್ಪಡುವ ಸರಕಾರಗಳು ಅಧಿಕಾರದಲ್ಲಿದ್ದು ಇಂತಹ ರಾಜ್ಯಗಳಲ್ಲಿ ದೀರ್ಘ ಕಾಲದಿಂದ ಅನ್ಯ ಮತೀಯರಿಂದ ಮುಸ್ಲಿಮರ ಮಧ್ಯದಲ್ಲಿ ಮತ ಪ್ರಚಾರ ನಡೆಯುತ್ತಿದ್ದರೂ, ಮುಸ್ಲಿಮರ ಜೀವಿತದಿಂದ ಇಸ್ಲಾಮ್ ಧರ್ಮವನ್ನು ತೆಗೆದು ಹಾಕಲು ಅವರು ಸಮರ್ಥರಾಗಿಲ್ಲ.

ಈ ಧರ್ಮದಲ್ಲಿ ಅಡಗಿರುವ ಅದ್ಭುತ ಶಕ್ತಿ ಯಾವುದು? ವಿಶ್ವಾಸ ದಾರ್ಢ್ಯತೆಯು ಯಾವ ಆಂತರಿಕ ಶಕ್ತಿ ಅದರಲ್ಲಿ ಬೆರೆತಿದೆ? ಅದರ ಆಹ್ವಾನಕ್ಕೆ ಮಾನವಾತ್ಮದ ಯಾವ ಅಂತರಾಳದಿಂದ ಉತ್ತರವು ಸ್ಪಂದಿತವಾಗುತ್ತದೆ?

—ಅನುವಾದಕ: M. U. ರಶೀದ್

# ಮಾವೋ ಬೋಧಿಸಿದ ಶಿಸ್ತು

ವಿಮೋಚನೆ ಸೇನೆಯನ್ನು ಮಾವೊರು ಶಿಸ್ತಿನ ಚೌಕಟ್ಟಿನಲ್ಲಿ ಕೂಡಿಸಿದ್ದರು. ಈ ಶಿಸ್ತಿನ ಮೂರು ಮುಖ್ಯ ನಿಯಮಗಳಿವು.

* ನಿಮ್ಮ ಎಲ್ಲ ಕಾರ್ಯಗಳಲ್ಲಿಯೂ ಅಪ್ಪಣೆಗಳನ್ನು ಪಾಲಿಸಿರಿ.

* ಜನರಿಂದ ಒಂದೇ ಒಂದು ತುಂಡು ಸೂಜಿಯನ್ನಾಗಲಿ, ತುಂಡು ದಾರವನ್ನಾಗಲಿ ಇಸಿದುಕೊಳ್ಳಬೇಡಿರಿ.

* ವಶಪಡಿಸಿಕೊಳ್ಳಲಾದ ಪ್ರತಿಯೊಂದು ವಸ್ತುವನ್ನೂ ಹಿಂದಿರುಗಿಸಿರಿ.

ಇದರ ಜೊತೆಗೆ ಎಂಟು ಅಂಶಗಳ ಒಂದು ಸೂತ್ರವನ್ನು ಅವರು ರೂಪಿಸಿದ್ದರು:

* ವಿನಯದಿಂದ ಮಾತನಾಡಿರಿ. * ನೀವು ಕೊಳ್ಳುವ ವಸ್ತುವಿಗೆ ಸೂಕ್ತವಾದ ಬೆಲೆ ನೀಡಿರಿ. * ಸಾಲವಾಗಿ ಪಡೆಯುವ ಪ್ರತಿ ವಸ್ತುವನ್ನೂ ಹಿಂದಿರುಗಿಸಿರಿ. * ನೀವು ಹಾಳುಮಾಡುವ ವಸ್ತುವಿಗೆ ಪ್ರತಿಯಾಗಿ ಪರಿಹಾರ ನೀಡಿರಿ. * ಜನರನ್ನು ಹೊಡೆಯಬೇಡಿರಿ. * ಬೆಳೆಗಳಿಗೆ ಹಾನಿ ಉಂಟುಮಾಡಬೇಡಿರಿ. * ಮಹಿಳೆಯರೊಡನೆ ಹೆಚ್ಚು ಸಲಿಗೆ ವಹಿಸಬೇಡಿರಿ. * ಸೆರೆಯಾಳುಗಳೊಡನೆ ಅಸಭ್ಯವಾಗಿ ವರ್ತಿಸಬೇಡಿರಿ.

(ಕೃಪೆ: 'ಜನಜೀವಾಳ'
ಕನ್ನಡ ವಾರಪತ್ರಿಕೆ ಬೆಳಗಾವಿ.)

1400 ವರ್ಷಗಳ ಮೊದಲು ಇಸ್ಲಾಮ್ ಧರ್ಮ ಬೋಧಿಸಿದ ಪಾಠಗಳೊಂದಿಗೆ ಮಾವೊರವರ ಈ ಮೇಲಿನ ಬೋಧನೆಗಳಿಗೆ ನಿಕಟ ಹೋಲಿಕೆ ಇದೆ ಎಂಬುದು ಗಮನಾರ್ಹವಾಗಿದೆ.

—ಸಂಪಾದಕ, 'ಯುಗರಶ್ಮಿ'

# ಡಾ| ಕೋವೂರರ ಮೂಢ ನಂಬಿಕೆ— ಪತ್ರಿಕಾ ಸಮ್ಮೇಳನದಲ್ಲಿ ಪ್ರಶ್ನೆಗಳ ಸುರಿಮಳೆ

ಸೌಜನ್ಯ: "ಸತ್ಯದೂತನ್" ಕಣ್ಣಾನೂರು.

ವಿಚಾರವಾದದ ಆಧುನಿಕ ಆಚಾರ್ಯನಾಗಿ ರಂಗಪ್ರವೇಶ ಮಾಡಿರುವ ಶ್ರೀ ಲಂಕಾ ವಿಚಾರವಾದಿ ಸಂಘದ ಅಧ್ಯಕ್ಷ ಎ. ಟಿ. ಕೋವೂರ್‌ರವರು ಪವಾಡಗಳ ರಹಸ್ಯಗಳನ್ನು ಬಯಲುಗೊಳಿಸಲು ಭಾರತದಲ್ಲಿ ನಡೆಸುತ್ತಿರುವ ಪರ್ಯಟನೆಯ ಭಾಗವಾಗಿ ಕಣ್ಣಾನೂರನ್ನು ಸಂದರ್ಶಿಸಿ ಒಂದು ಪತ್ರಿಕಾ ಸಮ್ಮೇಳನದಲ್ಲಿಯೂ ಮತ್ತೊಂದು ಸಭೆಯಲ್ಲಿಯೂ ಮಾತನಾಡಿದರು. ಕಟು ಮತ ವಿರೋಧಿ ಎಂಬ ನೆಲೆಯಲ್ಲಿ ಅವರು ತನ್ನ ಅಭಿಪ್ರಾಯಗಳನ್ನು ನಿರ್ಭೀತಿಯಿಂದ ಘೋಷಿಸಿ, ತನ್ನದೇ ಶೈಲಿಯಲ್ಲಿ ವಾಡಿಕೆಯಂತೆ ದಿವ್ಯವಾದಿಗಳಿಗೆದುರಾಗಿ ತನ್ನ ಪಂಥಾಹ್ವಾನವನ್ನು ಪುನರುಚ್ಚರಿಸಿದರು. ಡಾ| ಕೋವೂರ್ ಮತವಿಶ್ವಾಸಿಯಲ್ಲ. ಅಭಿನವ "ಅವತಾರ" ಪುರುಷರ ವಾದಗಳನ್ನೂ ಪವಾಡಗಳನ್ನೂ ಬಯಲಿಗೆಳೆಯುವ ಪ್ರಯತ್ನಗಳ ಕುರಿತು ಅವರಿಗಿರುವ ಆತ್ಮಾರ್ಥತೆ ಪ್ರಶ್ನಾತೀತವಾಗಿದೆ. ಆದರೆ ಒಬ್ಬ ವಿಚಾರವಾದಿಗೆ ಅನುಯೋಜ್ಯವಲ್ಲದ ರೀತಿಯಲ್ಲಿ, ಅವರು ಪೂರ್ವಾಗ್ರಹ ಪೀಡಿತರೂ ತನ್ನದೇ ದೃಢ ವಿಶ್ವಾಸವನ್ನು ಹೊಂದಿರುವವರೂ ಆಗಿದ್ದಾರೆಂದು ಹೇಳದೆ ನಿರ್ವಾಹವಿಲ್ಲ. ಮತಾಚಾರ್ಯರ ವಾದಗಳನ್ನೂ ಮತ ಸಿದ್ಧಾಂತಗಳನ್ನೂ ಸಂಬಂಧಿಸಿ ಎಂತಹದೇ ಅಭಿಪ್ರಾಯವನ್ನು ಹೊಂದುವ ಸ್ವಾತಂತ್ರ್ಯವು ಡಾ| ಕೋವೂರ್‌ರವರಿಗೆ ಇರುವ ಹಾಗೆಯೇ, ಮತಾಚಾರ್ಯರ ಅನುಯಾಯಿಗಳಿಗೂ ಇದೆಯೆಂದೂ, ಡಾ| ಕೋವೂರ್‌ರವರ ರೀತಿಯಲ್ಲಿ ಅಥವಾ ಅದಕ್ಕಿಂತಲೂ ಮಿಗಿಲಾಗಿ ಆತ್ಮಾರ್ಥತೆಯನ್ನು ಅವರು ಹೊಂದಿದ್ದಾರೆಂದೂ ದುರ್ಬೋಧನೆಗಳಿಗೆ ವಿಧೇಯರಾಗಲು ಸಾಧ್ಯತೆ ಇಲ್ಲದ ಮಹಾ ಬುದ್ಧಿಶಾಲಿಗಳೂ ಸತ್ಯಾನ್ವೇಷಣಾಸಕ್ತಿಯನ್ನೂ ಸತ್ಯಧೀರತೆಯನ್ನೂ ಇತರರಿಗಿಂತ ಹೆಚ್ಚಾಗಿ ಹೊಂದಿರುವವರೂ ಅವರ ಪೈಕಿಯಲ್ಲಿದ್ದಾರೆಂದೂ ಡಾ| ಕೋವೂರ್ ಮತ್ತು ಅವರ ಅನುಯಾಯಿಗಳು ತಿಳಿದಿರುವುದು ಒಳಿತು.

ಈ ಸಾಲುಗಳನ್ನು ಬರೆಯುವ ನಾನು ಕಣ್ಣಾನೂರಿನ ಪತ್ರಿಕಾ ಸಮ್ಮೇಳನದಲ್ಲಿ ಭಾಗವಹಿಸಿದ ಓರ್ವನಾಗಿರುವೆನು. ನಾನು ಸಾಯಿಬಾಬ ಭಕ್ತನಲ್ಲ. ಸಾಯಿಬಾಬರ ಅದ್ಭುತ ಸಿದ್ಧಿಗಳ ರಹಸ್ಯಗಳನ್ನು ಬಯಲಿಗೆಳೆಯುವ ಮೂಲಕ ತಾನು ಸತ್ಯಮತಗಳನ್ನೆಲ್ಲಾ ಖಂಡಿಸಿ ತೋರಿಸುವನೆಂದೂ ಮತಾಚಾರ್ಯರಾದ ಪ್ರವಾದಿಗಳ ವಾದಗಳು ಸಹ ಅಸಂಗತವೂ ಅಡಿಸ್ಥಾನರಹಿತವೂ ಆಗಿದೆಯೆಂದು ಸಾಕ್ಷ್ಯಪಡಿಸುವೆನೆಂದೂ ಡಾ| ಕೋವೂರ್ ಭಾವಿಸುವರಾದರೆ ಅದು ದಯನೀಯವಾದ ಅಜ್ಞತೆಯ ಪ್ರಕಟನೆ ಮಾತ್ರವೆಂದು ಹೇಳಬಹುದು.

ಮತಗಳೆಲ್ಲಾ ಸಂಪೂರ್ಣ ಮಿಥ್ಯವೆಂದು ಅವರು ಹೇಳುತ್ತಾರೆ. ಆತ್ಮಿಕ ಸಿದ್ಧಿಗಳೆಲ್ಲಾ ಸುಳ್ಳೆಂದೂ ಹಾಗೆ ವಾದಿಸುವವರು ಕಪಟಿಗಳೋ ಮಾನಸಿಕ ರೋಗಿಗಳೋ ಆಗಿದ್ದಾರೆಂದೂ ಅವರು ಹೇಳುತ್ತಾರೆ.

ಮುಹಮ್ಮದ್ ಪೈಗಂಬರ್, ಯೇಸುಕ್ರಿಸ್ತ, ಮೋಶೆ, ಜೊರಾಸ್ಟರ್ ಮೊದಲಾದ ಮತಾಚಾರ್ಯರಾದ ಪ್ರವಾದಿಗಳ ಕುರಿತು ತಮ್ಮ ಅಭಿಪ್ರಾಯವೇನು? ಅವರು ಕಪಟವಾದ ವಾದಿಸಿದವರೋ ಅಥವಾ ಮಾನಸಿಕ ರೋಗಿಗಳೋ?

ಡಾ| ಕೋವೂರ್—ಇದು ಒಂದು ತುಂಟ ಪ್ರಶ್ನೆಯಾಗಿದೆ. ನನ್ನಿಂದ ಏನನ್ನಾದರೂ ಹೇಳಿಸಿ, ನಾನು ಪ್ರವಾದಿಗಳನ್ನು ಹೀನೈಸಿದೆ ಎಂದು ಘೋಷಿಸಬೇಕು!

ನಾನು—ನನಗೆ ಸಂಬಂಧಿಸಿ ಹೇಳುವುದಾದರೆ ಇದೊಂದು ಸಿದ್ಧಾಂತಪರವಾದ ಪ್ರಶ್ನೆಯಾಗಿದೆ.

ಏಕೆಂದರೆ, ಈ ಮಹಾತ್ಮರ ಅತ್ಯಾಕರ್ಷಕವಾದ ಪವಿತ್ರ ಜೀವಿತದ ಸೌಂದರ್ಯದಿಂದ ಮತಗಳು ನೆಲೆ ನಿಂತಿವೆ.

ಡಾ। ಕೋವೂರ್–ಅವರು ಬೇಕೆಂದೇ ಕಪಟವಾದ ಹೊರಡಿಸಿದವರೆಂದು ನಾನು ಹೇಳುವುದಿಲ್ಲ.

ನಾನು – ಹಾಗಾದರೆ ಅವರು ಮಾನಸಿಕ ರೋಗಿಗಳಾಗಿದ್ದರೆಂದೂ ಚಿತ್ತವಿಭ್ರಮೆ (Hallucination) ಯೇ ಅವರ ವಾದಗಳಿಗೆ ಕಾರಣವೆಂದೋ ನೀವು ಹೇಳುವುದು?

ಡಾ। ಕೋವೂರ್–ಖಂಡಿತವಾಗಿಯೂ!

ನಾನು ಸಾತ್ವಿಕ ಜೀವಿತದ ಮಹತ್ವವನ್ನು ಎತ್ತಿ ತೋರಿಸುತ್ತಾ ತಮ್ಮ ಜೀವಿತ ಸಿದ್ಧಾಂತಗಳನ್ನು ದೃಢಪಡಿಸಿ ಲೋಕದಲ್ಲಿ ಮಹಾ ಧಾರ್ಮಿಕ ಪರಿವರ್ತನೆಗಳನ್ನುಂಟುಮಾಡಲು ಇವರಿಗೆ ಹೇಗೆ ಸಾಧ್ಯವಾಯಿತು?

ಡಾ। ಕೋವೂರ್—ಬಹಳ ಬುದ್ಧಿಪೂರ್ವಕವಾಗಿ ವರ್ತಿಸುವ ವಿಜ್ಞಾನಿಗಳಾದ ಹುಚ್ಚರಿದ್ದಾರೆ. ಡಾ। ಭಾಭಾರವರ ಆತ್ಮದೊಂದಿಗೆ ಸಂಪರ್ಕವನ್ನು ಸ್ಥಾಪಿಸಿ ಅಣು ರಿಯಾಕ್ಟರಿನ ದೋಷಗಳನ್ನು ನಿವಾರಿಸಲು ತನಗೆ ಸಾಧ್ಯವಾಯಿತೆಂದು ಘೋಷಿಸಿ ಕಡೆಗೆ ಹುಚ್ಚರಾಸ್ಪತ್ರೆಯಲ್ಲಿ ಸೇರಬೇಕಾದ ಟ್ರೋಂಬೆಯ ಒಬ್ಬ ಭಾರತೀಯ ಅಣುಶಾಸ್ತ್ರ ವಿದಗ್ಧನು ಅಂತಹವರ ಪೈಕಿ ಒಬ್ಬ. ಅವರು ದೊಡ್ಡ ಒಂದು ವಿಜ್ಞಾನ ಗ್ರಂಥವನ್ನೇ ಬರೆದಿದ್ದಾರೆ.

ನಾನು – ಕಡೆಗೆ ಅಂತಹವರು ಹುಚ್ಚರಾಸ್ಪತ್ರೆಯಲ್ಲಿ ಸೇರಿಸಲ್ಪಟ್ಟರು ಎಂದು ಸಮ್ಮತಿಸಿದುದಕ್ಕೆ ಕೃತಜ್ಞತೆ. ಆದರೆ ಈ ಮಹಾ ಪ್ರವಾದಿಗಳ ಅಂತ್ಯ ಹಾಗೆ ಆಗಲಿಲ್ಲ. ಅವರು ವಿಜಯಶಾಲಿಗಳಾಗಿ ಲೋಕವು ಅವರ ಕಡೆಗೆ ಆಕರ್ಷಿತರಾಗಿ ಅವರ ಜೀವಿತ ಸಿದ್ಧಾಂತಗಳು ಅಂಗೀಕರಿಸಲ್ಪಟ್ಟವು.

ಡಾ। ಕೋವೂರ್–ಹಾಗೆ ಹಿಟ್ಲರ್ ಮಹಾ ವಿಜಯವನ್ನು ಪಡೆಯಲಿಲ್ಲವೇ? ಒಂದು ದೊಡ್ಡ ಜನಸಮೂಹವೇ ಅವರ ಹಿಂದೆ ಇರಲಿಲ್ಲವೇ?

ನಾನು – ಹಿಟ್ಲರಿಸಂ ಒಂದು ತಲೆಮಾರಿನಲ್ಲೇ ಮೇಲೆ ಬಂದು ಅಧಃಪತಿಸಿ ಮಣ್ಣುಪಾಲಾದುದನ್ನು ನಮಗೆ ಕಾಣಲು ಸಾಧ್ಯವಾಯಿತಲ್ಲವೇ! ತದ್ವಿರುದ್ಧವಾಗಿ ಪ್ರವಾದಿಗಳ ಸಿದ್ಧಾಂತಗನ್ನು ಸಾವಿರಾರು ವರ್ಷಗಳಿಂದ ಕೋಟಿಗಟ್ಟಲೆ ಜನರು ತಲತಲಾಂತರವಾಗಿ ಅಂಗೀಕರಿಸುತ್ತಾ ಬರುತ್ತಿದ್ದಾರೆ. ಅವರು ಮಾನಸಿಕ ರೋಗಿಗಳಾಗಿದ್ದರೆ ಇದು ಹೇಗೆ ಸಂಭವಿಸಿತು?

ಡಾ। ಕೋವೂರ್ – ನಿಮಗೆ ಇದರಲ್ಲಿ ಬಹುಸಂಖ್ಯಾತರ ಬೆಂಬಲವಿದೆ.

ನಾನು — ಡಾ। ಕೋವೂರ್! ನಾನು ಅಲ್ಪ ಸಂಖ್ಯಾತರಲ್ಲಿ ಅಲ್ಪ ಸಂಖ್ಯಾತರ ಒಂದು ವಿಭಾಗದವನಾಗಿದ್ದೇನೆ; ಅಹ್ಮದಿಯಾ ಸಂಘಟನೆಯ ಓರ್ವ ಸದಸ್ಯ!

(ಕಣ್ಣಾನೂರಿನಿಂದ ಹೊರಡುವ 'ಜನಕ್ಷೇಮಂ' ಎಂಬ ಪತ್ರಿಕೆಯಲ್ಲಿ ಹೀಗೆ ವಾರ್ತೆ ಪ್ರಕಟವಾಗಿದೆ:

"ಯೇಸುಕ್ರಿಸ್ತರೂ ಮುಹಮ್ಮದ್ ಪೈಗಂಬರರೂ ಆ ಹುಚ್ಚರ ಕೂಟದಲ್ಲಿ ಒಳಪಡುವರೋ, ಸಾವಿರಾರು ವರ್ಷಗಳು ಗತಿಸಿಯೂ ಅವರ ತತ್ವಗಳಿಗೆ ಅನುಯಾಯಿಗಳು ಉಂಟಾಗಲಿಲ್ಲವೇ ಎಂಬ ಒಂದು ಪ್ರಶ್ನೆಗೆ ಹಿಟ್ಲರನಿಗೂ ಅನುಯಾಯಿಗಳು ಉಂಟಾಗಲಿಲ್ಲವೇ ಎಂದು ಮರುಪ್ರಶ್ನೆಯುಂಟಾಯಿತು. ಹಿಟ್ಲರಿಸಂ ಅಧಃಪತಿಸಿತು, ಆದರೆ ಉಳಿದ ಎರಡು ಸಹ ಸಹಸ್ರ ವರ್ಷಗಳಿಂದ ಬಾಕಿಯಾದುದು ಹೇಗೆ ಎಂಬ ಪ್ರಶ್ನೆಗೆ ಉತ್ತರವಿರಲಿಲ್ಲ.'' –'ಜನಕ್ಷೇಮಂ' 18-11-76).

ಮುಹಮ್ಮದ್ ಪೈಗಂಬರ್, ಯೇಸುಕ್ರಿಸ್ತ, ಜೊರಾಸ್ಟರ್, ಕನ್‌ಫ್ಯೂಷಸ್, ಬುದ್ಧ, ಶ್ರೀಕೃಷ್ಣ ಮೊದಲಾದ ಮತಸ್ಥಾಪಕರಾದ ಪ್ರವಾದಿಗಳು ಮನೋರೋಗಿಗಳೂ ಅವರ ದಿವ್ಯಾನುಭವಗಳು ಮಿಥ್ಯಾಸಂಕಲ್ಪಗಳೂ ಆಗಿದ್ದರೆ, ಅವರು ಮಾನಸಿಕ ರೋಗಿಗಳಾಗಿ ಇದ್ದುಕೊಂಡೇ ಲೋಕಕ್ಕೆ ಬುದ್ಧಿಪರವಾದ ನೇತೃತ್ವವನ್ನು ಕೊಡಲು ಅವರಿಗೆ ಸಾಧ್ಯವಾಗಿದ್ದರೆ, ಡಾ। ಎ. ಟಿ. ಕೋವೂರ್ ಒಬ್ಬ ಮಾನಸಿಕ ರೋಗಿಯಲ್ಲವೆಂಬುದಕ್ಕೆ ಯಾವುದೇ ಸಾಕ್ಷ್ಯವನ್ನು ಕೊಡುವರೆ ಸಾಧ್ಯವಿಲ್ಲವೆಂದು ಅವರನ್ನು ಹಿಂಬಾಲಿಸುವವರು ಚೆನ್ನಾಗಿ ತಿಳಿದುಕೊಳ್ಳಬೇಕಾಗಿದೆ! ಬುದ್ಧಿಪೂರ್ವಕವಾದ ಪ್ರವರ್ತನೆಗಳೂ ವಿವೇಕಯುತವಾದ ವಿಚಾರಗಳೂ ಮಾನಸಿಕ ರೋಗದ ಲಕ್ಷಣವೆಂದಾದರೆ ಲೋಕಗುರುಗಳಾದ ಮತಾಚಾರ್ಯರನ್ನು ಭ್ರಾಂತರೆಂದು ತೋರಿಸುವ ಆಧುನಿಕ ಮನಶ್ಶಾಸ್ತ್ರವೆಂಬ ಹಳೆಯ ಪುರಾಣವನ್ನು ತಾತ್ಸಾರಭಾವದಿಂದ ವಿವೇಕಶಾಲಿಗಳು ತೆಗೆದೆಸೆಯುವರು!

(ಶೇಷ ಮುಂದಿನ ಸಂಚಿಕೆಯಲ್ಲಿ)

—೦—೦—

# ಸ್ನೇಹದಿಂದ ಜನರ ಹೃದಯಗಳನ್ನು ಜಯಿಸುವೆವು

—ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್

ಅಹ್ಮದಿಯಾ ಸಂಘಟನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಅವರು ಇತ್ತೀಚೆಗೆ ಮೂರು ವಾರಗಳ ಕಾಲ ಅಮೇರಿಕದಲ್ಲಿ ಮತ್ತು ಕೆನಡದಲ್ಲಿ ಪರ್ಯಟನೆ ನಡೆಸಿದಾಗ ಹಲವು ಸಭೆಗಳಲ್ಲಿ ಮಾತನಾಡಿದರು. ಹಲವು ಪತ್ರಿಕಾ ಸಮ್ಮೇಳನಗಳನ್ನು ನಡೆಸಿದರು. ಹಲವು ಪತ್ರಕರ್ತರು ಹಾಗೂ ರೇಡಿಯೋ ಟೆಲಿವಿಷನ್ ಪ್ರತಿನಿಧಿಗಳು ಅವರೊಡನೆ ಸಂದರ್ಶನ ನಡೆಸಿದರು.

ವಾಷಿಂಗ್‌ಟನಿನ ಅಹ್ಮದಿಯಾ ಮಿಶನ್ ಹೌಸಿನಲ್ಲಿ 'ಮ್ಯೂಚ್ವಲ್ ಬ್ಲ್ಯಾಕ್ ನ್ಯೂಸ್' (Mutual Black News) ಎಂಬ ರೇಡಿಯೋ ನಿಲಯದ ಪ್ರತಿನಿಧಿ ಮಿಸ್. ಲವೋನಿಯ ಪೆರಿಮಾನ್ ಮತ್ತು 'ರಿಲೀಜಿಯಸ್ ನ್ಯೂಸ್ ಸರ್ವೀಸ್'ನ ಪ್ರತಿನಿಧಿ ಜೋನ್ ನೋಯೆಟ್ನೆ ಎಂಬೀರ್ವರು ಖಲೀಫರೊಡನೆ ನಡೆಸಿದ ಸಂಭಾಷಣೆಯಲ್ಲಿ ಮಿಸ್ ಪೆರಿಮಾನ್ ಕೇಳಿದ ಪ್ರಶ್ನೆಗಳನ್ನು ಮತ್ತು ಖಲೀಫರು ನೀಡಿದ ಉತ್ತರಗಳನ್ನು ಈ ಕೆಳಗೆ ಕೊಡಲಾಗಿದೆ:

ಮಿಸ್ ಲವೋನಿಯ ಪೆರಿಮಾನ್-ತಮ್ಮ ಸ್ಥಾನ ಮತ್ತು ಪದವಿಯೇನು? ಅಮೇರಿಕದವರಿಗೆ ನಿಮ್ಮ ಸಂದೇಶವೇನು ?

ಹಝ್ರತ್ ಖಲೀಫ — ನಾನು ಒಂದು ಮತ ಸಂಘಟನೆಯ ಮುಖಂಡನೂ ಇಮಾಮನೂ ಆಗಿರುವೆನು. ಆದರೆ ನಾನೊಬ್ಬ ಮನುಷ್ಯ. ಒಬ್ಬ ಮನುಷ್ಯನೂ ಇನ್ನೊಬ್ಬ ಮನುಷ್ಯನೂ ಪರಸ್ಪರ ಮನುಷ್ಯನೆಂಬ ನೆಲೆಯಲ್ಲಿ ಯಾವುದೇ ವ್ಯತ್ಯಾಸವನ್ನು ಕಲ್ಪಿಸಬಾರದು. ವರ್ಗ — ವರ್ಣ ಭೇದವಿಲ್ಲದೆ ಮನುಷ್ಯರೆಲ್ಲರೂ ಸಮಾನರೆಂಬ ಸಿದ್ಧಾಂತವನ್ನು ಎತ್ತಿ ತೋರಿಸುವುದು ಇಸ್ಲಾಂ ಧರ್ಮ ಮಾತ್ರವಾಗಿದೆ. ಪರಿಷ್ಕೃತವೆಂದೂ ಪ್ರಗತಿಪರವೆಂದೂ ಹೇಳಲ್ಪಡುವ ಆಧುನಿಕ ಲೋಕದಲ್ಲಿ ಮನುಷ್ಯರೆಡೆಯಲ್ಲಿ ಪರಸ್ಪರ ಭಿನ್ನತೆ ವರ್ಧಿಸುತ್ತಿದೆ. ಇಸ್ಲಾಮಿಕ ಪಾಠಗಳನ್ನು ಪ್ರಾಯೋಗಿಕವನ್ನಾಗಿ ಮಾಡಿ ಯಥಾರ್ಥ ಸಮತ್ವವನ್ನು ಲೋಕದಲ್ಲಿ ಸ್ಥಾಪಿಸಿ ಅಸಮತ್ವವನ್ನು ನೀಗಿಸುವುದು ಇಂದಿನ ಆವಶ್ಯಕತೆಯಾಗಿದೆ.

ಮಿಸ್ ಪೆರಿಮಾನ್ - ಲೋಕದ ಇಂದಿನ ಅವಸ್ಥೆಯನ್ನು ಬದಲಿಸಲು ಒಂದು ಕ್ರಾಂತಿ ಅಗತ್ಯವೆಂದು ತಾವು ಭಾವಿಸುತ್ತೀರೋ?

ಹಝ್ರತ್ ಖಲೀಫ - 'ಕ್ರಾಂತಿ' ಎಂಬ ಸಂಕೇತಾರ್ಥದಲ್ಲಿ ನನಗೆ ಯಾವುದೇ ರೀತಿಯ ಕ್ರಾಂತಿಯಲ್ಲಿ ವಿಶ್ವಾಸವಿಲ್ಲ. ಆದರೆ ಸನ್ಮಾರ್ಗದಿಂದ ಕೂಡಿದ ಹಾಗೂ ಆತ್ಮಿಕವಾದ ಕ್ರಾಂತಿಯಲ್ಲಿ ನನಗೆ ನಂಬಿಕೆ ಇದೆ. ಅದಕ್ಕೆ ಬಲಪ್ರಯೋಗದ ಅಗತ್ಯವಿಲ್ಲ. ಮನುಷ್ಯನು ಸಮುದಾಯದಲ್ಲಿ ಸ್ನೇಹದಿಂದಲೂ ಪ್ರೀತಿಯಿಂದಲೂ ವರ್ತಿಸುತ್ತಾ ಮನುಷ್ಯರ ಸೇವೆ ಮಾಡುತ್ತಾ ಈ ಕ್ರಾಂತಿಯನ್ನು ಸಾಧಿಸಬೇಕಾಗಿದೆ.

ಮಿಸ್ ಪೆರಿಮಾನ್ — ಲೋಕದಲ್ಲಿ ಇಸ್ಲಾಂ ಸ್ಥಾಪಿಸಲು ಉದ್ದೇಶಿಸುವ ಸಮತ್ವದ ರೂಪ ಯಾವುದು?

ಹಝ್ರತ್ ಖಲೀಫ-ಇತರ ಕೆಲವು ಸಾಮೂಹಿಕ ವ್ಯವಸ್ಥೆಗಳಲ್ಲಿಯೂ ಸಮತ್ವವು ಘೋಷಿಸಲ್ಪಡುವುದಾದರೂ ಪ್ರಾಯೋಗಿಕವಾಗಿ ಅದು ಹೊರಬರುವುದಿಲ್ಲ. ಉದಾಹರಣೆಗಾಗಿ, ಕಮ್ಯೂನಿಸಂ ಸಮತ್ವವನ್ನು ಘೋಷಿಸುತ್ತದೆ. 'ಪ್ರತಿಯೊಬ್ಬನಿಗೂ ಅವನ ಅಗತ್ಯಾನುಸಾರವಾಗಿ' (To each according to his need) ಎಂಬುದು ಕಮ್ಯೂನಿಸಂ ಎತ್ತಿಹಿಡಿಯುವ ಒಂದು ಸಿದ್ಧಾಂತವಾಗಿದೆ. ಪ್ರಥಮ ಶ್ರವಣದಲ್ಲಿ ಇದು ತುಂಬಾ ಆಕರ್ಷಕವಾಗಿ ತೋರಬಹುದು. ಆದರೆ ಅಗತ್ಯ (Need) ಎಂಬುದಕ್ಕೆ ಕಮ್ಯೂನಿಸಮ್ಮಿನಲ್ಲಿ ಒಂದು ನಿರೂಪಣೆ ನೀಡಲಾಗಿಲ್ಲ. ಆ ಕಾರಣದಿಂದ ಈ ಲಕ್ಷ್ಯವನ್ನು ಪ್ರಯೋಗದಲ್ಲಿ ತರಲು ಸಾಧ್ಯವಾಗಿಲ್ಲ. ವೈಟ್

ರಶ್ಯದ ಆವಶ್ಯಕತೆಗಳೂ ಏಷ್ಯನ್ ರಶ್ಯದ ಆವಶ್ಯಕತೆಗಳೂ ಒಂದೇ ತರದವುಗಳೆಂದು ಅವರು ಅಂಗೀಕರಿಸಲಿಲ್ಲ. ಎರಡು ಪರಸ್ಪರ ಆಕಾಶ ಭೂಮಿಯ ಅಂತರದಲ್ಲಿವೆ. ಇದಕ್ಕೆ ಬದಲಾಗಿ ಇಸ್ಲಾಂ 'ಆಗತ್ಯ' ಎಂಬ ಸಂಕೇತ ಪದವನ್ನು ಉಪಯೋಗಿಸದೆ 'ಹಕ್ಕು' ಎಂಬ ಪದವನ್ನು ಉಪಯೋಗಿಸಿದೆ. ಅಲ್ಲಾಹು ಎಲ್ಲಾ ಮನುಷ್ಯರಿಗೂ ನಾಲ್ಕು ತರದ ಶಕ್ತಿಗಳನ್ನು ಪ್ರದಾನ ಮಾಡಿರುವನು· ಅವು ಶಾರೀರಿಕ ಶಕ್ತಿ, ಬುದ್ಧಿ ಶಕ್ತಿ, ನೈತಿಕ ಶಕ್ತಿ, ಆತ್ಮಿಕ ಶಕ್ತಿ ಎಂಬಿವುಗಳಾಗಿವೆ. ಈ ನಾಲ್ಕು ರೀತಿಯ ಶಕ್ತಿಗಳನ್ನು ಪ್ರದರ್ಶಿಸಲು ಸಮಾನವಾದ ಸಂದರ್ಭಗಳು ಲಭಿಸಬೇಕೆಂದು ಇಸ್ಲಾಂ ಉದ್ದೇಶಿಸುತ್ತದೆ. ಈ ನಾಲ್ಕು ವಿಧದ ಶಕ್ತಿಗಳನ್ನು ಪ್ರಕಟಿಸುವರೆ ಸಂದರ್ಭವನ್ನು ನಿಷೇಧಿಸುವುದು ಇಸ್ಲಾಮಿಕ ದೃಷ್ಟಿಯಲ್ಲಿ ಶೋಷಣೆಯಾಗಿದೆ. ಎಲ್ಲಾ ಮನುಷ್ಯರಿಗೂ ದೇವರು ನೀಡಿರುವ ಈ ಸಾಮರ್ಥ್ಯಗಳನ್ನು ಪೂರ್ಣ ರೀತಿಯಲ್ಲಿ ಪ್ರದರ್ಶಿಸುವ ಸಮಾನ ಹಕ್ಕು ಇರಬೇಕಾಗಿದೆಯೆಂದು ಇಸ್ಲಾಂ ಸಿದ್ಧಾಂತಿಸುವಾಗ ಹಕ್ಕುಗಳ ಆಧಾರದಲ್ಲಿ ಎಲ್ಲಾ ಮನುಷ್ಯರನ್ನು ಒಂದೇ ವಿತಾನದಲ್ಲಿ ಅದು ನಿಲ್ಲಿಸುತ್ತದೆ.

ಮಿಸ್ ಪೆರಿಮಾನ್ — ಇಸ್ಲಾಂ ಸ್ತ್ರೀಯರಿಗೂ ಪುರುಷರಿಗೂ ಈ ಸಮಾನ ಹಕ್ಕುಗಳನ್ನು ಅಂಗೀಕರಿಸುತ್ತದೆಯೋ? ಅವರೆಡೆಯಲ್ಲಿ ಯಥಾರ್ಥ ಸಮತ್ವ ಅನುಮತಿಸಲ್ಪಡುತ್ತದೆಯೋ?

ಹಝ್ರತ್ ಖಲೀಫ — ಹಕ್ಕುಗಳ ಸಂಬಂಧಿಸಿ ಸ್ತ್ರೀಯರನ್ನೂ ಪುರುಷರನ್ನೂ ಇಸ್ಲಾಂ ಸಮಾನವಾಗಿಯೇ ಕಾಣುತ್ತದೆ. ದೇವರು ನೀಡಿದ ಶಕ್ತಿಗಳನ್ನು ಪೂರ್ಣವಾಗಿ ಪ್ರಕಟಗೊಳಿಸುವ ಅವಕಾಶ ಉಂಟಾಗಬೇಕು. ಪುರುಷರಿಗೆಂಬಂತೆ ಸ್ತ್ರೀಯರಿಗೂ ಈ ಹಕ್ಕನ್ನು ಅದು ಅಂಗೀಕರಿಸಿ ಕೊಡುತ್ತದೆ. ಇದರಲ್ಲಿ ಯಾವುದೇ ವ್ಯತ್ಯಾಸವನ್ನು ಇಸ್ಲಾಂ ಕಲ್ಪಿಸುವುದಿಲ್ಲ. ಹೀಗೆ ಇಸ್ಲಾಂ ಯಥಾರ್ಥವಾದ ಸಮತ್ವವನ್ನು ಎತ್ತಿತೋರಿಸುತ್ತದೆಂದು ಕಾಣಬಹುದು. ಆದರೆ ಕೆಲವು ಶಾರೀರಿಕ ಸಾಮರ್ಥ್ಯಗಳನ್ನು ದೇವರು ಪುರುಷರಿಗೆ ಕೊಟ್ಟಿದ್ದರೆ ಸ್ತ್ರೀಯರಿಗೆ ಕೊಡಲಿಲ್ಲ. ಹಾಗೆಯೇ ಸ್ತ್ರೀಯರಿಗೆ ನೀಡಲ್ಪಟ್ಟ ಕೆಲವು ಪ್ರತ್ಯೇಕ ಶಕ್ತಿಗಳು ಪುರುಷರಿಗಿಲ್ಲ. ಉದಾಹರಣೆಗಾಗಿ, ಶಿಶುಗಳನ್ನು ಪ್ರಸವಿಸುವ ಶಕ್ತಿ ಸ್ತ್ರೀಯರಿಗೆ ಮಾತ್ರ ಇದೆ. ಸ್ತ್ರೀಯರಂತೆ ಪುರುಷರಿಗೂ ಶಿಶುಗಳನ್ನು ಹೆರಲು ಸಾಧ್ಯವಾಗಬೇಕೆಂದು ಆಗತ್ಯಪಡಿಸಿದರೆ ಅದು ಯಥಾರ್ಥವಾದ ಸಮತ್ವದ ರೀತಿಯಲ್ಲಿ ಒಂದು ಅವಶ್ಯವಾಗುವುದಿಲ್ಲ. ಸ್ತ್ರೀ ಪುರುಷರಿಗೆ ದೈವದತ್ತವಾದ ಶಕ್ತಿಗಳನ್ನು ಸಮಾನಗೊಳಿಸಲಿಕ್ಕಾಗಿಯಲ್ಲ ಇಸ್ಲಾಂ ಉದ್ದೇಶಿಸುವುದು. ಇಸ್ಲಾಮಿನ ಉದ್ದೇಶ ಪುರುಷರಿಗೂ ಸ್ತ್ರೀಯರಿಗೂ ದೊರೆತ ಶಕ್ತಿಗಳನ್ನು ಅವರವರ ವಲಯದಲ್ಲಿ ಸಂಪೂರ್ಣ ಅಭಿವೃದ್ಧಿಗೊಳಿಸಲು ಸರ್ವರಿಗೂ ಸಮಾನ ಅವಕಾಶಗಳನ್ನು ಒದಗಿಸಿಕೊಡುವುದಾಗಿದೆ. ಇದು ಮನುಷ್ಯ ಸ್ವಭಾವಕ್ಕೆ ಪೂರ್ಣವಾಗಿ ಅನುಯೋಜ್ಯವಾಗಿದೆ.

ಮಿಸ್ ಪೆರಿಮಾನ್ — ಎಲಿಜಾ ಮುಹಮ್ಮದರ 'ಬ್ಲೇಕ್ ಮುಸ್ಲಿಂ ಸಂಘಟನೆ' ಮತ್ತು ಅಹ್ಮದಿಯಾ ಸಂಘಟನೆಗಳೊಳಗೆ ಸಾಮಾನ್ಯವಾದುದೇನಿದೆ?

ಹಝ್ರತ್ ಖಲೀಫ—ಬ್ಲೇಕ್ ಮುಸ್ಲಿಮರೂ ಅಹ್ಮದಿಯರೂ ಪರಸ್ಪರ ಮನುಷ್ಯರೆಂಬ ನೆಲೆಯಲ್ಲಿ ವ್ಯತ್ಯಾಸವೇನೂ ಇಲ್ಲ. ಎರಡು ಪಕ್ಷದವರೂ ಮನುಷ್ಯರೇ ಆದರೆ ಅಹ್ಮದಿಯರಿಗೆ ಬಲಪ್ರಯೋಗದಲ್ಲಿ ನಂಬಿಕೆಯೇ ಇಲ್ಲ. ಅವರು ಬಲಪ್ರಯೋಗದ ಸಮೀಪಕ್ಕೆ ಸಹ ಹೋಗಲು ತಯಾರಾಗದೆ ಸ್ನೇಹ, ಪ್ರೀತಿ, ನಿಸ್ವಾರ್ಥ ಸೇವೆಗಳ ಮುಖಾಂತರ ಮನುಷ್ಯ ವಂಶದ ಹೃದಯಗಳನ್ನು ಜಯಿಸುವರೆಂದು ನಾವು ನಂಬುತ್ತೇವೆ. ಈ ವಿಶ್ವಾಸಕ್ಕೆ ಆಧಾರ ದೈವಿಕ ವಾಗ್ದಾನಗಳಾಗಿವೆ. ದೈವಹಿತವನ್ನನುಸರಿಸಿದ ಜೀವನವನ್ನು ಜನರು ನಡೆಸುವರು. ಇಸ್ಲಾಮಿನ ಪಾಠಗಳನ್ನನುಸರಿಸಿ ಜೀವಿಸುವ ಮುಖಾಂತರ ಅದು ಸಾಧಿತವಾಗುವುದು.

# *ರೌಝಾ ಬಾಲ್-ಯೇಸುಕ್ರಿಸ್ತರ ಸಮಾಧಿ?

**ಲೇಖಕ: ಮಧೂರ್ ಕಪೂರ್**

**ಶ್ರೀನಗರದ ಹಳೆಯ ಭಾಗದ ಒಂದು ಕಿರಿದಾದ ಓಣಿಯಲ್ಲಿ ಹಲವಾರು ಅಂಗಡಿಗಳ ಸಮೂಹಗಳ ಹಿಂಭಾಗದಲ್ಲಿ ಒಂದು ಸಾಮಾನ್ಯ ಸ್ಮಾರಕವಾದ ರೌಝಾಬಾಲನ್ನು ನಾನು ಕಂಡೆನು. ಕೋಣೆಯ ಮಧ್ಯದಲ್ಲಿರುವ ಒಂದು ಹಾಸುಗಲ್ಲಿಗೆ ಕೈತೋರಿಸುತ್ತಾ ಅದರಡಿಯಲ್ಲೊಂದು ಪುರಾತನ ಸಮಾಧಿಯಿದೆಯೆಂದೂ ಅದು ಯೂಝ್ ಆಸಫ್ ಎಂದು ಕರೆಯಲ್ಪಡುವ ವ್ಯಕ್ತಿಯ ಅಥವಾ ಯೇಸುಕ್ರಿಸ್ತನದಾಗಿದೆಯೆಂದೂ ಆ ಸ್ಮಾರಕ ಭವನದ ಮೇಲ್ನೋಟಗಾರನು ನನ್ನೊಡನೆ ಹೇಳಿದನು.**

ಶಾಲಿವಾಹನ ಮಹಾರಾಜನು ಸುಮಾರು ಕ್ರಿ. ಶ. 78ರಲ್ಲಿ ಹಿಮಾಲಯ ಪ್ರದೇಶಕ್ಕೆ ಭೇಟಿ ಕೊಟ್ಟುದರ ಕುರಿತು ಒಂದು ಕಥೆಯು ಸೂತನ ಭವಿಷ್ಯ ಮಹಾ ಪುರಾಣದಲ್ಲಿ ಉಲ್ಲೇಖಿತವಾಗಿದೆ. ಅಲ್ಲಿ ಹೂಣರ ರಾಜ್ಯದಲ್ಲಿ ಶ್ವೇತ ವಸ್ತ್ರಧಾರಿಯಾದ ಸಂತನಂತೆ ತೋರುವ ಗೌರವರ್ಣದ ವ್ಯಕ್ತಿಯನ್ನು ಆತನು ಕಂಡನು. ಶಾಲಿವಾಹನನು ಆತನೊಡನೆ "ನೀವು ಯಾರು?'' ಎಂದು ಪ್ರಶ್ನಿಸಿದಾಗ ಆತನು ಈರೀತಿ ಉತ್ತರವಿತ್ತನು: "ನಾನು ಕುಮಾರಿಯ ಗರ್ಭದಲ್ಲಿ ಜನಿಸಿದ ದೇವಪುತ್ರನು. ನಾನು ಮ್ಲೇಚ್ಛ ಧರ್ಮ ಬೋಧಕನೂ ಸತ್ಯ ಸೂತ್ರಗಳನ್ನು ಅನುಸರಿಸುವವನೂ ಆಗಿರುವೆನು."

"ನಿಮ್ಮ ಧರ್ಮ ಯಾವುದು?" ಎಂದು ರಾಜನು ಕೇಳಿದಾಗ, "ಸತ್ಯವು ಮರೆಯಾಗಿ ಸತ್ಸಂಪ್ರದಾಯಗಳು ಅಳಿದು ಹೋದಾಗ ನಾನು ಮ್ಲೇಚ್ಛ ದೇಶದಲ್ಲಿ ಮಸೀಹನಾಗಿ ಬಂದೆನು. ನನ್ನ ಆಗಮನದಿಂದ, ಅಪರಾಧಗೈದವರು ತಕ್ಕ ಶಿಕ್ಷೆ ಪಡೆದರು. ನಾನು ಸಹ ಅವರ ಕೈಗೆ ಸಿಕ್ಕಿ ಕಷ್ಟಪಡಬೇಕಾಯಿತು'' ಎಂದು ಉತ್ತರಿಸಿದನು. ಆತನ ಧರ್ಮದ ಕುರಿತು ಇನ್ನೂ ವಿವರಣೆ ಕೇಳಿದಾಗ ಈರೀತಿ ಉತ್ತರ ದೊರೆಯಿತು: "ಪ್ರೇಮ, ಸತ್ಯ ಮತ್ತು ಮನಶ್ಶುದ್ಧಿ ಇದೇ ನನ್ನ ಧರ್ಮ. ನಾನು ಮಸೀಹ (ಗುಣಪಡಿಸುವವ)ನೆಂದು ಕರೆಯಲ್ಪಟ್ಟಿರುವೆನು.'' ಶಾಲಿವಾಹನ ಮಹಾರಾಜನು ಆ ಮಹಾತ್ಮನಿಗೆ ಆದರದಿಂದ ನಮಸ್ಕರಿಸಿ ಹಿಂದಿರುಗಿದನು.

ಯೇಸುಕ್ರಿಸ್ತರು ಶಿಲುಬೆಗೆ ಕೊಡಲ್ಪಟ್ಟನಂತರ ಕಾಶ್ಮೀರಕ್ಕೆಭೇಟಿಇತ್ತರೇ? ಯೂಝ್ ಆಸಫ್ ಯಾರು? ರೌಝಾಬಾಲ್ ಎಂದು ಕರೆಯಲ್ಪಡುವ ಸಮಾಧಿಯ ಸ್ಥಳದಲ್ಲಿ ದೊರೆತ ಪುರಾತನ ಕಡತವೊಂದರಲ್ಲಿ ಯೂಝ್ ಆಸಫರ ಸಮಾಧಿ ಬಹಳ ಪ್ರಸಿದ್ಧವೆಂದೂ ಹಲವಾರು ಜನರು ತಮ್ಮ ಆದರಗಳನ್ನು ಅರ್ಪಿಸಲು ಅಲ್ಲಿಗೆ ಭೇಟಿ ಕೊಡುತ್ತಿರುವರೆಂದೂ ಬರೆಯಲಾಗಿದೆ. ಕಾಶ್ಮೀರವನ್ನು ಗೋಪದತ್ತನೆಂಬ ರಾಜನು ಆಳುತ್ತಿದ್ದಾಗ ಯೂಝ್ ಆಸಫ್ ಬಂದರೆಂದೂ ಅವರು 120 ವರ್ಷಗಳ ತನಕ ಜೀವಿಸಿ ಧರ್ಮ ಪ್ರಚಾರ ಮಾಡುತ್ತಿದ್ದರೆಂದೂ ಸಹ ಅದರಲ್ಲಿ ಬರೆಯಲಾಗಿದೆ. ಈ ದಾಖಲೆಯು ಇಂದಿಗೂ ಸುರಕ್ಷಿತವಾಗಿದೆ. ಲಡಾಖಿನಲ್ಲಿರುವ ಹಿಮಿಸ್ ಮಠದಲ್ಲಿರುವ ಟಿಬೇಟಿಯನ್ ಮತ್ತು ಪಾಲಿ ಭಾಷೆಗಳಲ್ಲಿರುವ ಹಸ್ತಪ್ರತಿಗಳಲ್ಲಿ ಯೇಸುಕ್ರಿಸ್ತರು ಲೆಹ್ ನಗರಕ್ಕೆ ಭೇಟಿಯಿತ್ತಿದ್ದರೆಂದೂ ಜನರಿಂದ ಸ್ವಾಗತಿಸಲ್ಪ

* ನವದೆಹಲಿಯಿಂದ ಹೊರಡುವ "ಸೂರ್ಯ ಇಂಡಿಯಾ" ಎಂಬ ಇಂಗ್ಲಿಷ್ ಮಾಸಪತ್ರಿಕೆಯ ಡಿಸೆಂಬರ್ ಸಂಚಿಕೆಯಲ್ಲಿ ಬಂದ ಲೇಖನ

ಟ್ಟಿದ್ದರೆಂದೂ ಬರೆಯಲಾಗಿದೆ. ಯೇಸುಕ್ರಿಸ್ತರು ಶಿಲುಬೆಗೆ ಕೊಡಲ್ಪಟ್ಟ ನಂತರ ಕಾಶ್ಮೀರಕ್ಕೆ ಬಂದಿದ್ದರೆಂಬ ಕಥೆಯು ಬಹಳ ವಿಸ್ತೃತವಾಗಿ ಪ್ರಚಾರದಲ್ಲಿದೆಯೆಂದು ಲೆಹ್‌ನಲ್ಲಿರುವ ಮೊರೋವಿಯನ್ ಮಿಷನ್ (Morovian Mission) ಎಂಬ ಕ್ರೈಸ್ತ ಸಂಘಕ್ಕೆ ಸಂಬಂಧಿಸಿರುವ ಇಬ್ಬರು ಜರ್ಮನರಾದ ಡಾಕ್ಟರ್ ಮಾರ್ಕ್ಸ್ ಮತ್ತು ಡಾಕ್ಟರ್ ಫ್ರಾಂಕ್ ಸಮ್ಮತಿಸಿರುತ್ತಾರೆ.

ಯೂಝ್ ಆಸಫ್ ಮತ್ತು ಯೇಸುಕ್ರಿಸ್ತರು ಒಬ್ಬರೇ ಎಂದು ತಿಳಿಸುವ ಇನ್ನಿತರ ಹಲವು ಚಾರಿತ್ರಿಕ ಗ್ರಂಥಗಳೂ ಇವೆ.

ಕಾಶ್ಮೀರದ ಪ್ರಥಮ ಮುಸ್ಲಿಮ್ ಚರಿತ್ರೆಗಾರ ಮುಲ್ಲಾನಾದಿರಿ ಎಂಬವರು "ಯೂಝ್ ಆಸಫ್ ಪವಿತ್ರ ಭೂಮಿಯಿಂದ Holy Land) ಕಾಶ್ಮೀರ ಕಣಿವೆಗೆ ತಮ್ಮ ದೌತ್ಯವನ್ನು ಬಹಿರಂಗಗೊಳಿಸಲು ಬಂದಿದ್ದರು'' ಎಂದು ಬರೆದಿರುವರು. ಆ ಸಮಯದಲ್ಲಿ ಸುಲೈಮಾನ್ ಎಂಬ ಪಾರಸಿಕನು ಶಂಕರಾಚಾರ್ಯ ದೇವಾಲಯದ ಗುಮ್ಮಟವನ್ನು ಜೀರ್ಣೋದ್ಧಾರಗೊಳಿಸಲು ನಿಯುಕ್ತನಾಗಿದ್ದನು. ಆತನು ಒಂದು ಕಲ್ಲಿನಲ್ಲಿ ಈ ರೀತಿ ಕೆತ್ತಿದನು. "ಈ ಕಾಲದಲ್ಲಿ ಯೂಝ್ ಆಸಫ್ ತಾನು ಪ್ರವಾದಿಯೆಂದು ಘೋಷಿಸಿದರು. ವರ್ಷ ಐವತ್ನಾಲ್ಕು" ಇನ್ನೊಂದು ಶಿಲಾ ಶಾಸನದಲ್ಲಿ "ಆತನು ಯೂಸು, ಇಸ್ರಾಯಿಲ್ ಸಂತತಿಗಳಿಗೆ ಬಂದ ಪ್ರವಾದಿ'' ಎಂದು ಬರೆಯಲಾಗಿತ್ತು. ಈ ಶಾಸನಗಳನ್ನು ಈಗ ಸ್ಪಷ್ಟವಾಗಿ ಓದಲಾಗದಿದ್ದರೂ ಇವುಗಳನ್ನು ಜಹಾಂಗೀರ್ ಚಕ್ರವರ್ತಿಯ ಆಳ್ವಿಕೆಯ ಕಾಲದ ವರೆಗೆ ಸಹ ಓದಲು ಸಾಧ್ಯವಿದ್ದಿತೆಂಬುದಕ್ಕೆ ದಾಖಲೆಗಳಿವೆ. ಆ ಚಕ್ರವರ್ತಿಯ ಕಾಲದಲ್ಲಿ ಜೀವಿಸಿದ್ದ ಖ್ವಾಜಾ ಹೈದರ್ ಮಲಿಕ್ ಚದೂರ ಎಂಬ ಚರಿತ್ರೆಗಾರರು ತಮ್ಮ "ತಾರೀಖೆ ಕಾಶ್ಮೀರ್'' ಎಂಬ ಗ್ರಂಥದಲ್ಲಿ ಈ ಶಾಸನಗಳ ಕುರಿತು ಬರೆದಿರುವರು.

ಆಪತ್ಕಾಲಗಳಲ್ಲಿ ಯೇಸುಕ್ರಿಸ್ತರು ಪರ್ವತಗಳಲ್ಲಿ ಆಶ್ರಯ ಪಡೆಯುತ್ತಿದ್ದರು. ಸಮಾಧಿಯಿಂದೆದ್ದ ನಂತರ ಯೇಸುಕ್ರಿಸ್ತರು ಗೆತ್ಸೆಮನೆಯಲ್ಲಿರುವ ಓಲಿವ್ ಪರ್ವತಕ್ಕೆ ಹೋದರು. ಅದರ ಶಿಖರದಲ್ಲಿ ಒಂದು ಶ್ವೇತಭವನವಿದ್ದಿತು. ಶಿಷ್ಯರನ್ನು ಬೀಳ್ಕೊಟ್ಟು ಪರ್ವತದ ಇಳಿಜಾರುಗಳನ್ನೇರಲುಪಕ್ರಮಿಸಿದಾಗ ಅವರು ದಟ್ಟವಾದ ಮೋಡಗಳಿಂದಾವರಿಲ್ಪಟ್ಟರು. ಇಲ್ಲಿ ನಡೆದುದು ಯೇಸುಕ್ರಿಸ್ತರ ಆಕಾಶಾರೋಹಣವಲ್ಲವೆಂದೂ ಅವರು ಪರ್ವತದ ಬದಿಯಲ್ಲಿ ಜೆರುಸಲೇಮಿನಿಂದ ದೂರವಾಗಿ ದೈಹಿಕವಾಗಿ ಮರೆಯಾದರೆಂಬುದು ಸಂಭವ್ಯವೆಂದೂ ಹೇಳಬಹುದು ಹುಡುಕಲ್ಪಡುತ್ತಿದ್ದ ಯೇಸುಕ್ರಿಸ್ತರಿಗೆ ಈರೀತಿಯು ತಪ್ಪಿಸುವಿಕೆ ಮನಸ್ಸಿನಲ್ಲಿದ್ದಿತೆಂದು ಬೈಬಲಿನಲ್ಲಿ ಉಲ್ಲೇಖಿತವಾದ ಈ ಕೆಳಗಿನ ಅವರ ವಚನದಿಂದ ತಿಳಿಯಬಹುದು.

"ನಾನು ನನ್ನ ದಾರಿಯಲ್ಲಿ ಹೋಗುತ್ತೇನೆ ನೀವು ನನ್ನನ್ನು ಹುಡುಕುವಿರಿ; ಮತ್ತು ನಿಮ್ಮ ಪಾಪದಲ್ಲೇ ಸಾಯುವಿರಿ. ನಾನು ಹೋಗುವಲ್ಲಿಗೆ ನೀವು ಬರಲಾರಿರಿ" (John VIII·21).

ನಿಕೋಲಸ್ ನೊಟೋವಿಚ್ ಎಂಬ ರಶ್ಯನ್ ಪ್ರವಾಸಿಯು "ದಿ ಲೈಫ್ ಆಫ್ ಸೇಂಟ್ ಈಸಾ'' ಎಂದು ಕ್ರಿ. ಶ. 1890ರಲ್ಲಿ ನ್ಯೂಯೋರ್ಕಿನಲ್ಲಿ ಪ್ರಕಟಿಸಿದ ಗ್ರಂಥದಲ್ಲಿ ಯೇಸುಕ್ರಿಸ್ತರ ಪ್ರಾರಂಭಿಕ ಜೀವನವನ್ನು ಹಿಮಿಸ್ ಮಠದಲ್ಲಿ ದೊರೆತ ಪುರಾತನ ಕೃತಿಗಳನ್ನಾಧರಿಸಿ ವಿವರಿಸಿರುವನು. ಯೇಸುಕ್ರಿಸ್ತರು ತನ್ನ ಹನ್ನೆರಡನೆಯ ವರ್ಷ ಪ್ರಾಯದಲ್ಲಿ ಪಾಲೆಸ್ತೀನನ್ನು ಬಿಟ್ಟು ಪೂರ್ವಕ್ಕೆ ಪಯಣಿಸಿದರೆಂದು ಅದರಲ್ಲಿ ವಿವರಿಸಲಾಗಿದೆ.

ಶಿಲುಬೆಯ ಸಂಭವದ ನಂತರ ಯೇಸುಕ್ರಿಸ್ತರು ಪುನಃ ದೌರ್ಜನ್ಯಕ್ಕೊಳಗಾಗದಂತಿರಲು ಅವರು ಜೆರುಸಲೇಮನ್ನು ಬಿಟ್ಟುಹೋಗಲು ದೇವರು ನಿರ್ದೇಶಿಸಿದನೆಂದು "ಕನ್ಸುಲ್ ಉಮ್ಮಾಲ್'' ಗ್ರಂಥದಲ್ಲಿ ಹಝ್ರತ್ ಅಬೂ ಹುರೈರಾರವರ ವರದಿ ಉಲ್ಲೇಖಿತವಾಗಿದೆ.

"ತಫ್ಸೀರ್ ಇಬ್ನ್ ಜರೀರ್ ಅತ್ತಬರೀ'' ಎಂಬ ಗ್ರಂಥದಲ್ಲಿ ಯೇಸುಕ್ರಿಸ್ತರೂ ಅವರ ಮಾತೆಯೂ ರಾಜ್ಯದಿಂದ ರಾಜ್ಯಕ್ಕೆ ಸಂಚರಿಸುತ್ತಿದ್ದರೆಂದು ಇಬ್ನ್ ಜರೀರ್ ಬರೆದಿರುವರು. ಖುರ್‌ಆನ್ ಇದನ್ನು ಸಮರ್ಥಿಸುತ್ತದೆ (ಸೂರ 23:197 ನೋಡಿರಿ).*

---

*ಲೇಖಕರಿಗೆ ಖುರ್‌ಆನಿನ ವಚನ ಸೂಚಿಸುವುದರಲ್ಲಿ ತಪ್ಪಾಗಿದೆ. ಸರಿಯಾದುದು ಅಧ್ಯಾಯ 23ರ 51ನೆ ವಚನವಾಗಿದೆ:–

"ನಾವು ಮರಿಯಮನ ಮಗನನ್ನೂ ಆತನ ತಾಯಿಯನ್ನೂ ಒಂದು ಚಿಹ್ನೆಯಾಗಿ ಮಾಡಿರುವೆವು. ನಾವು ಅವರಿಬ್ಬರಿಗೂ ಹರಿಯುತ್ತಿರುವ ನೀರಿನಿಂದ ಕೂಡಿದ ವಾಸಯೋಗ್ಯವಾದ ಎತ್ತರವಾದ ಪ್ರದೇಶದಲ್ಲಿ ಆಶ್ರಯವಿತ್ತೆವು". —ಅನುವಾದಕ.

ರಾತ್ರೆ ಪ್ರಯಾಣ ಮಾಡುತ್ತಲೂ ಹಗಲು ವಿಶ್ರಮಿಸುತ್ತಲೂ ಯೇಸುಕ್ರಿಸ್ತರು ನಜರೇತಿಗೆ ತಲುಪಿ ಅಲ್ಲಿಂದ ತಿಬೇರಿಯ ಸಮುದ್ರದ ಬಳಿಗೆ ಹೋದರು (JohnXXI : 1-2). ಯೇಸುಕ್ರಿಸ್ತರೂ ಅವರ ತಾಯಿಯೂ ಪ್ರಯಾಣಿಸುತ್ತಾ ಸಿರಿಯಾ ದಾಟಿ ಮೆಸಪೊಟೋಮಿಯಾದ ನಿಸಿಬಿಸ್ (Nisibis) ಅಥವಾ ಮೆಗ್ದೋನಿಯಾ (Magdonia) ತಲುಪಿದಾಗ ಅವರನ್ನು ಅಲ್ಲಿಯ ಜನರು ಕೊಲ್ಲಲು ಪ್ರಯತ್ನಿಸಿದರೆಂದು ರೌಝತುಸ್ಸಫಾ ಎಂಬ ಗ್ರಂಥದ ಒಂದನೇ ಭಾಗ 134ನೇ ಪುಟದಲ್ಲಿ ಬರೆಯಲಾಗಿದೆ. ಪ್ರಾಯಶಃ ಈ ಸಂಭವದ ನಂತರ ಯೇಸುಕ್ರಿಸ್ತರು ತನ್ನ ಹೆಸರನ್ನು ಯೂಝಾಸಫ್ ಎಂದು ಬದಲಾಯಿಸಿರಬಹುದು.

ಕ್ರಿ. ಶ. 1899ರಲ್ಲಿ ಅಹ್ಮದಿಯಾ ಸಂಘಟನೆಯ ಸ್ಥಾಪಕ ಮಿರ್ಝಾ ಗುಲಾಮ್ ಅಹ್ಮದ್ "ಮಸೀಹ್ ಹಿಂದುಸ್ಥಾನ್ ಮೇ" ಎಂಬೊಂದು ಉದ್ಗ್ರಂಥ ಬರೆದು ಅದರಲ್ಲಿ ಯೇಸುಕ್ರಿಸ್ತರ ಕಾಶ್ಮೀರ ಯಾತ್ರೆಯ ಕುರಿತು ಪ್ರತಿಪಾದಿಸಿದರು. ಈ ಸಿದ್ಧಾಂತವನ್ನು ಮುಫ್ತೀ ಮುಹಮ್ಮದ್ ಸಾದಿಖ್‌ರವರು ಕ್ರಿ. ಶ. 1936ರಲ್ಲಿ "ಖಬರೇ ಮಸೀಹ್" ಎಂಬ ಗ್ರಂಥದಲ್ಲಿ ಕೂಲಂಕಷವಾಗಿ ವಿವರಿಸಿದರು. ಈ ಸಂಶೋಧನೆಯು ಕ್ರಿ. ಶ. 1951ರಲ್ಲಿ "ಜೀಸಸ್ ಇನ್ ಹೆವೆನ್ ಓನ್ ಅರ್ತ್" ಎಂಬ ಗ್ರಂಥದಲ್ಲಿ ಇನ್ನಷ್ಟು ವಿಶದವಾಗಿ ಖ್ವಾಜಾ ನಝೀರ್ ಅಹ್ಮದ್‌ರವರಿಂದ ವಿವರಿಸಲ್ಪಟ್ಟಿತು.*

**ಯೇಸುಕ್ರಿಸ್ತರು ಶಿಲುಬೆಗೆ ಕೊಡಲ್ಪಟ್ಟ ನಂತರ ಸಹ ಜೀವಿಸಿದ್ದರೆಂದೂ ಶಿಲುಬೆಗೆ ಕೊಟ್ಟ ಉದ್ದೇಶ ಚಿತ್ರಹಿಂಸೆಗೊಳಿಸುವುದಲ್ಲದೆ ಮೃತಪಡಿಸುವುದಾಗಿರಲಿಲ್ಲವೆಂದೂ ಅವರು ಜೆರುಸಲೇಮಿನ ಸಮಾಧಿಯಿಂದೆದ್ದು ಗಾಯಗಳು ಗುಣವಾದ ನಂತರ ಶಿಷ್ಯರಿಗೆ ಬೋಧಿಸಲು ತೊಡಗಿದರೆಂದೂ ಮೇಲಿನ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಜೆರುಸಲೇಮಿನಲ್ಲಿರುವ ಕ್ರಿಸ್ತ ಸಮಾಧಿ ಖಾಲಿಯಾಗಿರುವುದು ಗಮನಾರ್ಹವಾಗಿದೆ.**

ಜವಾಹರಲಾಲ್ ನೆಹ್ರೂರವರು ತನ್ನ "ಗ್ಲಿಂಪ್ಸಸ್ ಆಫ್ ವರ್ಲ್ಡ್ ಹಿಸ್ಟರೀ" ಎಂಬ ಗ್ರಂಥದಲ್ಲಿ ಈರೀತಿ ಬರೆದಿರುವರು: —

"ಮಧ್ಯ ಏಶ್ಯಾದಲ್ಲೆಲ್ಲಾ, ಪ್ರತ್ಯೇಕವಾಗಿ ಕಾಶ್ಮೀರ, ಲಡಾಖ್, ಟಿಬೇಟ್ ಮತ್ತು ಇನ್ನೂ ಉತ್ತರ ಪ್ರದೇಶಗಳಲ್ಲಿ ಯೇಸುಕ್ರಿಸ್ತ ಅಥವಾ ಈಸಾ ಅಲ್ಲೆಲ್ಲಾ ಪ್ರಯಾಣಿಸಿದ್ದರೆಂಬ ಬಲವಾದ ನಂಬಿಕೆ ಹಬ್ಬಿದೆ.... ಅವರು ಈರೀತಿ ಪ್ರಯಾಣಿಸಿದ್ದು ಅಸಂಭಾವ್ಯವೆಂದು ತೋರುವುದಿಲ್ಲ."

ಮಸೀಹ್ ಎಂಬ ಫಾರಸೀ ಭಾಷೆಯ ಪದ "ಮಹಾ ಪ್ರವಾಸಿ" ಎಂಬರ್ಥವನ್ನು ಸೂಚಿಸುತ್ತದೆ. ಮ್ಯಾಕ್ಸ್ ಮುಲ್ಲರ್ ಮಹಾಶಯನು ತನ್ನ ಗ್ರಂಥವಾದ "ಸ್ಯಾಕ್ರೆಡ್ ಬುಕ್ಸ್ ಆಫ್ ದಿ ಈಸ್ಟ್" (ಭಾಗ XI) ಇದರಲ್ಲಿ "ಇಂಗ್ಲಿಷ್ ಭಾಷೆಯ "t" ಶಬ್ದ ಅರಬಿಯ "s"ಗೆ ಸಮಾನವೆಂದು ಬರೆದಿರುವನು. ಬೌದ್ಧರ ಗ್ರಂಥದಲ್ಲಿ ಮೆತ್ತೇಯನೆಂದು ಸೂಚಿಸಲ್ಪಟ್ಟ ವ್ಯಕ್ತಿ ಮೆಸ್ಸೀಯ ಅಥವಾ ಮಸೀಹನಾಗಿರಲು ಸಾಧ್ಯವಿದೆ.

ಈ ವಿಷಯದ ಕುರಿತು ಹೆಚ್ಚಿನ ಸಂಶೋಧನೆ ಮಾಡದಿದ್ದರೆ ರೌಝಾಬಾಲ್‌ನ ರಹಸ್ಯ ಊಹೆಯಲ್ಲಿಯೇ ಪರ್ಯವಸಾನವಾದೀತು. ಆದರೆ ಮಹಾವೀರ ಮತ್ತು ಬುದ್ಧರು ಜ್ಞಾನ ಪ್ರಕಾಶವನ್ನು ಪಡೆದ ಈ ದೇಶದಲ್ಲಿ ಯೇಸುಕ್ರಿಸ್ತರು ತನ್ನ ಕೊನೆಯ ಆಶ್ರಯ ಸ್ಥಾನವನ್ನೂ ಕೊನೆಯ ವಿಶ್ರಾಮಧಾಮವನ್ನೂ ಪಡೆದಿರಬಹುದೆಂಬುದು ಶ್ರದ್ಧಾರ್ಹವಾಗಿದೆ.

(ಅನುವಾದಕ: M. U. R.)

---

* ಯುಗರಶ್ಮಿಯ ಪುಸ್ತಕ ವಿಭಾಗದಲ್ಲಿ ಈಗ ಪ್ರಕಟಿಸಲ್ಪಡುತ್ತಿರುವ ಜಲಾಲುದ್ದೀನ್ ಶಮ್ಸ್‌ರವರು 1945ರಲ್ಲಿ ಬರೆದ 'Where Did Jesus Die?' ಎಂಬ ಪುಸ್ತಕದ 11, 12 ಮತ್ತು 13ನೇ ಅಧ್ಯಾಯಗಳಲ್ಲಿಯೂ ಈ ವಿಷಯದ ಕುರಿತು ಪ್ರತಿಪಾದಿಸಲಾಗಿದೆ ವಾಚಕರು ನಿರೀಕ್ಷಿಸಿರಿ. —ಸಂಪಾದಕ.

# ಅಹ್ಮದಿಯಾ ಸಂಕ್ಷಿಪ್ತ ವಾರ್ತೆಗಳು

## ಕೆನ್ನೆತ್ ಕೌಂಡರಿಗೆ ಪವಿತ್ರ ಖುರ್‌ಆನ್

1976 ಎಪ್ರಿಲ್ ತಿಂಗಳಲ್ಲಿ ಝಾಂಬಿಯಾ ಪ್ರೆಸಿಡೆಂಟ್ ಡಾ। ಕೆನ್ನೆತ್ ಕೌಂಡರಿಗೆ ಪವಿತ್ರ ಖುರ್‌ಆನಿನ ಭಾಷಾಂತರ, ಪೈಗಂಬರರ ಚರಿತ್ರೆ, 'ಇಸ್ಲಾಮ್ ಮತ ಸಿದ್ಧಾಂತಗಳು' ಎಂಬಿವುಗಳ ಸಹಿತ ಹಲವು ಇಂಗ್ಲಿಷ್ ಪುಸ್ತಕಗಳನ್ನು ಅರ್ಪಿಸಲಾಯಿತು. ಒಂದು ಅಹ್ಮದಿಯಾ ಪ್ರತಿನಿಧಿ ಸಂಘವು ಪ್ರೆಸಿಡೆಂಟ್ ಕೌಂಡರನ್ನು ಹೋಗಿ ಕಂಡು ಈ ಗ್ರಂಥಗಳನ್ನು ಕೊಟ್ಟು ಸನ್ಮಾನಿಸಿತು. ಆ ಸಂದರ್ಭದಲ್ಲಿ ಒಂದು ಪತ್ರಕರ್ತರ ಸಂಘವೂ ಇನ್‌ಫಾರ್ಮೇಶನ್ ವಿಭಾಗದ ಉದ್ಯೋಗಸ್ಥರೂ ಟಿ. ವಿ. ರೇಡಿಯೋ ಪ್ರತಿನಿಧಿಗಳೂ ಸನ್ನಿಹಿತರಾಗಿದ್ದರು. ಮರುದಿನ ಟಿ. ವಿ.ಯಲ್ಲಿ ಇದರ ವಾರ್ತಾಚಿತ್ರ ಪ್ರಕ್ಷೇಪಣೆ ಇತ್ತು. ಕೆನ್ನೆತ್‌ಕೌಂಡ ಅಹ್ಮದಿಯಾ ಮಿಷ್ಯನಿನ ಪತ್ರಿಕೋದ್ಯಮವನ್ನು ಪ್ರಶಂಸಿದರು.

## ತಾಂಜಾನಿಯಾ

'ಮಹರ್'' (ಪುರುಷನು ಸ್ತ್ರೀಗೆ ನೀಡುವ ವಿವಾಹ ಮೂಲ್ಯ–ವಧುದಕ್ಷಿಣೆ) ವ್ಯವಸ್ಥೆಗೆದುರಾಗಿ ಇಲ್ಲಿ ಪತ್ರಿಕೆಗಳಲ್ಲಿ ದೊಡ್ಡ ಕೋಲಾಹಲ ಆರಂಭಿಸಿದೆ. ಸರಕಾರ 'ಮಹರ್'' ಹಕ್ಕಿನ ವ್ಯವಸ್ಥೆಯನ್ನು ಅನುಕೂಲಿಸುವುದಿಲ್ಲ. ಇದರ ಸಂಬಂಧಿಸಿ ನಿಯಮ ನಿರ್ಮಾಣವಾಗಿದ್ದರೂ ಎಲ್ಲಾ ಕಡೆಗಳಿಂದಲೂ ತೀವ್ರ ವಿರೋಧವಿದೆ. ಇಲ್ಲಿಯ ಒಂದು ಇಂಗ್ಲಿಷ್ ಪತ್ರಿಕೆಯಲ್ಲಿ ಮಹರ್ ವ್ಯವಸ್ಥೆಯ ಔಚಿತ್ಯವನ್ನು ವಿಶದೀಕರಿಸಿ ತಾಂಜಾನಿಯಾದ ಅಹ್ಮದಿಯಾ ಮಿಷನರಿ ಮಲಿಕ್ ಜಮೀಲುರ್ರಹ್‌ಮಾನ್ ರಫೀಕ್‌ರವರು ಒಂದು ಲೇಖನವನ್ನು ಬರೆದರು. 'ಪೈಗಂಬರರ ಅದ್ಭುತ ಪ್ರವರ್ತನೆಗಳು' ಎಂಬ ಹೆಸರಿನಲ್ಲಿ ಸ್ವಾಹಿಲಿ ಭಾಷೆಯಲ್ಲಿ ಒಂದು ಪುಸ್ತಕವನ್ನೂ ಅವರು ಬರೆದಿರುವರು. ಇದಕ್ಕೆ ಎಲ್ಲಾ ಕಡೆಗಳಿಂದ ಒಳ್ಳೆಯ ಅಂಗೀಕಾರ ಲಭಿಸಿತು.

## ಘಾನಾ

ಆಫ್ರಿಕದ ಪೂರ್ವ ಸಂಸ್ಥಾನಗಳ ಅಹ್ಮದಿಯಾ ಸಮ್ಮೇಳನ ವಿಜಯಕರವಾಗಿ ನಡೆಯಿತು. ಪಾಕಿಸ್ತಾನದ ಎಂಬಿಸ್ಸಿಯ ಪ್ರಥಮ ಸೆಕ್ರೆಟರಿ ಮತ್ತು ಟ್ರೇಡ್ ಎಂಡ್ ಟೂರಿಸಂ ಕಮಿಷನರು ಸಮ್ಮೇಳನದಲ್ಲಿ ಸನ್ನಿಹಿತರಾಗಿದ್ದರು. ಬಾರ್ನಬಸನ ಸುವಾರ್ತೆಗಳಲ್ಲಿ ಮುಹಮ್ಮದ್ ಪೈಗಂಬರರ ಕುರಿತಿರುವ ಭವಿಷ್ಯ ನುಡಿಗಳ ಸಂಬಂಧಿಸಿ ಘಾನಾದ ಮಿಷನರಿ ಮೌಲಾನಾ ಅಬ್ದುಲ್ ವಹಾಬ್ ಆದಂ ಭಾಷಣಮಾಡಿದರು. ಪಾಕಿಸ್ತಾನ್ ಎಂಬಸ್ಸಿಯ ಪ್ರಥಮ ಸೆಕ್ರೆಟರಿಯು ಆಹ್ವಾನವನ್ನು ಮನ್ನಿಸಿ ಮೌಲಾನಾ ಅಬ್ದುಲ್ ವಹಾಬರು ಅವರ ವಸತಿಗೆ ಹೋಗಿ ಸಂಭಾಷಣೆ ಮಾಡಿದರು. ಅವರಿಗೆ ಮಕ್ಕಳಿರಲಿಲ್ಲ. ಪ್ರಾರ್ಥನಾ ಫಲದಿಂದ ಅವರಿಗೆ ಒಂದು ಶಿಶು ಜನಿಸಿದ ಸಂತೋಷಕ್ಕಾಗಿ ಈ ದಂಪತಿಗಳು ಅವರನ್ನು ಸತ್ಕರಿಸಿದ್ದರು.

## ಅಮೇರಿಕದಲ್ಲಿ ಇಸ್ಲಾಮಿನ ವೃದ್ಧಿ

ಮುಂದಿನ ನೂರು ವರ್ಷಗಳೊಳಗೆ ಅಮೇರಿಕದ ಬಹು ಸಂಖ್ಯಾತರು ಇಸ್ಲಾಮಿನ ಮಹತ್ವವನ್ನು ಅರಿತು ಅದರೆಡೆಗೆ ಆಕರ್ಷಿತರಾಗಿ ತಮ್ಮ ಸಮಸ್ಯೆಗಳನ್ನು ಇಸ್ಲಾಮಿನ ಅಧ್ಯಾಪನೆಗಳ ಮುಖಾಂತರ ಪರಿಹರಿಸಿಕೊಳ್ಳುವರೆಂದು ವಾಷಿಂಗ್‌ಟನಿನಲ್ಲಿ 1976, ಆಗಸ್ಟ್ 3ರಂದು ವಾಷಿಂಗ್‌ಟನ್ ಪೋಸ್ಟ್ (Washington Post) ಪತ್ರಿಕೆಯ ಪ್ರತಿನಿಧಿಗೆ ನೀಡಿದ ಸಂದರ್ಶನದಲ್ಲಿ ಅಹ್ಮದಿಯಾ ಸಂಘಟನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಹೇಳಿದರು. ಸೃಷ್ಟಿಕರ್ತನೊಡನೆ ಸಂಪರ್ಕವನ್ನು ಸ್ಥಾಪಿಸುವುದು ಮನುಷ್ಯನ ಧರ್ಮವೆಂದೂ ಇಲ್ಲವಾದರೆ ಲೋಕದ ನಾಶ ಅನಿವಾರ್ಯವೆಂದೂ ಅವರು ನುಡಿದರು.

ಅಮೇರಿಕದ ಜನತೆಗೆ ತಮ್ಮ ಸಂದೇಶವೇನೆಂದು ಕೇಳಿದಾಗ, "ಮನುಷ್ಯನು ಮನುಷ್ಯನನ್ನು ಪ್ರೀತಿಸಲು ಕಲಿಯಬೇಕು'' ಎಂದು ಅವರು ಹೇಳಿದರು.

# ಗೋಟೆನ್‌ಬರ್ಗ್‌ನಲ್ಲಿ ಮಸೀದಿ ಉದ್ಘಾಟನೆ

ಸ್ವೀಡನಿನ ಗೋಟನ್‌ಬರ್ಗ್ ಪಟ್ಟಣದಲ್ಲಿ ಅಹ್ಮದಿಯಾ ಸಂಘಟನೆಯ ವತಿಯಿಂದ ಹೊಸತಾಗಿ ನಿರ್ಮಿಸಲಾದ ಮಸೀದಿಯ ಉದ್ಘಾಟನೆಯನ್ನು ಹಝ್ರತ್ ಖಲೀಫತುಲ್ ಮಸೀಹ್ ಮಿರ್ಝಾ ನಾಸಿರ್ ಅಹ್ಮದ್ ರವರು ಆಗಸ್ಟ್ 20ನೇ ದಿನಾಂಕದಂದು ನಿರ್ವಹಿಸಿದರು. ಈ ಸಮಾರಂಭದಲ್ಲಿ ನಾನಾ ಕಡೆಯಿಂದ 600 ಅಹ್ಮದಿಯರು ಭಾಗವಹಿಸಿದರು.

ಈ ಮಸೀದಿಯ ನಿರ್ಮಾಣಕ್ಕೆ 25 ಲಕ್ಷ ರೂಪಾಯಿ ಖರ್ಚಾಗಿದೆ. ಇದರ ಸಂಪೂರ್ಣ ವೆಚ್ಚವನ್ನು ಬ್ರಿಟನಿನ್ ಮತ್ತು ಅಮೇರಿಕಾದ ಅಹ್ಮದಿಯಾ ಜಮಾಅತುಗಳು ವಹಿಸಿಕೊಂಡಿವೆ.

ಇದು ಸ್ವೀಡನಿನ ಪ್ರಥಮ ಮಸೀದಿಯಾಗಿದೆ. ಈ ಮಸೀದಿ, ಸ್ನೇಹದ ಮತ್ತು ಶಾಂತಿಯ ಸಂದೇಶವನ್ನು ಎತ್ತಿತೋರಿಸುತ್ತದೆಂದು ಹಝ್ರತ್ ಸಾಹೇಬರು ಪತ್ರಿಕಾ ಸಮ್ಮೇಳನದಲ್ಲಿ ಹೇಳಿದರು. ತಮ್ಮ ಸಕಲ ಪ್ರಶ್ನೆಗಳಿಗೂ ಸಮಸ್ಯೆಗಳಿಗೂ ಮುಹಮ್ಮದ್ ಪೈಗಂಬರರ ಅಧ್ಯಾಪನಗಳಲ್ಲಿ ಪರಿಹಾರವಿದೆ ಎಂಬ ನಿಜಾಂಶವನ್ನು ಕ್ರೈಸ್ತಲೋಕ ಸದ್ಯೋಭವಿಷ್ಯದಲ್ಲೇ ತಿಳಿಯುವುದೆಂದು ಹಝ್ರತ್ ಸಾಹೇಬರು ಇಸ್ಲಾಮಿನ ತತ್ವಗಳನ್ನು ವಿವರಿಸುತ್ತಾ ಹೇಳಿದರು.

ಇದು ಯುರೋಪಿನಲ್ಲಿ ನಿರ್ಮಿಸಲ್ಪಟ್ಟ ಏಳನೆಯ ಅಹ್ಮದಿಯಾ ಮಸೀದಿಯಾಗಿದೆ. ಎಂಟನೆಯ ಮಸೀದಿಯು ಮುಂದಿನ ವರ್ಷದಲ್ಲಿ ನೋರ್ವೆಯ ಓಸ್ಲೋವಿನಲ್ಲಿ ನಿರ್ಮಿಸಲ್ಪಡುವುದೆಂದು ಹಝ್ರತ್ ಸಾಹೇಬರು ಹೇಳಿದರು.

## ಲೈಬೀರಿಯಾದಲ್ಲಿ ಹೈಸ್ಕೂಲು ಉದ್ಘಾಟನೆ

'ನುಸ್ರತ್ ಜಹಾನ್ ಲೀಪ್ ಫೋರ್ವರ್ಡ್ ಸ್ಕೀಂ'ನ ವತಿಯಿಂದ ಲೈಬೀರಿಯದ ಬೋಂಗ್ ಕೌಂಟಿ (Bong County)ಯ ಸಾನೋಯೆ (Sanoyea) ಎಂಬಲ್ಲಿ ಅಹ್ಮದಿಯಾ ಮುಸ್ಲಿಂ ಹೈಸ್ಕೂಲಿಗಾಗಿ ಹೊಸತಾಗಿ ನಿರ್ಮಿಸಿದ ಕಟ್ಟಡವು ಸಪ್ಟೆಂಬರ್ 3ನೆಯ ದಿನಾಂಕದಂದು ಲೈಬೀರಿಯಾದ ವಿದ್ಯಾಭ್ಯಾಸ ಮಂತ್ರಿ ಉದ್ಘಾಟನೆ ಮಾಡಿದರು. ಲೈಬೀರಿಯಾದ ವಿದ್ಯಾಭ್ಯಾಸ ವಿಭಾಗದ ಹಲವು ಉನ್ನತಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಅಹ್ಮದಿಯಾ ಸಂಘಟನೆಯ ವಿದ್ಯಾಭ್ಯಾಸ ವಿಕಸನ ಕಾರ್ಯಗಳಲ್ಲಿ ಅರ್ಪಿಸುತ್ತಿರುವ ಮಹತ್ತಾದ ಸೇವೆಗಳನ್ನು ವಿದ್ಯಾಭ್ಯಾಸ ಮಂತ್ರಿ ಉದ್ಘಾಟನಾ ಭಾಷಣದಲ್ಲಿ ಮುಕ್ತಕಂಠವಾಗಿ ಪ್ರಶಂಸಿದರು.

# ಖುರ್‌ಆನಿನ ಯೊರುಬ ಭಾಷಾಂತರ

ನೈಜೀರಿಯಾದ ಯೊರುಬ ಭಾಷೆಯಲ್ಲಿ ಅಹ್ಮದಿಯಾ ಜಮಾಅತಿನ ವತಿಯಿಂದ ಪವಿತ್ರ ಖುರ್‌ಆನಿನ ಸಂಪೂರ್ಣ ಭಾಷಾಂತರವನ್ನು ಪ್ರಕಟಿಸಲಾಗಿದೆ. ಇದರ ಮೊದಲ ಪ್ರತಿಯನ್ನು ಹಝ್ರತ್ ಖಲೀಫತುಲ್ ಮಸೀಹ್ ಅವರಿಗೆ ಸಮರ್ಪಿಸಲು ಲಂಡನಿಗೆ ಕಳುಹಿಸಲಾಗಿದೆ. 1976 ಸಪ್ಟೆಂಬರ್ 4ರಂದು ಲಾಗೋಸ್ ಸೆಂಟ್ರಲ್ ಲೈಬ್ರರಿಯಲ್ಲಿ ನಡೆದ ಪ್ರಕಾಶನ ಕಾರ್ಯಕ್ರಮದಲ್ಲಿ ಕಮಿಷನರ್ ಓನಾಬ್ರಾಯಿಮಿ ಭಾಗವಹಿಸಿದರು. ಅಹ್ಮದಿಯಾ ಜಮಾಅತು ಮಾಡಿದ ಅಸಾಧಾರಣವೂ ಬಹಳ ಅಮೂಲ್ಯವೂ ಆಗಿರುವ ಈ ಸೇವೆಯನ್ನು ಅವರು ಹೊಗಳಿ, ಅಹ್ಮದಿಯಾ ಜಮಾಅತನ್ನು ಅಭಿನಂದಿಸಿದರು.

ಖುರ್‌ಆನಿನ ಯೊರುಬ ತರ್ಜುಮೆಯ ಪ್ರಕಾಶನವನ್ನು ಸಂಬಂಧಿಸಿ ಅಬಾದಾನಿನ ವಿಯೋಪ್ಪೊ ಹಾಲ್‌ನಲ್ಲಿಯೂ ಒಂದು ಸಭೆಯನ್ನು ಏರ್ಪಡಿಸಲಾಯಿತು. ಹಲವಾರು ಮಂದಿ ಅದರಲ್ಲಿ ಭಾಗವಹಿಸಿದ್ದರು. ಅದೇ ಸಭೆಯಲ್ಲಿ 500 ಪ್ರತಿಗಳು ಮಾರಾಟವಾದುವು. ಪತ್ರಿಕೆಗಳಲ್ಲಿಯೂ ರೇಡಿಯೋದಲ್ಲಿಯೂ ಟೆಲಿವಿಷನ್‌ನಲ್ಲಿಯೂ ಈ ಸಮಾರಂಭಗಳ ಸಂಬಂಧಿಸಿ ವಾರ್ತೆಗಳು ವಿಪುಲವಾಗಿ ಪ್ರಚರಿಸಲ್ಪಟ್ಟಿವೆ.

—o—o—o—

# ಅಖಿಲ ಕಾಶ್ಮೀರ ಅಹ್ಮದಿಯಾ ಸಮ್ಮೇಳನ

ಅಖಿಲ ಕಾಶ್ಮೀರ ಅಹ್ಮದಿಯಾ ಸಮ್ಮೇಳನವು ನಾಸಿರಾಬಾದಿನಲ್ಲಿ ಆಗಸ್ಟ 21, 22 ದಿನಾಂಕಗಳಲ್ಲಿ ನಡೆಯಿತು. ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಅಧ್ಯಕ್ಷರಾಗಿದ್ದರು. ಮೌಲಾನಾ ಶರೀಫ್ ಅಹ್ಮದ್ ಸಾಹೇಬ್ ಅಮೀನಿ, ಮೌಲವಿ ಗುಲಾಂ ನಬಿ ಸಾಹೇಬ್ ನಿಯಾಝ್, ಮೌಲವಿ ಕರೀಮುದ್ದೀನ್ ಸಾಹೇಬ್ ಶಾಹಿದ್, ಮುಹಮ್ಮದ್ ಇನ್‌ಆಂ ಸಾಹೇಬ್ ಗೋರಿ, ಮೌಲವಿ ಅಬ್ದುರ್ರಶೀದ್ ಸಾಹೇಬ್. ಮೌಲವಿ ಮುಹಮ್ಮದ್ ಅಯ್ಯೂಬ್ ಸಾಹೇಬ್ ಸಯ್ಯದ್ ಬಷಾರತ್ ಅಹ್ಮದ್ ಸಾಹೇಬ್ ಸೈಫಿ, ಸಯ್ಯದ್ ಮುಹಮ್ಮದ್ ಷಾ ಸಾಹೇಬ್ ಎಂಬಿವರು ಭಾಷಣ ಮಾಡಿದರು. ಮೌಲವಿ ಗುಲಾಂ ನಬಿ ಸಾಹೇಬ್ ನಿಯಾಝ್ ಅವರು ಹಝ್‌ರತ್ ಖಲೀಫತುಲ್ ಮಸೀಹ್ ಕಳುಹಿಸಿದ ಸಂದೇಶವನ್ನು ಓದಿದರು.

# ಅಖಿಲ ಬಂಗಾಳ ಅಹ್ಮದಿಯಾ ಸಮ್ಮೇಳನ

ಕಲ್ಕತ್ತಾ ನಗರದಲ್ಲಿ ನವೆಂಬರ್ 27 ಮತ್ತು 28 ರಂದು ಅಖಿಲ ಬಂಗಾಳ ಅಹ್ಮದಿಯಾ ಸಮ್ಮೇಳನ ನಡೆಯಿತು. ನವೆಂಬರ್ 27ರಂದು "ಸರ್ವಧರ್ಮಸಮ್ಮೇಳನ" ವಾಗಿದ್ದಿತು. ಆ ದಿನ ಕಲ್ಕತ್ತಾ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿದ್ದ P. B. ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ಸಭೆಯಲ್ಲಿ ಡಾ। ಹೀರಾಲಾಲ್ ಚೋಪಡಾ M.A., D.Lit. ಇಸ್ಲಾಮಿನ ಬಗ್ಗೆಯೂ ಸರ್ದಾರ್ ಬಾಗ್‌ಸಿಂಗ್ ("ಸಿಖ್ ರಿವ್ಯೂ'' ಸಂಪಾದಕರು) ಸಿಖ್ ಮತದ ಕುರಿತೂ ಡಾಕ್ಟರ್ ಗೋದ್ರೆಜ್ S. ಕೊಯ್ರೋಯ್ M.B.B.S., F.R.C S. ರವರು ಝರಾತುಷ್ಟ್ರ ಧರ್ಮದ ಬಗ್ಗೆಯೂ ರೆವರೆಂಡ್ ದಾಯ್ D. ತಿವಾರಿ ಕ್ರೈಸ್ತ ಧರ್ಮದ ಕುರಿತೂ ಮೌಲಾನ ಬಷೀರ್ ಅಹ್ಮದ್ ಸಾಹೆಬರು ಶ್ರೀಕೃಷ್ಣ ಮತ್ತು ಹಿಂದೂ ಧರ್ಮದ ಕುರಿತೂ ಮೌಲಾನ ಶರೀಫ್ ಅಹ್ಮದ್ ಅಮೀನಿ ಅಹ್ಮದಿಯಾ ಸಂಘಟನೆಯ ಕುರಿತೂ ಜನಾಬ್ ಸಯ್ಯದ್ ಫಜಲ್ ಅಹ್ಮದ್ (ಅಡಿಷನ್ ಐ.ಜಿ. ಓಫ್ ಪೋಲೀಸ್ ಬಿಹಾರ್) ಇಸ್ಲಾಂ ಮತ್ತು ಅಂತಾರಾಷ್ಟ್ರೀಯ ಬಾಂಧವ್ಯವೆಂಬ ವಿಷಯದ ಕುರಿತೂ ಭಾಷಣ ಮಾಡಿದರು.

ಶ್ರೀ ಸ್ವಾಮಿ ಸದಾನಂದನವರು ಹಿಂದೂ ಧರ್ಮದ ಕುರಿತು ವಿವರಿಸುತ್ತಾ ಒಬ್ಬ ಹಿಂದು ಎಲ್ಲಾ ಪ್ರವಾದಿಗಳನ್ನು ಮನ್ನಿಸಲು ವೇದಗಳು ಅನುಶಾಸಿಸುತ್ತಿವೆಯೆಂದೂ ರಾಮಕೃಷ್ಣ ಮಿಷನಿನ ಸ್ಥಾಪಕರಾದ ಶ್ರೀ ರಾಮಕೃಷ್ಣರು ಇಸ್ಲಾಮಿನ ಅಧ್ಯಾಪನಗಳನ್ನು ಅನುಸರಿಸುತ್ತಿದ್ದರೆಂದೂ ಅವರು ಪ್ರತಿದಿನ ಐದು ಸಲ ಪ್ರಾರ್ಥಿಸುತ್ತಿದ್ದರೆಂದೂ ಮುಹಮ್ಮದ್ ಪೈಗಂಬರರು ಬ್ರಹ್ಮನ ರೂಪವನ್ನು ತಾಳಿದುದಾಗಿ ಅವರು ಒಂದು ಕನಸಿನಲ್ಲಿ ಕಂಡಿದ್ದರೆಂದೂ ತನ್ನ ಭಾಷಣದಲ್ಲಿ ಹೇಳಿದರು.

ಸಭೆಯ ಅಧ್ಯಕ್ಷರು ಸಮಾರೋಪ ಭಾಷಣದಲ್ಲಿ ಈರೀತಿ ಹೇಳಿದರು. "ಈ ಸಮಾರಂಭವು ನನಗೆ ಒಂದು ಅದ್ಭುತ ಅನುಭವವಾಗಿದೆ. ಎಲ್ಲಾ ಧರ್ಮಗಳೂ ಏಕ ದೈವದ ಮತ್ತು ಮಾನವ ಸಮಾನತೆಯ ಉಪದೇಶಗಳನ್ನು ನೀಡಿವೆ ನಾವು ಮತಾಚಾರ್ಯರ ಮಾರ್ಗದರ್ಶನದಲ್ಲಿ ಮುನ್ನಡೆಯುವುದರಲ್ಲಿ ಉತ್ಸಾಹ ತೋರಬೇಕು.''

ಈ ಸಮಾರಂಭದ ವಿವರ ರೇಡಿಯೋದಲ್ಲಿಯೂ ಟಿ. ವಿ.ಯಲ್ಲಿಯೂ ಪ್ರಸಾರವಾಯಿತು.

## ಕಲ್ಕತ್ತಾದ ರಾಮಕೃಷ್ಣ ಮಿಷನ್ ಸಂಘಟಿಸಿದ ಸಭೆಯಲ್ಲಿ ಅಹ್ಮದಿ ವಿದ್ವಾಂಸರ ಭಾಷಣ

ನವೆಂಬರ್ 26ರಂದು ಕಲ್ಕತ್ತಾದ ರಾಮಕೃಷ್ಣ ಮಿಷನ್ ಇನ್‌ಸ್ಟಿಟ್ಯೂಟ್ ಆಫ್ ಕಲ್ಚರಿನ ವತಿಯಿಂದ ಏರ್ಪಡಿಸಿದ್ದ 'ಸಭೆಯಲ್ಲಿ ಮೌಲಾನ ಬಷೀರ್ ಅಹ್ಮದ್ ಸಾಹೆಬರು (ಕಲ್ಕತ್ತಾ ಮತ್ತು ದೆಹಲಿಯ ಮಾಜಿ ಮಿಷನರಿ) ಭಾಷಣ ಮಾಡಿದರು. ಎಲ್ಲಾ ಜನಾಂಗಗಳ ಆತ್ಮೋನ್ನತಿಗಾಗಿ ಪ್ರವಾದಿಗಳೂ ಮಹಾಪುರುಷರೂ ನಿಯುಕ್ತರಾಗಿದ್ದರೆಂದು ಪವಿತ್ರ ಖುರ್‌ಆನ್ ಕಲಿಸುತ್ತ

ದೆಂದೂ ಅದರ ಉಪದೇಶವನ್ನನುಸರಿಸಿ ಅಹ್ಮದಿಯರು ಶ್ರೀಕೃಷ್ಣ, ಶ್ರೀರಾಮ, ಶ್ರೀ ಬುದ್ಧ ಮತ್ತು ಶ್ರೀ ಝುರಾಶ ತುಷ್ಟರನ್ನು ಪ್ರವಾದಿಗಳೆಂದು ನಂಬುತ್ತಾರೆಂದೂ ಅವರು ಹೇಳಿದರು. ಎಲ್ಲಾ ಧರ್ಮಗಳ ಮೂಲ ಉಪದೇಶ ಒಂದೇ ಆಗಿದೆಯೆಂದು ಹೇಳಿ ಅದಕ್ಕೆ ಆಧಾರವಾಗಿ ಗೀತೆಯ ಶ್ಲೋಕಗಳನ್ನು ಐದಿ ಹೇಳಿದರು.

ಒಬ್ಬ ಮುಸ್ಲಿಮನ ಬಾಯಿಯಿಂದ ಗೀತೆಯ ಶ್ಲೋಕಗಳನ್ನು ಕೇಳಿ ಸಭಿಕರು ಬಹಳ ಸಂತೋಷಗೊಂಡರು. ಸಭೆಯ ಅಧ್ಯಕ್ಷರು ಈ ಭಾಷಣದ ಕುರಿತು ತನ್ನ ಆನಂದವನ್ನು ವ್ಯಕ್ತಗೊಳಿಸುತ್ತಾ ಇಂತಹ ಭಾಷಣಗಳು ರಾಷ್ಟ್ರೀಯ ಭಾವೈಕ್ಯತೆ ಸಾಧಿಸಲು ಅತ್ಯುತ್ತಮವೆಂದರು.

## ರಬ್ವಾದಲ್ಲಿ ಅಂತಾರಾಷ್ಟ್ರೀಯ ಅಹ್ಮದಿಯಾ ಸಮ್ಮೇಳನ

ಪಾಕಿಸ್ತಾನದ ರಬ್ವಾನಗರದಲ್ಲಿ 84ನೇ ಅಹ್ಮದಿಯಾ ಸಮ್ಮೇಳನ ಡಿಸೆಂಬರ್ 10, 11, 12ನೇ ತಾರೀಕುಗಳಲ್ಲಿ ವಿಜಯಕರವಾಗಿ ಜರಗಿತು. ಸಮ್ಮೇಳನದಲ್ಲಿ ಪ್ರತಿದಿನ ಸುಮಾರು ಒಂದೂಕಾಲು ಲಕ್ಷ ಜನರು ಭಾಗವಹಿಸುತ್ತಿದ್ದರು. ಈ ಸಮ್ಮೇಳನಕ್ಕೆ ಅಮೇರಿಕಾ, ಗ್ರೇಟ್ ಬ್ರಿಟನ್, ನೈಜೀರಿಯಾ, ಘಾನ ಇಂಡೋನೇಷಿಯಾ, ಸ್ಪೈನ್, ಮಾರಿಷಸ್ ಮತ್ತು ಜರ್ಮನಿಯಿಂದ ಪ್ರತಿನಿಧಿ ಸಂಘಗಳು ಬಂದಿದ್ದುವು. ಸಮಾರೋಪ ಭಾಷಣ ಮಾಡುತ್ತಾ ಅಹ್ಮದಿಯಾ ಸಂಘಟನೆಯ ಖಲೀಫರಾದ ಹಝ್ರತ್ ಮಿರ್ಝಾ ನಾಸಿರ್ ಅಹ್ಮದ್ ಸಾಹೆಬರು ಪವಿತ್ರ ಖುರ್-ಆನಿನ ಭಾಷಾಂತರ ಮತ್ತು ಪ್ರಸಾರದ ಕುರಿತು ಒತ್ತಿ ಹೇಳಿದರು.

## ಅಖಿಲ ಭಾರತ ಅಹ್ಮದಿಯಾ ಸಮ್ಮೇಳನ

85ನೇ ಅಖಿಲ ಭಾರತ ಅಹ್ಮದಿಯಾ ವಾರ್ಷಿಕ ಸಮ್ಮೇಳನವು ಡಿಸೆಂಬರ್ 26, 27, 28 ದಿನಾಂಕಗಳಲ್ಲಿ ಅಹ್ಮದಿಯಾ ಕೇಂದ್ರವಾದ ಖಾದಿಯಾನಿನಲ್ಲಿ ಜರಗುವುದು. ದೈವಾಸ್ತಿತ್ವ, ಇಸ್ಲಾಂ ಮತ್ತು ಇತರ ಮತಗಳೂ ಮತಾಚಾರ್ಯರೂ, ಮತ ಸೌಹಾರ್ದತೆ, ರಾಷ್ಟ್ರೀಯ ಭಾವೈಕ್ಯತೆ, ಇಸ್ಲಾಂ ಮತ್ತು ಸ್ತ್ರೀಯರ ಹಕ್ಕುಗಳು, ಲೋಕಶಾಂತಿ ಮತ್ತು ಇಸ್ಲಾಂ, ಪೈಗಂಬರರ ಜೀವನಚರ್ಯೆ, ಮತದ ಆವಶ್ಯಕತೆ, ಸಮಸ್ಸೃಷ್ಟಿಗಳ ಸೇವೆ, ಸೃಷ್ಟಿಕರ್ತನ ಆರಾಧನೆ, ಖುರ್‌ಆನ್ ಮತ್ತು ಹದೀಸಿನ ಭವಿಷ್ಯ ನುಡಿಗಳು, ಅಹ್ಮದಿಯಾ ಜಮಾಅತಿನ ಸೇವಾಕ್ರಮಗಳು, ಅಹ್ಮದಿಯತಿನ ಧೋರಣೆಗಳು ಮೊದಲಾದ ವಿಷಯಗಳಲ್ಲಿ ವಿದ್ವಾಂಸರಿಂದ ಭಾಷಣಗಳು ನಡೆಯಲಿವೆ.

—o—o—

## ಯುಗರಶ್ಮಿಯ ಕುರಿತು ........

ಅಹ್ಮದಿಯಾ ಅಥವಾ ಖಾದಿಯಾನೀ ಸಂದೇಶವನ್ನು ಬಿತ್ತರಿಸುವ ಉತ್ತಮ ಕನ್ನಡ ಪತ್ರಿಕೆ. ಪೈಗಂಬರರ ನುಡಿಗಳನ್ನೂ ಇಸ್ಲಾಂ ಮತ್ತು ಆಧುನಿಕ ಯುಗದೊಡನೆ ಬೆಳೆದ ವೈಜ್ಞಾನಿಕ ಪ್ರಗತಿಯ ಹೊಂದಾಣಿಕೆಯನ್ನೂ ತಿಳಿಸುವ ಪ್ರಯತ್ನವನ್ನು ಅತ್ಯುತ್ತಮ ರೀತಿಯಲ್ಲಿ ಈ ಪತ್ರಿಕೆ ಮಾಡಿದೆ. ಯೇಸುಕ್ರಿಸ್ತರು ಮೃತರಾದುದು ಎಲ್ಲಿ? ಎಂಬ ಪುಸ್ತಕ ವಿಭಾಗವು ಅನೇಕ ಗಹನವಾದ ವಿಚಾರಗಳನ್ನು ಹೊರಗೆಡಹುತ್ತದೆ

— **ತವನಿಧಿ, ಕನ್ನಡ ಮಾಸಪತ್ರಿಕೆ**
ಮೂಡಬಿದಿರೆ.

( ಪವಿತ್ರ ಖುರ್‌ಆನಿನ ಕೆಲಭಾಗಗಳನ್ನು ಕನ್ನಡದಲ್ಲಿ ಪದ್ಯ ರೂಪದಲ್ಲಿ ಅನುವಾದಿಸಿ ಪ್ರಕಟಿಸಿದ ಜನಾಬ್ ಬಿ. ಯಂ. ಇಚ್ಲಂಗೋಡುರವರು ಸಂಪಾದಕರಾಗಿರುವ "ತವನಿಧಿ'' ಮಾಸಪತ್ರಿಕೆ ಕಳೆದ ನವೆಂಬರ್ ತಿಂಗಳಲ್ಲಿ ಮೂಡಬಿದಿರೆಯಿಂದ ಪ್ರಕಟವಾಗಲು ತೊಡಗಿದೆ. ಇದರಲ್ಲಿ ಪ್ರಕಟವಾದ ಲೇಖನಗಳು ವಿವಿಧ ವಿಷಯಗಳ ಜ್ಞಾನಾರ್ಜನೆಗೆ ಸಹಕಾರಿಯಾಗಿದೆ. —ಸಂಪಾದಕ, **ಯುಗರಶ್ಮಿ**.)

# ಸಂಪಾದಕರಿಗೆ ಪತ್ರ

ಮಿತ್ರರೇ,

...........ದೇವರ ಬಗೆಗೆ, ಅನ್ಯ ಧರ್ಮಗಳ ಕಡೆಗೆ ನಮಗಿರುವ ಅಜ್ಞಾನ ಮಾಡಿದಷ್ಟು ನಷ್ಟ ಬೇರಾವುದೂ ಖಂಡಿತ ಮಾಡಿಲ್ಲ ಎನ್ನುವ ಖಚಿತ ಅಭಿಪ್ರಾಯ ನನ್ನದು. 'ಯುಗರಶ್ಮಿ' ಇಸ್ಲಾಮಿನ ಬಗೆಗೆ ಸ್ಪಷ್ಟ, ಸುಂದರ ಅಭಿಪ್ರಾಯ ನೀಡುತ್ತಿದೆ. ಭೂತಕನ್ನಡಿಯಲ್ಲಿ ಕಾಣುವ ವಿಕೃತ ರೂಪು ಕಂಡು ದಿಗಿಲಾದವರು ಖಂಡಿತ ಇದನ್ನು ನೋಡಬೇಕು. ಇಲ್ಲಿ ಕಾಣುವುದು ಒಳ್ಳೆಯ ಕನ್ನಡಿಯ ಮೇಲಿನ ಸುಂದರ ದೃಶ್ಯ. ಯೇಸುಕ್ರಿಸ್ತರ ಮರಣದ ಬಗೆಗೆ ಇತಿಹಾಸಕಾರರ ಜಿಜ್ಞಾಸೆಯನ್ನು ಮೊದಲೇ ಗುರುತಿಸಿಕೊಂಡ ನಾನು ಆ ಬಗೆಗೆ 'ಯುಗರಶ್ಮಿ'ಯಲ್ಲಿ ಪ್ರಕಟವಾಗುತ್ತಿರುವ ಲೇಖನ ಮಾಲೆಯನ್ನು ಓದುತ್ತಿದ್ದೇನೆ. ಹೃತ್ಪೂರ್ವಕ ಅಭಿನಂದನೆಗಳು.

ಕೃತಜ್ಞತೆಗಳೊಂದಿಗೆ,

ಪಾ. ಸಂಜೀವ ಬೋಳಾರ M.A., B.T.

ಮಂಗಳೂರು.

++ ++++ +++

ಪ್ರಿಯರೇ,

ನೀವು ಕಳುಹಿಸಿದ ಎರಡು ಸಂಚಿಕೆಗಳೂ ಕೈಸೇರಿವೆ. ತುಂಬಾ ಧನ್ಯವಾದಗಳು. ಭಾವೈಕ್ಯದ ದೃಷ್ಟಿಯಿಂದ ಇಂತಹ ನಿಮ್ಮ ಪ್ರಯತ್ನಗಳು ತುಂಬಾ ಸಹಾಯಕವಾಗಿವೆ ನಿಮ್ಮ ಈ ಪ್ರಯತ್ನವು ಸ್ತುತ್ಯಾರ್ಹವಾಗಿದ್ದು ಯಶಸ್ವೀ ಪಥದಲ್ಲಿ ಮುನ್ನಡೆಯುವಂತೆ ಸರ್ವಶಕ್ತನಾದ ಭಗವಂತನೊಡನೆ ಪ್ರಾರ್ಥಿಸುತ್ತೇನೆ

ಇತಿ ನಿಮ್ಮ ಸ್ನೇಹಾಭಿಲಾಷಿ,

ದಾಮೋದರ ಪೈ

ಪಾಣೆಮಂಗಳೂರು.

ಪ್ರೆಸಿಡೆಂಟ್, ಲಯನ್ಸ್ ಕ್ಲಬ್, ಬಂಟ್ವಾಳ.

++++++++++

ತಾವು ಅಭಿಮಾನವಿಟ್ಟು ಕಳುಹಿಸಿದ "ಯುಗರಶ್ಮಿ" ಜುಲಾಯಿ–ಸೆಪ್ಟೆಂಬರ ಮತ್ತು ಅದರ ಹಿಂದೆ ಕಳುಹಿಸಿದ ಸಂಚಿಕೆಗಳೂ ಸಹ ಓದಿ ನೋಡಿದೆವು. ಒಳ್ಳೆಯ ವಿಷಯಗಳಿಂದ ಕೂಡಿದ ಲೇಖನಗಳು ಬುದ್ಧಿಶಕ್ತಿಯನ್ನು ಹೆಚ್ಚಿಸಿ ವಿವೇಕಕ್ಕೆ ಬೆಳಕನ್ನು ನೀಡುವಂತಿವೆ. ಸಂಗ್ರಹ ಯೋಗ್ಯವಾದ ತತ್ವಗಳಿಂದೊಡಗೂಡಿದ "ಯುಗರಶ್ಮಿ"ಗೆ ಶುಭಾಗಮನವಾಗುತ್ತಿರಲೆಂದು ಹಾರೈಕೆ.

ಎಂ. ರಂಗರಾವ್

ಮದ್ರಾಸು–26.

ಚಂದಮಾಮ ಸಂಪಾದಕರ ಪರವಾಗಿ

++++++++++

"ಯುಗರಶ್ಮಿ"ಯ ಎಲ್ಲ ಸಂಚಿಕೆಯನ್ನೂ ನೋಡಿದೆ; ತುಂಬಾ ಸಂತೋಷವಾಯಿತು.

ಮುಹಮ್ಮದ ಪೈಗಂಬರರು ಜಗತ್ತಿಗೆ ಶಾಂತಿಯ ಸಂದೇಶವನ್ನು ಬೀರಿದರು. ಶಾಂತಿದೂತರಾದ ಮುಹಮ್ಮದ ಪೈಗಂಬರರು ಆಗಿನ ಕಾಲದಲ್ಲಿ ಸಮಾಜದಲ್ಲಿ ರೂಢವಾಗಿದ್ದ ಅಜ್ಞಾನ, ಅಂಧಶ್ರದ್ಧೆ ಹಾಗೂ ಬಡತನಗಳನ್ನು ನಿವಾರಿಸಲು ಇಸ್ಲಾಮ ಧರ್ಮದ ಮೂಲಕ ಒಂದು ಕಾರ್ಯಕ್ರಮ ಇಟ್ಟರು. ಅದರ ಫಲವಾಗಿ ಜಗತ್ತಿನಲ್ಲೆಲ್ಲ ಇಸ್ಲಾಮು ಹರಡಿತು.

ಇಂದು ಸಹ ಇಸ್ಲಾಮ ಧರ್ಮವು ಸಮಾಜದ ರೋಗಕ್ಕೆ ಸರಿಯಾದ ಔಷಧ ನೀಡುತ್ತದೆ. ಇದನ್ನೇ ನಾವು ಮರೆತಿದ್ದೇವೆ. ಹಾಗೂ ಇಸ್ಲಾಮ ಧರ್ಮದ ತಿರುಳನ್ನು ಕಡೆಗಣಿಸಿ ಕೇವಲ ಪರಂಪರಾಗತ ವಿಧಿಗಳನ್ನು ಆಚರಿಸುತ್ತಿದ್ದೇವೆ. ಇದರಿಂದ ಮುಸ್ಲಿಮರು ಎಲ್ಲೆಲ್ಲಿಯೂ ದುಃಖದಲ್ಲಿದ್ದಾರೆ.

ಮುಹಮ್ಮದ ಪೈಗಂಬರರು ನಮಗೆಲ್ಲ ದುಡಿಯಲು ಹೇಳಿದ್ದಾರೆ. ಅದನ್ನು ನಾವು ಮಾಡುತ್ತಿಲ್ಲ. ಸಾದಾ ಜೀವನ ನಡೆಸಲು–ಸ್ವಾವಲಂಬಿಗಳಾಗಲು ಕಲಿಸಿದರು. ಇದನ್ನು ನಾವು ಕಲಿಯಲಿಲ್ಲ. ಸಂಗ್ರಹ ವೃತ್ತಿ ಬೇಡವೆಂದರು. ಹಾಗು ಈ ಪ್ರಕಾರ ಸಮತೆಯ ಸಂದೇಶ ನೀಡಿದರು.

ಇದನ್ನು ನಾವು ಕಡೆಗಣಿಸಿದ್ದೇವೆ. ಮುಹಮ್ಮದ ಪೈಗಂಬರರು ಜಗತ್ತಿಗೆ ಸಾರಿದ ಸಂದೇಶದ ಸಾರವೇ ಇದಾಗಿರುತ್ತದೆ. ಇದರ ಪಾಲನೆ ಮಾಡಿದರೆ ನಮ್ಮ ದುಃಖ, ನೋವು ಹಾಗು ಬಡತನ ಹಿಂಗಲಾರವೇ?

ಈ ಬಗ್ಗೆ ನಾವೆಲ್ಲ ವಿಚಾರ ಮಾಡಬೇಕಾಗಿದೆ. ಹಾಗು ನಿಜ ಅರ್ಥದಲ್ಲಿ ಮುಸಲ್ಮಾನರಾಗಿ ಜಗತ್ತಿನಲ್ಲಿ ಬಡತನದ ನಿವಾರಣೆ ಮಾಡಿ ಸಮತೆಯ ಬಾವುಟವನ್ನು ಹಾರಿಸುವಾ.

ಈ ದಿಶೆಯಲ್ಲಿ "ಯುಗರಶ್ಮಿ" ಮುನ್ನಡೆಯುವದೆಂದು ನಂಬಿದ್ದೇನೆ.

ಶಹೀದ ಧಾರವಾಡಕರ

ಗೋಕಾಕ — ಸಂಪಾದಕರು, ಸಮದರ್ಶಿ ಕನ್ನಡ ವಾರ ಪತ್ರಿಕೆ.

ಪ್ರಿಯ ಸಂಪಾದಕರಾದ ಜನಾಬ್ ಮುಹಮ್ಮದ್ ಯೂಸುಫ್‌ರವರಿಗೆ ಪ್ರೀತಿಯ ಅಸ್ಸಲಾಮು ಅಲೈಕುಂ.

ತಾವು ಪ್ರೀತಿ ವಿಶ್ವಾಸದಿಂದ ಕಳುಹಿಸಿಕೊಟ್ಟ "ಯುಗರಶ್ಮಿ"ಯ ಜೂನ್, ಸಪ್ಟಂಬರ ಎರಡು ತಿಂಗಳ ಅಮೂಲ್ಯವಾದ ಎರಡು ಪ್ರತಿಗಳು ದೊರಕಿದವು. ಇಸ್ಲಾಮಿನ ಬಗ್ಗೆ ಸ್ವಚ್ಛ ಕನ್ನಡದಲ್ಲಿ ಇಷ್ಟೊಂದು ಸ್ವಾರಸ್ಯವಾಗಿ ಬರೆದ ಈ ಪತ್ರಿಕೆಯನ್ನು ಓದಿ ನಮಗೆ ಬಹಳ ಸಂತೋಷವಾಗಿದೆ.

ಅದಕ್ಕಾಗಿ ನಮ್ಮ ಕೃತಜ್ಞತೆಗಳು.

ಪ್ರೆಸಿಡೆಂಟ್,
ಯಂಗ್‌ಮೆನ್ಸ್ ವೆಲ್‌ಫೇರ್ ಸೆಂಟರ್

ಉಳ್ಳಾಲ. — ಮೇಲಂಗಡಿ.

………… ಅನಿರೀಕ್ಷಿತವಾಗಿ ನನ್ನ ಕಣ್ಣಿಗೆ ಬಿದ್ದ ಯುಗರಶ್ಮಿಯನ್ನು ಎತ್ತಿಕೊಂಡಾಗ ನನಗೆ ಸಂತೋಷವಾಯಿತು. ……. ಮನುಷ್ಯನು ಮನುಷ್ಯನನ್ನು ಪ್ರೀತಿಸಲಾರದೆ ಹೋದ ಈ ಕಾಲದಲ್ಲಿ ಯುಗರಶ್ಮಿ ಸಮಸ್ತ ಲೋಕಕ್ಕೆ ಪಾಠ ಹೇಳುತ್ತಿದೆ. ಯುಗರಶ್ಮಿ ಯುಗ ಯುಗಕ್ಕೂ ರಶ್ಮಿಯನ್ನು ಬೀರುತ್ತಿರಲಿ.

ಯುಗರಶ್ಮಿಯ ಬಂಧು

ಉಡುಪಿ. — M. E. ಜನಾರ್ಧನ ಆಚಾರ್ಯ

ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

## ಮೈತ್ರಿ ಸಂದೇಶ

"……ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು……" —ಉದಯವಾಣಿ.

"……ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ……" —ನವಭಾರತ.

ಪುಟಗಳು: **48** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: ಉಚಿತ

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001.

ಈಗಾಗಲೇ ಮುದ್ರಣದಿಂದ ಹೊರಬಂದಿದೆ

## ಅಹ್ಮದಿಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ

ಗ್ರಂಥಕರ್ತ: ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್

ಅನುವಾದಕ: **M. P.** ಇಬ್ರಾಹಿಂ

ಪುಟ: **60** ಬೆಲೆ: ಒಂದು ರೂಪಾಯಿ ಅಂಚೆ ವೆಚ್ಚ: **ಉಚಿತ**

ಬರೆಯಿರಿ: The Editor, YUGARASHMI Kannada Quarterly,
23/1008, Ansari Road, Bunder, Mangalore-575001.

Phone: 75849 GST No. K-191 CSR No. K-125

ಶುಂಠಿ, ಕರಿಮೆಣಸು, ಮರಗೆಣಸು, ಅರಸಿನ ಮತ್ತು ಇತರ ಕಾಡು ಉತ್ಪತ್ತಿಗಳ ಪ್ರಸಿದ್ಧ ವ್ಯಾಪಾರಿಗಳು

## KECEE & COMPANY

Merchants & Commission Agents

**9/231, COPRA BAZAAR, CALICUT—1.**

## "ಯುಗರಶ್ಮಿ"ಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾ :: ನಾಲ್ಕು ರೂಪಾಯಿಗಳು

ಪುಸ್ತಕ ವಿಭಾಗ

# ಯೇಸು ಕ್ರಿಸ್ತರು ಮೃತರಾದುದು ಎಲ್ಲಿ?

ಲೇಖಕ: ಮೌಲಾನ ಜಲಾಲುದ್ದೀನ್ ಶಮ್ಸ್, ಲಂಡನ್.

ಭಾಷಾಂತರ: ಅಬೂ ತಾಹಿರ್.

## ಅಧ್ಯಾಯ – 9

## ಬಹು ದೈವಾರಾಧಕರು ಮತ್ತು ಪೌಲ.

ಯೇಸು ಕ್ರಿಸ್ತರು (ನಾನು ಹಿಂದಿನ ಅಧ್ಯಾಯದಲ್ಲಿ ವಿವರಿಸಿದಂತೆ) ತನ್ನ ಶಿಷ್ಯರನ್ನು ಇಸ್ರಾಯಿಲ್ ಜನಾಂಗದವರ ಹೊರತಾಗಿ ಇತರರಿಗೆ ಉಪದೇಶಿಸುವುದನ್ನು ತಡೆದಿದ್ದರು. ತನ್ನ ಆಗಮನೋದ್ದೇಶವನ್ನು ಸೂಚಿಸುತ್ತಾ, "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" ಎಂದು ಹೇಳಿರುವರು. ಇತರ ಜನಾಂಗಗಳನ್ನು ನಾಯಿಗಳೆಂದು ಉಪಮಿಸಿ ಅವರು ಈ ರೀತಿ ಹೇಳುತ್ತಾರೆ:

"ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿಮರಿಗಳಿಗೆ ಹಾಕುವುದು ಸರಿಯಲ್ಲ."

(ಮತ್ತಾಯ 15 : 24, 26)

ತನ್ನ ದೌತ್ಯ ಕಾಲದಲ್ಲಿ ಯೇಸು ಕ್ರಿಸ್ತರು ಇಸ್ರಾಯಿಲರಿಗೆ ಮಾತ್ರ ಬೋಧಿಸಿದ್ದರು. ಇದೇ ರೀತಿ ಶಿಷ್ಯರು ಸಹ ವರ್ತಿಸಿದ್ದರು. ಅನ್ಯ ಜಾತಿಯವರಿಗೆ ಸಹ ಅವರು ಕಳುಹಿಸಲ್ಪಟ್ಟಿದ್ದರೆ ಅವರು ಆ ರೀತಿ ಮಾಡುತ್ತಿದ್ದರು. ಅನ್ಯ ಜಾತಿಯವರು ಪ್ಯಾಲೆಸ್ತೀನ್ ದೇಶದಲ್ಲಿ ಯಹೂದಿಗಳ ಜೊತೆಗಿದ್ದರು. ಆದರೆ ಯೇಸು ಕ್ರಿಸ್ತರು ಆ ರೀತಿ ಮಾಡಲಿಲ್ಲ. ಯೇಸು ಕ್ರಿಸ್ತರ ಮೇಲಿನ ಪ್ರಸ್ತಾವನೆಗೂ ಪ್ರವೃತ್ತಿಗೂ ವಿರುದ್ಧವಾದ "ಎಲ್ಲಾ ಜನಾಂಗಗಳಿಗೆ ಉಪದೇಶಿಸಿರಿ" (ಮತ್ತಾಯ 28 : 19) ಎಂಬ ರೀತಿಯ ಕೆಲವು ಸುವಾರ್ತಾ ವಚನಗಳು ಅಜ್ಞಾತ ವ್ಯಕ್ತಿಗಳಿಂದ ಅನಂತರ ಸುವಾರ್ತೆಗಳಲ್ಲಿ ಸೇರಿಸಿದವುಗಳಾಗಿವೆ. ಅಥವಾ ಜನಾಂಗ ಎಂದರೆ ಗೋತ್ರ ಎಂದು ಅರ್ಥ ಮಾಡಬೇಕಾಗಿದೆ. (ಎನ್‌ಸೈಕ್ಲೋಪೀಡಿಯಾ ಬೈಬ್ಲಿಕಾ ನೋಡಿರಿ). ಈ ವಚನ ಯೇಸು ಕ್ರಿಸ್ತರ ಎರಡನೆಯ ಬರುವಿಕೆಯ ಕುರಿತಾಗಿದ್ದರೆ, ಇದು ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಜ್ರತ್ ಅಹ್ಮದ್‌ರವರ ಬರುವಿಕೆಯಲ್ಲಿ ಪೂರ್ತಿಗೊಂಡಿದೆ. ನಾನು ಇದರ ಕುರಿತು ನನ್ನ ಪುಸ್ತಕ "ಇಸ್ಲಾಂ"ನಲ್ಲಿ ಬರೆದಿರುತ್ತೇನೆ.

ಯೇಸು ಕ್ರಿಸ್ತರ ಉಪದೇಶಗಳಿಗೂ ಶಿಷ್ಯರ ನಡೆವಳಿಕೆಗಳಿಗೂ ವಿರುದ್ಧವಾಗಿ ಅನ್ಯ ಜಾತಿಯವರಿಗೆ ಉಪದೇಶಿಸುವ ಆಲೋಚನೆ ಮೊತ್ತ ಮೊದಲು ಪೌಲನಿಗೆ ಉಂಟಾಯಿತು. ಯೇಸು ಕ್ರಿಸ್ತರೂ ಅವರೊಡನೆ ಜೀವಿಸಿದ ಶಿಷ್ಯರೂ ಯೇಸು ಕ್ರಿಸ್ತರ ಆಗಮನೋದ್ದೇಶವನ್ನು ಮನಗಾಣದಿದ್ದು, ಯೇಸು ಕ್ರಿಸ್ತರನ್ನು ಒಮ್ಮೆಯೂ ಕಾಣದ, ಕೇಳದ ವ್ಯಕ್ತಿ ಅವರ ಬರುವಿಕೆಗೆ ಕಾರಣವಾದ ನಿಜವಾದ ಉದ್ದೇಶವನ್ನು ಗುರುತಿಸಿದನೆಂಬುದು ನಂಬಿಕೆಗರ್ಹವಲ್ಲ. ಇದಕ್ಕಿಂತ ಅಸಮಂಜಸವಾದುದು ಬೇರೊಂದಿಲ್ಲ.

"ನೀವು ಅನ್ಯ ಜನಗಳ ಕಡೆಗೆ ಹೋಗಬೇಡಿರಿ" (ಮತ್ತಾಯ 10 : 5) ಎಂದು ಯೇಸು ಕ್ರಿಸ್ತರು ಉಪದೇಶಿಸಿದರು. ಆದರೆ ಪೌಲನು ಯಹೂದಿಗಳಿಂದ ಕೋಪಗೊಂಡವನಾಗಿ "ನಾನು ಶುದ್ಧನು: ನಾನಿನ್ನು ಅನ್ಯ ಜಾತಿಗಳ ಬಳಿಗೆ ಹೋಗುವೆನು" ಎಂದನು.

(ಅಪೋಸ್ತಲರ ಕೃತ್ಯಗಳು 18 : 6)

ಉಪದೇಶಕ್ಕೆ ಯೇಸು ಕ್ರಿಸ್ತರು ನಿಶ್ಚಯಿಸಿದ ಮಿತಿಯನ್ನು ಮೀರಿದ ಪಕ್ಷದಲ್ಲಿ ಈ ಕೆಳಗಿನಂತೆ ಸಂಭವಿಸಬಹುದೆಂದು ಅವರು ಹೆದರಿದ್ದರು. ಅವರು ಹೇಳುವುದನ್ನು ನೋಡಿರಿ:

"ಪವಿತ್ರವಾದುದನ್ನು ನಾಯಿಗಳಿಗೆ ಹಾಕಬೇಡಿರಿ; ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲಬೇಡಿರಿ. ಚೆಲ್ಲಿದರೆ ತಮ್ಮ ಕಾಲಿನಿಂದ ಅವುಗಳನ್ನು ತುಳಿದು ಹಿಂತಿರುಗಿ ಬಂದು ನಿಮ್ಮನ್ನು ಸೀಳಿ ಬಿಟ್ಟಾವು.''

(ಮತ್ತಾಯ 7 : 6)

ಅನ್ಯ ಜಾತಿಯವರಿಗೆ ಪೌಲನು ಉಪದೇಶಿಸಲು ತೊಡಗಿದಾಗ ಅವರು ತೋರಿಸಿದ ಮನೋಭಾವವು ಅನ್ಯ ಜಾತಿಯವರಿಗನುಕೂಲವಾಗಿ ಯೇಸು ಕ್ರಿಸ್ತರ ತತ್ವಗಳನ್ನು ತಿದ್ದಲು ಅವನನ್ನು ನಿರ್ಬಂಧಿಸಿತು. ಅವರು ತಮ್ಮ ದೇವತೆಗಳಲ್ಲಿ ಯಾವ ರೀತಿ ನಂಬಿದ್ದರೋ ಅದೇ ರೀತಿ ಯೇಸು ಕ್ರಿಸ್ತರನ್ನು ಅವರಿಗಾಗಿ ಚಿತ್ರಿಸಿದನು. ಬಹು ದೈವಾರಾಧಕರಾದ ಅನ್ಯ ಜಾತಿಯವರು ನಂಬುತ್ತಿದ್ದ ಕೆಲವು ದೇವತೆಗಳ ಉದಾಹರಣೆಗಳನ್ನು ಈ ಕೆಳಗೆ ಕೊಡುತ್ತೇನೆ:-

1. ಎಡೋನಿಸ್ ದೇವನ ಉತ್ಸವಗಳು ಪಶ್ಚಿಮ ಏಷಿಯಾ ಮತ್ತು ಗ್ರೀಕ್ ರಾಜ್ಯಗಳಲ್ಲಿ ಆಚರಿಸಲ್ಪಡುವಾಗ ಆತನ ಮರಣದ ವಾರ್ಷಿಕೋತ್ಸವವು ಬಹಳ ಅಳುವಿಕೆಯಿಂದ (ಹೆಚ್ಚಾಗಿ ಹೆಂಗಸರಿಂದ) ಆಚರಿಸಲ್ಪಡುತ್ತಿತ್ತು. ಎಡೋನಿಸನ ಮೂರ್ತಿಯನ್ನು ಶವದ ರೂಪದಲ್ಲಿ ಶೃಂಗರಿಸಿ ಸಂಸ್ಕಾರಕ್ಕೆ ಒಯ್ಯುವಂತೆ ಕೊಂಡು ಹೋಗಿ ಕೊನೆಗೆ ಸಮುದ್ರದಲ್ಲೋ ನದಿಯಲ್ಲೋ ಮುಳುಗಿಸಲಾಗುತ್ತಿತ್ತು. ಕೆಲವು ಸ್ಥಳಗಳಲ್ಲಿ ಆತನ ಪುನರುಜ್ಜೀವನ ಮರುದಿವಸ ಆಚರಿಸಲಾಗುತ್ತಿತ್ತು.

ಅಲೆಕ್ಸಾಂಡ್ರೀಯದಲ್ಲಿ ದು:ಖಿಸುವವರು ಆಶಾಪೂರಿತರಾಗಿರುತ್ತಿದ್ದರು. ಏಕೆಂದರೆ ಅವರು ಸತ್ತವರು ಮರಳುವರೆಂದು ಹಾಡುತ್ತಿದ್ದರು...... ಫಿನೀಸಿಯದಲ್ಲಿ ಎಡೋನಿಸನ ಮರಣವು ವಾರ್ಷಿಕವಾಗಿ ಆಚರಿಸಲ್ಪಡುತಿತ್ತು...... ಸತ್ತ ಮರುದಿವಸ ಆತನು ಜೀವ ಹೊಂದಿ ತನ್ನನ್ನು ಪೂಜಿಸುವವರ ಸಾನ್ನಿಧ್ಯದಲ್ಲಿ ಆಕಾಶಕ್ಕೇರುತ್ತಾನೆಂದುಭಾವಿಸಲ್ಪಡುತಿತ್ತು. (Sir James Frazer ಬರೆದ Adonis, Attis, Osiris Ed. 2. page 183-84. Macmillan & Co. Ltd, London). ಇದೇ ಪುಸ್ತಕದ 243, 244ನೇ ಪುಟಗಳಲ್ಲಿ ಈ ಕೆಳಗಿನಂತೆ ಬರೆಯಲಾಗಿದೆ.

2. ತೂಗಿಸಲ್ಪಟ್ಟ ದೇವರು:- ಹಿಂದಿನ ಕಾಲದಲ್ಲಿ ಸೈಬೀಲಿ (Cybele) ಯ ವಸಂತೋತ್ಸವದಲ್ಲಿ ಆಟ್ಟಿಸ (Attis)ನ ಪಾತ್ರ ವಹಿಸಿದ ಪುರೋಹಿತನನ್ನು ಕ್ರಮ ಪ್ರಕಾರವಾಗಿ ಪವಿತ್ರ ವೃಕ್ಷದಲ್ಲಿ ತೂಗಿಸಿ ಕೊಲ್ಲಲಾಗುತ್ತಿತ್ತು. ಕ್ರಮೇಣ ಈ ಕ್ರೂರ ಆಚಾರದ ಕಾಠಿಣ್ಯವನ್ನು ಕಡಿಮೆ ಮಾಡಿ ಕೊನೆಗೆ ಪುರೋಹಿತನು ತನ್ನ ದೇಹದಿಂದ ರಕ್ತವನ್ನು ಪವಿತ್ರ ಮರದ ಕೆಳಗೆ ಬರಿಸಿ ಒಂದು ಮೂರ್ತಿಯನ್ನು ತನ್ನ ಬದಲಿಗೆ ಮರದಿಂದ ತೂಗಾಡಿಸುವ ಸಂಪ್ರದಾಯ ಜ್ಯಾರಿಗೆ ಬಂದಿತು. ಉಪ್ಸಲ (Upsale)ದ ಪವಿತ್ರ ಅರಣ್ಯದಲ್ಲಿ ಮನುಷ್ಯರನ್ನೂ ಮೃಗಗಳನ್ನೂ ಮರದಲ್ಲಿ ನೇತಾಡಿಸಿ ಬಲಿಕೊಡುತ್ತಿದ್ದರು. ಓಡಿನ್ (Odin) ದೇವನಿಗೆ ಬಲಿಯಾಗಿ ಕೊಡುತ್ತಿದ್ದವರನ್ನು ತೂಗಿಸಿ ಕೊಲ್ಲುತ್ತಿದ್ದರು. ಕೆಲವು ಸಾರಿ ಬಲಿಯರ್ಪಿತರನ್ನು ತೂಗಿಸಿ ಮತ್ತು ತಿವಿದು ಕೊಲ್ಲುತ್ತಿದ್ದರು. ಅವರನ್ನು ಮರಕ್ಕೆ ಅಥವಾ ಗಲ್ಲುಗಂಬಕ್ಕೆ ತೂಗಿಸಿದ ನಂತರ ಈಟಿಯಿಂದ ತಿವಿಯಲಾಗುತಿತ್ತು. ಇದರಿಂದಾಗಿ ಓಡಿನ್ ಗಲ್ಲುಗಂಬದ ದೇವರೆಂದು ಪ್ರಸಿದ್ಧನಾಗಿದ್ದಾನೆ. ಈತನು ಗಲ್ಲುಗಂಬದ ಕೆಳಗೆ ಕುಳಿತಿರುವಂತೆಯೂ ಚಿತ್ರಿಸಲಾಗುತ್ತಿತ್ತು. ಆತನು ತನಗೆ ತಾನೇ ಬಲಿಯಾದುದಾಗಿ ಭಾವಿಸಲಾಗುತ್ತಿದೆ. ಹವಾಮಲ್ (Havamal)ನ ವಿಚಿತ್ರ ಪದ್ಯಗಳಲ್ಲಿ ಈ ದೇವರು ತಾನು ದಿವ್ಯ ಶಕ್ತಿ ಗಳಿಸಿದುದನ್ನು ಈ ರೀತಿ ವರ್ಣಿಸುತ್ತಾನೆ:—

ಗಾಳಿಯಿಂದ ಅಲುಗಾಡುತ್ತಿರುವ ಮರದಲ್ಲಿ
ನಾನು ತೂಗಿದೆ;
ಪೂರ್ಣವಾಗಿ ಒಂಭತ್ತು ರಾತ್ರೆಗಳು.
ಈಟಿಯಿಂದ ಗಾಯಗೊಂಡವನಾಗಿ,
ಓಡಿನ್‌ನಿಗೆ ಅರ್ಪಿತನಾಗಿ
ನನಗೆ ನಾನೇ ಅರ್ಪಿತನಾಗಿ.

3. ಆರ್ಥರ್ ವೀಗಲ್ (Arthur Weigall) ಈ ರೀತಿ ಹೇಳುತ್ತಾರೆ:

ಕ್ರೈಸ್ತ ಧರ್ಮದ ಆದಿಕಾಲೀನ ಕೇಂದ್ರಗಳಲ್ಲಿ ಅಂತಿಯೋಕ ಒಂದಾಗಿತ್ತು. ಆ ನಗರದಲ್ಲಿ ಪ್ರತಿವರ್ಷ ತಮ್ಮುಝ್ ಅಥವಾ ಅಡೋನಿಸ್ (Tammuz or Adonis) ದೇವನ ಮರಣ ಮತ್ತು ಪುನರುತ್ಥಾನ ಆಚರಿಸಲ್ಪಡುತಿತ್ತು. ಬೆಥ್ಲೆಹೇಮಿನಲ್ಲಿ ಕ್ರಿಸ್ತನ ಜನ್ಮಸ್ಥಳವೆಂದು ಆದಿಕಾಲದ ಕ್ರೈಸ್ತರು ಆರಿಸಿದ ಸ್ಥಳವು (ಜನ್ಮ ಸಂಭವ ನಡೆದ ಯಥಾರ್ಥ ಸ್ಥಳ ಯಾವುದೆಂದು ತಿಳಿದಿರಲಿಲ್ಲ) ಈ ಅನ್ಯ ಜಾತೀಯ ದೇವನ ಹಳೆಯ ಕ್ಷೇತ್ರವಾಗಿತ್ತು. (ಇದನ್ನು ಸಂತ ಜೆರೋಮನು ಕಂಡು ಭಯ ಚಕಿತನಾಗಿ

ದ್ದನು). ಇದರಿಂದಾಗ ತಮ್ಮುಝ್ ಅಥವಾ ಅಡೋನಿಸನನ್ನು ಜನರು ಮನಸ್ಸಿನಲ್ಲಿ ಯೇಸು ಕ್ರಿಸ್ತರಂತೆ ಭಾವಿಸಲು ತೊಡಗಿದರು. ಈ ದೇವನು ಕ್ರೂರ ಮರಣವನ್ನು ಅನುಭವಿಸಿ, ನರಕಕ್ಕೆ ಹೋಗಿ, ಪುನ: ಮೇಲೆ ಬಂದು ಸ್ವರ್ಗವನ್ನೇರಿದುದಾಗಿ ನಂಬಲಾಗುತ್ತಿದೆ. ಆತನ ಉತ್ಸವ ವಿವಿಧ ರಾಜ್ಯಗಳಲ್ಲಿ ಆಚರಿಸಲ್ಪಡುವಾಗ, ಆತನ ಮರಣದ ದಿವಸ ಅಳಲಾಗುತಿತ್ತು. ಆತನ ಮೃತ ಶರೀರದ ಮೂರ್ತಿಯನ್ನು ರಚಿಸಿ ನೀರಿನಿಂದ ತೊಯಿಸಿ, ಲೇಪನಗೈದು ಸಂಸ್ಕಾರಕ್ಕಾಗಿ ಸಿದ್ಧಗೊಳಿಸುತ್ತಿದ್ದರು ಮತ್ತು ಮರುದಿವಸ ಆತನ ಪುನರುತ್ಥಾನ ಬಹಳ ಆಡಂಬರದಿಂದ, ಪ್ರಾಯಶ: "ದೇವನು ಎದ್ದಿರುವನು'' ಎಂದು ಘೋಷಿಸುತ್ತಾ ಆಚರಿಸಲಾಗುತಿತ್ತು. ಭಕ್ತರ ಸಾನ್ನಿಧ್ಯದಲ್ಲಿ ಆತನ ಸ್ವರ್ಗಾರೋಹಣದ ಆಚರಣೆ ಆ ಉತ್ಸವದ ಕೊನೆಯ ಘಟ್ಟವಾಗಿತ್ತು...... ಸುವಾರ್ತೆಯ ಒಂದು ವಿಷಯ (ನರಕಕ್ಕೆ ಇಳಿಯುವ ಸಂಭವ) ನಿಜವಾಗಿಯೂ ಅಡೋನಿಸ್ ಮತದಿಂದಲೂ ಅದೇ ರೀತಿಯ ಇತರ ಮತಗಳಿಂದಲೂ ಪಡೆದುದಾಗಿ ತಿಳಿದು ಬರುತ್ತದೆ.

(Paganism in our Christianity ಪುಟ 110, 111 ಮತ್ತು 113. Hutchinson & Co Ltd. London.)

4. ಇನ್ನೊಂದು ಮತ ಕ್ರೈಸ್ತ ಧರ್ಮದ ಮೇಲೆ ಪ್ರಭಾವ ಬೀರಿದೆ. ಇದು ಸ್ಪಾರ್ತಾನ (Spartan) ದೇವ ಅಥವಾ ದೈವಿಕವೀರ ಹೈಯಾಸಿಂಥ್ (Hyacinth) ದೇವನ ಪೂಜೆಯಾಗಿದೆ. ಈತನು ಆಕಸ್ಮಿಕ ಪ್ರಹಾರದಿಂದ ಮೃತನಾದನು. ಈತನ ಮೂರು ದಿವಸಗಳ ಉತ್ಸವ ಪ್ರತಿವರ್ಷ ವಸಂತ ಕಾಲದಲ್ಲಿ ಅಥವಾ ಸೆಕೆಗಾಲದ ಆರಂಭದಲ್ಲಿ ಆಚರಿಸಲಾಗುತಿತ್ತು. ಪ್ರಥಮ ದಿನ ಆತನ ಮರಣಕ್ಕಾಗಿ ದು:ಖಿಸಲಾಗುತಿತ್ತು. ದ್ವಿತೀಯ ದಿನ ಆತನ ಪುನರುತ್ಥಾನ ಸಂತೋಷಪೂರ್ವಕವಾಗಿ ಕೊಂಡಾಡಲಾಗುತಿತ್ತು. ತೃತೀಯ ದಿನ ಆತನ ಸ್ವರ್ಗಾರೋಹಣ ಆಚರಿಸಲಾಗುತಿತ್ತು. ಆತನ ಸಮಾಧಿಯ ಮೇಲಿರುವ ಶಿಲ್ಪಗಳು ಆತನು ತನ್ನ ಕನ್ಯೆಯಾದ ಸಹೋದರಿಯೊಡನೆ ದೇವದೂತರ ಮತ್ತು ದೇವತೆಗಳ ಜೊತೆಯಲ್ಲಿ ಆಕಾಶವನ್ನೇರುವುದನ್ನು ಚಿತ್ರಿಸುತ್ತವೆ. (ವೀಗಲ್‌ರ ಮೇಲಿನ ಪುಸ್ತಕ ಪುಟ 155)

5. ಅಟ್ಟಿಸ್‌ನ ಕಥೆಯಲ್ಲಿ ಆತನನ್ನು ಉತ್ತಮ ಕುರಿಗಾಹಿ (Good Shepherd)ಯೆಂದೂ ಮಹಾ ತಾಯಿಯಾದ ಸೈಬೀಲಿ (Cybele) ಯ ಮಗನೆಂದೂ ಕನ್ಯಾ ನಾನಾ (Nana) ಳು ಮಾನವ ಸಂಪರ್ಕವಿಲ್ಲದೆ ಗರ್ಭಧರಿಸಿ ಹೆತ್ತ ಮಗನೆಂದೂ (ಕನ್ಯಾ ಮರಿಯಳ ಚರಿತ್ರೆಯಂತೆ) ವರ್ಣಿಸಲಾಗಿದೆ. ಆತನು ತನ್ನ ಯೌವನದ ಕಾಲದಲ್ಲಿ ತನ್ನನ್ನೇ ಅಂಗಲವಿಕಲನನ್ನಾಗಿ ಮಾಡಿ ರಕ್ತ ಹರಿಸಿ ಪೈನ್ ಮರ (Pine-tree) ದ ಕೆಳಗೆ ಸತ್ತನು. ರೋಮಿನಲ್ಲಿ ಆತನ ಮರಣ ಮತ್ತು ಪುನರುತ್ಥಾನವು ವಾರ್ಷಿಕವಾಗಿ ಮಾರ್ಚ್ 22ರಿಂದ 25ರ ವರೆಗೆ ಆಚರಿಸಲ್ಪಡುತ್ತಿತ್ತು...... ಈ ಉತ್ಸವ ಆಚರಿಸಲ್ಪಡುವಾಗ ಮಾರ್ಚ್ 22ರಲ್ಲಿ ಒಂದು ಪೈನ್ ವೃಕ್ಷವು ಕಡಿಯಲ್ಪಡುತಿತ್ತು. ಅದಕ್ಕೆ ದೇವನ ಮೂರ್ತಿ ಕಟ್ಟಲಾಗುತಿತ್ತು. ಈ ರೀತಿ ಅಟ್ಟಿಸನು "ಕೊಲ್ಲಲ್ಪಟ್ಟವನು ಮತ್ತು ಮರದಿಂದ ತೂಗಿಸಲ್ಪಟ್ಟವ"ನೆಂಬ ಬೈಬಲ್ ನುಡಿಗಟ್ಟಿಗೆ ಅನುಸಾರವಾಗಿ ಆಗುತ್ತಿದ್ದನು. ಈ ಮೂರ್ತಿಯನ್ನು ಕೊನೆಗೆ ಒಂದು ಸಮಾಧಿಯಲ್ಲಿ ಹೂಳುತ್ತಿದ್ದರು. ಮಾರ್ಚ್ 24 ರಕ್ತದ ದಿವಸವಾಗಿತ್ತು. ಆ ದಿನ ಮುಖ್ಯ ಪುರೋಹಿತನು ಅಟ್ಟಿಸನಾಗಿ ನಟಿಸಿ ತನ್ನ ರಕ್ತವನ್ನು ಸುರಿಸಿ, ತನ್ನನ್ನು ತಾನೇ ಬಲಿಕೊಡುವ ಹಾಗೆ ತೋರಿಸುತ್ತಿದ್ದನು. ಇದು "ಇಬ್ರಿಯರಿಗೆ ಬರೆದ ಪತ್ರಿಕೆ''ಯಲ್ಲಿರುವ ಈ ಕೆಳಗಿನ ಬೈಬಲ್ ವಚನಗಳು ನೆನಪಿಗೆ ಬರುವಂತೆ ಮಾಡುತ್ತಿವೆ: "ಕ್ರಿಸ್ತನು... ಮಹಾ ಯಾಜಕನಾಗಿ ಬಂದು.. ಹೋತಗಳ ಮತ್ತು ಹೋರಿ ಕರುಗಳ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿ ಕೊಂಡವನಾಗಿ... '' (ಇಬ್ರಿಯರಿಗೆ 9-11, 12).

ಆ ರಾತ್ರೆ ಪುರೋಹಿತರು ಸಮಾಧಿಗೆ ಹೋದಾಗ ಒಳಗಿನಿಂದ ಬೆಳಗುತ್ತಿರುವುದಾಗಿಯೂ ದೇವನು ಮೂರನೆಯ ದಿನ ಎದ್ದುದರಿಂದ ಸಮಾಧಿ ಖಾಲಿಯಾಗಿ ಇರುವುದಾಗಿಯೂ ಕಾಣುತ್ತಿದ್ದರು. ಮಾರ್ಚ್ 25ರಂದು ಪುನರುತ್ಥಾನವು ಬಹಳ ಸಂತೋಷದಿಂದ ಆಚರಿಸಲಾಗುತ್ತಿತ್ತು. ಆ ದಿವಸ ಪವಿತ್ರ ಭಕ್ಷಣವು ಸೇವಿಸಲ್ಪಡುತ್ತಿತ್ತು ಮತ್ತು ಹೊಸತಾಗಿ ಮತಕ್ಕೆ ಸೇರುವವರು ರಕ್ತದಿಂದ ಧಾರ್ಮಿಕ ಸ್ನಾನಗೊಳಿಸಲ್ಪಟ್ಟು ಪಾಪವಿರಹಿತರಾಗಿ ಪುನಃ ಜನಿಸಿದವರಂತೆ ಆಗುತ್ತಿದ್ದರು.

(ವೀಗಲ್‌ರ ಮೇಲಿನ ಪುಸ್ತಕ ಪುಟ 116-117)

೬. ಎಡೋನಿಸ್‌ನ ಪೂಜೆಯಲ್ಲಿ ಪ್ರಧಾನ ವಿಷಯ ದೇವನ ಮರಣ ಮತ್ತು ಪುನರುತ್ಥಾನವಾಗಿದೆ. ಆತನು ಕಾಡು ಹಂದಿಯಿಂದ ಕೊಲ್ಲಲ್ಪಟ್ಟನು. ಆದರೆ ಕಾಡುಹಂದಿ ಆತನ ಅವತಾರವೇ ಆಗಿತ್ತು. ಈರೀತಿ ದೇವರು ತಾನೇ ಕೊಲ್ಲುವವನೂ ಕೊಲ್ಲಲ್ಪಡುವವನೂ ಆಗುತ್ತಾನೆ. ಇದೇ ವಿಚಾರ "ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ" ಬೈಬಲಿನಲ್ಲಿ ವ್ಯಕ್ತವಾಗಿದೆ. ಇದರಲ್ಲಿ ಕ್ರಿಸ್ತರನ್ನು ಮಹಾ ಪುರೋಹಿತನೆಂದೂ ಪಾಪ ಪರಿಹಾರಕ್ಕಾಗಿ ತನ್ನನ್ನೇ ತಾನು ಬಲಿಗೊಳಿಸಿದುದಾಗಿಯೂ ಬರೆಯಲಾಗಿದೆ......ಒಂದು ಆಡು ಮತ್ತು ಎತ್ತು ಡೈಯನಿಸೋಸ್‌ಗೆ ಅರ್ಪಿತವಾಗುತಿತ್ತು. ಆದರೆ ಇವು ಅದೇ ದೇವನ ಪ್ರತಿರೂಪಗಳಾಗಿದ್ದುವು. ಆರ್ಟಿಮಿಸನಿಗೆ ಕರಡಿಯು ಅರ್ಪಿತವಾಗುತ್ತಿತ್ತು. ಆದರೆ ಈ ಕರಡಿ ಆರ್ಟಿಮಿಸನ ಪ್ರತಿರೂಪವೆಂದು ಭಾವಿಸಲಾಗುತ್ತಿತ್ತು. ಈ ರೀತಿ ಒಬ್ಬ ದೇವನು ಮಾನವರ ಪಾಪ ಪರಿಹಾರಕ್ಕಾಗಿ ತಾನೇ ಬಲಿಯಾಗುವ ವಿಚಾರ ಬಹಳ ಪ್ರಚಾರದಲ್ಲಿದ್ದಿತು. ದೇವರ ಮಾನವೋಪಯೋಗಿ ಬಲಿದಾನಗಳನ್ನು ಸೂಚಿಸುವ ಮಾನವ ಬಲಿದಾನಗಳು ಆಗಿನ ಕಾಲದಲ್ಲಿ ಮುಂತಂಕಕೆಯು ಮತ್ತು ಚಿಂತನೆಯ ವಿಚಾರಗಳಾಗಿದ್ದುವು. ಟೈಬೀರಿಯಸನು ಅಧಿಕಾರಕ್ಕೆ ಬರುವ ಕಾಲದ ತನಕ ಶನಿದೇವನಿಗೆ ಮಕ್ಕಳು ಬಲಿಯಾಗಿ ಅರ್ಪಿತರಾಗುತ್ತಿದ್ದರೆಂದು ಟರ್ಟುಲಿಯನ್ (Tertullian) ಹೇಳಿರುವನು. ಮಾರ್ಸ್ (Mars) ದೇವನಿಗೆ ಜೂಲಿಯಸ್‌ಸೀಸರನ ಕಾಲದಲ್ಲಿ ಇಬ್ಬರು ಸೈನಿಕರನ್ನು ಬಲಿ ಕೊಟ್ಟುದನ್ನು ಡೈಯನ್ ಕ್ಯಾಸಿಯಸನು ಹೇಳುತ್ತಾನೆ. ಮಾನವ ಬಲಿದಾನದ ಉಪಯುಕ್ತತೆಯ ಕುರಿತು ಯೇಸು ಕ್ರಿಸ್ತರ ಕಾಲದಲ್ಲಿದ್ದ ನಂಬಿಕೆಯ ಕುರಿತು ಇತರ ಉದಾಹರಣೆಗಳನ್ನು ಸಹ ಕೊಡಬಹುದು. (ವೀಗಲ್‌ರ ಪುಸ್ತಕ 154-155).

ಪಾಪ ಪರಿಹಾರಕ್ಕೆ ಬಲಿಯರ್ಪಿಸುವ ಯಹೂದಿಗಳ ಪುರಾತನ ವಿಚಾರಗಳು ಯೇಸುಕ್ರಿಸ್ತರ ಕಾಲದಲ್ಲಿ ಬಲವಾಗಿ ಬೇರೂರಿದ್ದಿತು. ಒಂದು ಕುರಿಮರಿ, ಹೋತ ಅಥವಾ ಇತರ ಮೃಗದ ಬಲಿ ಪಾಪ ಪರಿಹಾರಕ್ಕಾಗಿ ಕೊಡುವುದು ಆಗ ಜಾರಿಯಲ್ಲಿದ್ದ ಆಚಾರವಾಗಿತ್ತು. ಒಂದು ಪ್ರಾಯಶ್ಚಿತ್ತದ ಹೋತ* (Scapegoat) ವನ್ನು ಸರ್ವ ಪಾಪಗಳನ್ನು ಹೊರುವಂತೆ ಮಾಡಿ ಜನವಿರಹಿತ ಪ್ರದೇಶಕ್ಕೆ ಬಿಟ್ಟು ಕ್ರೂರ ಮೃಗಗಳು ತಿನ್ನುವಂತೆ ಮಾಡುವ ಕ್ರಮವು ಈ ಆಚಾರದ ಇನ್ನೊಂದು ರೂಪವಾಗಿದೆ. ಅನ್ಯ ಜಾತಿಗಳ ದೇವಂದಿರು ಮಾನವರಿಗಾಗಿ ಕಷ್ಟವನ್ನನುಭವಿಸಿ ರಕ್ತ ಸುರಿಸಿದುದಾಗಿ ಭಾವಿಸಲ್ಪಡುತ್ತಿರುವಾಗ ಆ ದೇವರ ಪೂಜಾ ಸ್ಥಳಗಳು ಪಾಪ ಪರಿಹಾರಕ್ಕಾಗಿ ಹಿಂಸಿಸಿ ಕೊಲ್ಲಲ್ಪಟ್ಟ ಮಾನವ ಮತ್ತು ಮೃಗಗಳ ರಕ್ತದಿಂದ ತುಂಬಿದ್ದಿತು. (ವೀಗಲ್‌ರ ಮೇಲಿನ ಪುಸ್ತಕ ಪುಟ 154, 155).

ಸರ್ ಜೇಮ್ಸ್ ಫ್ರೇಜರ್ ಬರೆಯುವುದೇನೆಂದರೆ:–

"ಮಾನವನನ್ನು ಅಥವಾ ಮೃಗವನ್ನು ಪಾಪ ಹೊರುವಂತೆ ಮಾಡುವ ಆಚಾರ ಪ್ರತ್ಯೇಕವಾಗಿ ಶ್ರದ್ಧೇಯವಾಗಿದೆ .. ಪಾಪಗಳು ಒಬ್ಬ ದೇವನಿಗೆ ಬದಲಾಯಿಸಲ್ಪಟ್ಟುದಾಗಿ ನಂಬಲಾಗುತಿತ್ತು. ಅನಂತರ ಆ ದೇವನನ್ನು ಕೊಲ್ಲಲಾಗುತ್ತಿತ್ತು...ಒಬ್ಬ ಮಾನವ ಅಥವಾ ಮೃಗರೂಪೀ ದೇವನನ್ನು ಕಾಲದ ಆಧಿಕ್ಯದಿಂದ ಸಂಭವಿಸಬಹುದಾದ ದೈವಿಕ ಜೀವನದ ಅವನತಿಯನ್ನು ತಡೆಯಲಿಕ್ಕಾಗಿ ಕೊಲ್ಲುವ ಆಚಾರಗಳನ್ನು ನಾವು (ಹಿಂದೆ ವಿವರಿಸಿದಂತೆ) ನೋಡಿದೆವು. ಇದಲ್ಲದೆ ಪ್ರತಿವರ್ಷ ಪಾಪಗಳೂ ಅನಿಷ್ಟಗಳೂ ಹೊಡೆದೋಡಿಸಲ್ಪಡುವುದನ್ನೂ ಸಹ ನೋಡಿದೆವು. ಈ ಎರಡು ಆಚಾರಗಳನ್ನು ಒಟ್ಟಿಗೆ ಸೇರಿಸಿದರೆ ಒಬ್ಬ ಸಾಯುತ್ತಿರುವ ದೇವನನ್ನು ಮೇಲೆ ವಿವರಿಸಿದಂತಹ ಬಲಿ ಆಡನ್ನಾಗಿ ಮಾಡುವುದು ಸ್ವಾಭಾವಿಕ. ಆತನನ್ನು ಕೊಲ್ಲುತ್ತಿದ್ದುದು ಮೊತ್ತಮೊದಲ ಪಾಪ ಪರಿಹಾರಕ್ಕಾಗಿ ಆಗಿರಲಿಲ್ಲ; ದೈವಿಕ ಜೀವನವನ್ನು ಪ್ರಾಯಾಧಿಕ್ಯದ ಅಧಃಪತನದಿಂದ ರಕ್ಷಿಸಲಿಕ್ಕಾಗಿತ್ತು. ಆದರೆ ಹೇಗಾದರೂ ಆತನನ್ನು ಕೊಲ್ಲಬೇಕಾದ ಕಾರಣ ಆತನು ಜನರ ಅನಿಷ್ಟ ಮತ್ತು ಪಾಪ ಹೊರುವಂತೆ ಮಾಡಿ ಅವನ್ನು ಸಮಾಧಿಯಾಚೆಯಿರುವ ತಿಳಿಯದ ಲೋಕಕ್ಕೆ ಕೊಂಡುಹೋಗುವಂತೆ ಮಾಡುವರೆ ಈ ಸುಸಂದರ್ಭವನ್ನು ಉಪಯೋಗಿಸುತ್ತಿದ್ದರು. (Gol-

---

* ಯೇಸುಕ್ರಿಸ್ತರು ಮಾಡಿದರೆಂಬ ಬಲಿತ್ಯಾಗವನ್ನು ಹೋಲಿಸುತ್ತಾ ಪ್ರಾಯಶ್ಚಿತದ ಹೋತ (Scapegoat) ವನ್ನು "ಫಂಡಮೆಂಟಲಿಸ್ಟ್ ಕ್ರೈಸ್ತರು ಉದಾಹರಿಸುವುದುಂಟು. ಆದರೆ ಪ್ರಾಯಶ್ಚಿತ್ತದ ಹೋತವು ಬಲಿಯರ್ಪಿಸಲ್ಪಡುತ್ತಿದ್ದಿಲ್ಲ; ಅಡವಿಗೆ ಕಳುಹಿಸಲ್ಪಡುತಿತ್ತು ಎಂಬ ಸಂಗತಿಯನ್ನು ಅವರು ಮರೆತು ಬಿಡುತ್ತಾರೆ.

den Bough, part 6, The Scapegoat page 226-227. London, 1913).

ಈ ವಿಶ್ವಾಸಗಳನ್ನು ಯೇಸುಕ್ರಿಸ್ತರ ಕಥೆಯನ್ನು ಅನ್ಯಜಾತಿಯವರಿಗೆ ಉಪದೇಶಿಸಿದ ಸಂತಪೌಲನ ಪ್ರವಚನಗಳಿಗೆ ಸಮತೋಲನ ಮಾಡಿನೋಡಿದರೆ ಎರಡನೆಯದು ಮೊದಲನೆಯದರ ಯಥಾ ಪ್ರತಿಯೊಂದು ತಿಳಿಯಬಹುದು. ಯೇಸುಕ್ರಿಸ್ತರ ಶಿಷ್ಯರು ಶಿಲುಬೆಯ ಮರಣ ಮತ್ತು ಪುನರುತ್ಥಾನದ ಬಗ್ಗೆ ಹೆಚ್ಚು ಒತ್ತಿ ಹೇಳುತ್ತಿರಲಿಲ್ಲ. ಪೌಲನು ಅರೇಬಿಯದಿಂದ ಹಿಂತಿರುಗಿ ಅನ್ಯಜಾತಿಯವರಿಗೆ ಉಪದೇಶಿಸಲು ತೊಡಗುವ ತನಕ ಈ ಹೊಸ ತತ್ವದ ಕುರಿತು ನಾವು ಹೆಚ್ಚಾಗಿ ಏನೂ ಅರಿಯುವುದಿಲ್ಲ. ಕ್ರಿಸ್ತ ಧರ್ಮದ ಪ್ರಥಮ ಬಲಿದಾನಿ ಸ್ತೆಫನನಾಗಿದ್ದನು. ಈತನ ಬಲಿದಾನ ಪೌಲನನ್ನು ಬಹಳ ಪ್ರಭಾವಿತನಾಗಿ ಮಾಡಿದ್ದಿತು. ಅಪೋಸ್ತಲರ ಕೃತ್ಯಗಳು 6 ಮತ್ತು 7ನೇ ಅಧ್ಯಾಯದಲ್ಲಿ ಈತನ ಕುರಿತು ಬರೆಯಲಾಗಿದೆ. ಆತನು "ಜನರಲ್ಲಿ ಮಹಾ ಅದ್ಭುತ ಕಾರ್ಯಗಳನ್ನೂ ಪವಾಡಗಳನ್ನೂ ಮಾಡಿದನೆ''ಂದು ಬರೆಯಲಾಗಿದೆ. ಆತನು ಯಹೂದಿಗಳೊಡನೆ ದೊಡ್ಡ ವಾದವನ್ನು ಮಾಡಿದನು. ಆತನು ದೇವಾಲಯದ ಪವಿತ್ರ ಸ್ಥಳದಲ್ಲಿ ಮಾಡುತ್ತಿರುವ ಪೂಜೆಯನ್ನೂ ದೇವರನ್ನೂ ಮೋಶೆಯನ್ನೂ ನಿಂದಿಸಿದನೆಂದು ಆರೋಪಿಸಿ ಆತನನ್ನು ಬಂಧಿಸಲಾಯಿತು. ಆತನು ಪವಿತ್ರ ಗ್ರಂಥಗಳಿಗೆ ಸಂಬಂಧಿಸಿ ಒಂದು ಉತ್ತಮ ಪ್ರವಚನ ಮಾಡಿದನು. ಆದರೆ ಅದರಲ್ಲಿ ಯೇಸು ಕ್ರಿಸ್ತರ ಪುನರುತ್ಥಾನದ ಕುರಿತು ಒಂದು ಶಬ್ದ ಸಹ ನುಡಿಯುವುದಿಲ್ಲ. ಪುನರುತ್ಥಾನಗೊಂಡ ದೇವರು ಆತನ ವಿಶ್ವಾಸ ಕೇಂದ್ರವಾಗಿದ್ದರೆ ಆತನು ಆರೀತಿ ಏಕೆ ಹೇಳಲಿಲ್ಲ? ತನ್ನ ಭಾಷಣದಲ್ಲಿ ಪುನರುತ್ಥಾನವನ್ನು ಇತರ ಎಲ್ಲಾ ಸಂಗತಿಗಳಿಂತ ಹೆಚ್ಚಾಗಿ ಒತ್ತಿ ಹೇಳಬೇಕಾದ್ದಿತು. ಆದರೆ ಆತನು ಆರೀತಿ ಮಾಡಲಿಲ್ಲ. (ರಿವ್ಯೂ ಆಫ್ ರಿಲೀಜಿಯನ್ಸ್ Vol. 27 No. 9 page 24).

ಪೌಲನು ಮಾತ್ರ ಪುನರುತ್ಥಾನದ ಕುರಿತು ಹೆಚ್ಚು ಆಸಕ್ತಿಯನ್ನು ತೋರಿಸುತ್ತಾನೆ. ಆತನು "ಕ್ರಿಸ್ತನು ಎದ್ದು ಬರಲಿಲ್ಲವಾದರೆ ನಮ್ಮ ಪ್ರಸಂಗವು ಹುರುಳಿಲ್ಲದ್ದು ಮತ್ತು ನಿಮ್ಮ ನಂಬಿಕೆಯೂ ಹುರುಳಿಲ್ಲದ್ದು'' (I ಕೊರಿಂಥವರಿಗೆ 15:14) ಎಂದೆನ್ನುತ್ತಾನೆ. ಆತನೇ "ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು" ಎಂದನು. (ಗಲಾತ್ಯದವರಿಗೆ 3:13). ಆತನೇ ಕ್ರಿಸ್ತರ ಶಿಲುಬೆಯ ಕುರಿತು ಪ್ರಶಂಸಿಸಿದನು. (ಗಲಾತ್ಯದವರಿಗೆ 6:14).

ಯೇಸುಕ್ರಿಸ್ತರ ಆದಿ ಶಿಷ್ಯರು ಪೌಲನ ಈ ಹೊಸ ಪರಿಪಾಟವನ್ನು ಇಷ್ಟಪಡಲಿಲ್ಲ. ಆತನನ್ನು ಅವರು ಸಾಧ್ಯವಿದ್ದಷ್ಟು ಎದುರಿಸಿದರು. ಆದರೆ ಸಮಯ ದಾಟಿದಾಗ ಆತನ ಸಂಘಟಿತ ಯಹೂದಿಗಳಿಂದ ರದ್ದುಗೊಳಿಸಲ್ಪಟ್ಟರೂ ರೋಮನ್ ಸಾಮ್ರಾಜ್ಯದ ರಾಜಧರ್ಮವಾಯಿತು. ಹಿಂದಿನ ನಂಬಿಕೆಗಳೂ ಆಚಾರಗಳೂ ಹೊಸ ರೂಪ ಪಡೆದುವು ಆಟ್ಟಿಸನ ಪೂಜೆಗೆ ಪ್ರತಿಯಾಗಿ ಯೇಸುಕ್ರಿಸ್ತರ ಪೂಜೆ ಆರಂಭವಾಯಿತು. ನೀಕ್ಯಾದ ಧರ್ಮ ಸಭೆಯಲ್ಲಿ (Council of Nicaea) ಕ್ರಿ. ಶ. 325ರಲ್ಲಿ (ಎಂದರೆ ಶಿಲುಬೆಯ ಸಮಯ ಕಳೆದು ಅಂದಾಜು ಮುನ್ನೂರು ವರ್ಷ ದಾಟಿದಾಗ) ಯೇಸುಕ್ರಿಸ್ತರು ಪ್ರಥಮವಾಗಿ ಕ್ರಿಸ್ತ ಧರ್ಮ ಸ್ಥಾಪನೆಗಳಿಂದ ದೇವರಾಗಿ ಸ್ವೀಕರಿಸಲ್ಪಟ್ಟರು.'' (Paganism in our Christianity page 168). ಹೀಗೆ ಪೌಲನಿಂದ ಆರಂಭಗೊಂಡ ಸಿದ್ಧಾಂತ ಮಾನವನಾದ ಯೇಸುಕ್ರಿಸ್ತರನ್ನು ದೇವರನ್ನಾಗಿ ಮಾಡಿತು. ಯಥಾರ್ಥವಾಗಿ ಅವರು ದೇವರ ಏಕತೆಯನ್ನು ಘೋಷಿಸಲಿಕ್ಕಾಗಿಯೂ ಏಕದೇವರನ್ನಲ್ಲದೆ ಇತರ ಯಾರನ್ನೂ ಪ್ರಾರ್ಥಿಸಬಾರದೆಂಬ ಉದ್ದೇಶದಿಂದಲೂ ಕಳುಹಿಸಲ್ಪಟ್ಟಿದ್ದರು.

## ಶಿಲುಬೆಗೆ ಏರಿಸುವಿಕೆ ಮತ್ತು ಪುನರುತ್ಥಾನದ ಕುರಿತು ಯೇಸುಕ್ರಿಸ್ತರು ಭವಿಷ್ಯ ನುಡಿದಿರುವರೇ?

1927ರಲ್ಲಿ ನಾನು ದಮಾಸ್ಕಸ್‌ನಲ್ಲಿದ್ದಾಗ ದಮಾಸ್ಕಸ್‌ನ ಕ್ರಿಸ್ತ ಮಿಶನಿನ ಆಗಿನ ಇನ್‌ಚಾರ್ಜ್ ರೆವರೆಂಡ್ ಆಲ್‌ಫ್ರೆಡ್ ನೆಲ್‌ಸನರೊಂದಿಗೆ ಬರಹ ಮೂಲಕ ಒಂದು ವಾದ ವಿವಾದ ನಡೆಸಿದೆ. "ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೇ?'' ಎಂಬುದು ಚರ್ಚಾ ವಿಷಯವಾಗಿತ್ತು. ಈ ಸಂದರ್ಭದಲ್ಲಿ ಅವರೊಂದು ಪ್ರಶ್ನೆ ಕೇಳಿದರು: ''ಯೇಸುಕ್ರಿಸ್ತರು ಶಿಲುಬೆಯಲ್ಲಿ ಮರಣಹೊಂದಲಿಲ್ಲವೆಂದು ನಾವು ನಂಬುವುದಾದರೆ ತಾನು ಕೊಲ್ಲಲ್ಪಟ್ಟು ಮೂರನೆಯ ದಿನ ಎದ್ದೇಳುವೆನೆಂಬ ಅವರ ಭವಿಷ್ಯವಾಣಿ ಸುಳ್ಳೆ?''
ನನ್ನ ಉತ್ತರ ಈ ಕೆಳಗಿನಂತಿತ್ತು:—

"ಈ ಮಾತು ಯೇಸುಕ್ರಿಸ್ತರು ಸ್ವತಃ ಹೇಳಿದ ಮಾತೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಈ

ಪುಸ್ತಕಗಳು ಪೌಲನು ವಿರಚಿಸಿದ ಶಿಲುಬೆಯ ಸಿದ್ಧಾಂತವನ್ನು ಹೆಚ್ಚಿನ ಕ್ರೈಸ್ತರು ನಂಬಿದ ನಂತರ ಬರೆಯಲ್ಪಟ್ಟುವು.''

ಲೂಕನು ಪೌಲನ ಜೊತೆಯಲ್ಲೇ ಇದ್ದನು. ಆತನು ಪೌಲನ ಅನೇಕ ಪ್ರಯಾಣಗಳಲ್ಲಿ ಆತನ ಜೊತೆಗಿದ್ದನು. (ಉದಾಹರಣೆಗಾಗಿ ಅಪೋಸ್ತಲರ ಕೃತ್ಯಗಳು 16:12 ಮತ್ತು 28:13 ನೋಡಿರಿ). ರೋಮಿನಲ್ಲಿ ಅವರಿಬ್ಬರು ಜೊತೆಗಿದ್ದರು. (2 ತಿಮೊಥೆಯನಿಗೆ 4:11). ಪಾಪಿಯಸ (Papias)ನು ಬರೆದ ಲೇಖನದ ಪ್ರಕಾರ ಮಾರ್ಕನು ಪೇತ್ರನ ಅನುಯಾಯಿಯೂ ವ್ಯಾಖ್ಯಾನಕಾರನೂ ಆಗಿದ್ದನು. (ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕ Ed. II Vol 17 page 729).

ಎರಡನೆಯದಾಗಿ, ಇನ್ನಿತರ ಎರಡು ಸುವಾರ್ತೆಗಳ ಲೇಖಕರು ಯಾರೆಂಬುದು ಚರ್ಚಾ ವಿಷಯವಾಗಿದೆ. ಈ ಪುಸ್ತಕಗಳಲ್ಲೂ ಪೌಲನ ತತ್ವಗಳನ್ನು ಸಮರ್ಥಿಸುವ ಕೆಲವು ವಾಕ್ಯಗಳನ್ನು ಕಂಡರೆ ಆಶ್ಚರ್ಯಪಡಬೇಕಾಗಿಲ್ಲ. ಈ ಭವಿಷ್ಯವಾಣಿಯ ಕುರಿತು ಪ್ರತಿಯೊಂದು ಸುವಾರ್ತೆಯಲ್ಲೂ ವ್ಯತ್ಯಸ್ಥವಾಗಿ ನಿರೂಪಿತವಾಗಿದೆ. ಮತ್ತಾಯನು ಈ ರೀತಿ ಹೇಳುತ್ತಾನೆ: ''ಅವರು ಆತನನ್ನು ಕೊಲ್ಲುವರು; ಸತ್ತ ಮೂರನೆಯ ದಿನದಲ್ಲಿ ಆತನು ಜೀವಿತನಾಗಿ ಎಬ್ಬಿಸಲ್ಪಡುವನು ಎಂದು ಹೇಳಿದನು. ಅದನ್ನು ಕೇಳಿ ಅವರು ಬಹಳ ದು:ಖಪಟ್ಟರು'' (ಮತ್ತಾಯ 17:23). ಇದರಿಂದ ಯೇಸುಕ್ರಿಸ್ತರು ಹೇಳಿದುದು ಅರ್ಥವಾಗಿ ಅವರು ದುಃಖಿತರಾದರೆಂಬುದು ಸ್ಪಷ್ಟ. ಯೇಸುಕ್ರಿಸ್ತರು ಹೇಳಿದ ಮಾತು ಶಿಷ್ಯರಿಗೆ ಅರ್ಥವಾಗಲಿಲ್ಲವೆಂದೂ ಆದರೆ ಅವರು ಹೆದರಿಕೆಯಿಂದ ಅದರ ವಿಷಯ ವಿವರಣೆ ಕೇಳಲಿಲ್ಲವೆಂದೂ ಲೂಕ ಮತ್ತು ಮಾರ್ಕ ಹೇಳುತ್ತಾರೆ: ಅವರು ಈ ಮಾತನ್ನು ಗ್ರಹಿಸಲಿಲ್ಲ; ಅದು ಅವರಿಗೆ ಮರೆಯಾದುದರಿಂದ ಅದರ ಅರ್ಥವನ್ನು ಅವರು ತಿಳಿಯದೆ ಹೋದರು. ಆ ಮಾತಿನ ವಿಷಯದಲ್ಲಿ ಅವರು ಆತನನ್ನು ಕೇಳುವುದಕ್ಕೆ ಅಂಜಿದರು. (ಲೂಕ9: 45 ಮತ್ತುಮಾರ್ಕ9:32 ನೋಡಿರಿ). ಯೇಸುಕ್ರಿಸ್ತರು ಸತ್ತು ಏಳುವ ವಿಷಯ ಶಿಷ್ಯರಿಗೆ ತಿಳಿದಿರಲಿಲ್ಲವೆಂದು ಯೋಹಾನನ ಸುವಾರ್ತೆಯಿಂದಲೂ ವ್ಯಕ್ತವಾಗುತ್ತದೆ. (ಯೋಹಾನ 20:9). ಅಳುತ್ತಾ ಶೋಕಾಪಡುತ್ತಿದ್ದ ಶಿಷ್ಯರೊಡನೆ ಮಗ್ದಲದ ಮರಿಯಳು ತಾನು ಯೇಸುಕ್ರಿಸ್ತರನ್ನು ಕಂಡುದಾಗಿ ನುಡಿದಾಗ ಅವರು ನಂಬಲಿಲ್ಲವೆಂದು ಮಾರ್ಕನು ಹೇಳುತ್ತಾನೆ. ಅನಂತರ ಇಬ್ಬರು ಶಿಷ್ಯರಿಗೆ ಅವರು ಕಾಣಿಸಿಕೊಂಡ ನಂತರ ಆ ಇಬ್ಬರು ಇತರ ಶಿಷ್ಯರೊಡನೆ ಹೇಳಿದಾಗ ಆ ಇತರ ಶಿಷ್ಯರೂ ನಂಬಲಿಲ್ಲ. ಅನಂತರ ಅವರು ಹನ್ನೊಂದು ಮಂದಿಗೂ ಪ್ರತ್ಯಕ್ಷರಾಗಿ ಮೊದಲು ತನ್ನನ್ನು ಕಂಡವರ ಮಾತನ್ನು ಅವರು ನಂಬದ ಕಾರಣ ಅವರ ಅವಿಶ್ವಾಸ ಮತ್ತು ಹೃದಯ ಕಾಠಿಣ್ಯವನ್ನು ನಿಂದಿಸಿದರು (ಮಾರ್ಕ 16:10-14). ಶಿಷ್ಯರ ಶೋಕಾಚರಣೆಯೂ ಪುನರುತ್ಥಾನದ ಕುರಿತು ಅವರ ಅವಿಶ್ವಾಸವೂ ಅವರಿಗೆ ಈ ರೀತಿಯ ಭವಿಷ್ಯವಾಣಿ ತಿಳಿದಿರಲಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತವೆ

ಮೂರನೆಯದಾಗಿ, ಈ ಭವಿಷ್ಯವಾಣಿಯ ಎರಡನೆಯ ಭಾಗ ''ಆತನು ಮೂರನೆಯ ದಿವಸ ಎಬ್ಬಿಸಲ್ಪಡುವನು'' ಎಂಬ ಭಾಗ ಶಬ್ದಶಃ ಪೂರ್ತಿಗೊಂಡಿಲ್ಲ. ಯೋಹಾನ 20-1 ಮತ್ತು ಲೂಕ 24:1ರ ಪ್ರಕಾರ ಅವರು ಶವಕುಟೀರದಲ್ಲಿ ಒಂದು ಹಗಲು ಮತ್ತು ಎರಡು ರಾತ್ರೆ ಇದ್ದರು; ಯೋನಾ ಪ್ರವಾದಿ ಮೂರು ಹಗಲು ಮತ್ತು ಮೂರು ರಾತ್ರೆ ತಿಮಿಂಗಿಲದ ಹೊಟ್ಟೆಯೊಳಗಿದ್ದಂತೆ ಅವರು ಸಮಾಧಿಯಲ್ಲಿರಲಿಲ್ಲ. ಆ ಭವಿಷ್ಯವಾಣಿಯ ಮೊದಲನೆಯ ಭಾಗವೂ ಅಕ್ಷರಶಃ ಪೂರ್ಣಗೊಳ್ಳಲಿಲ್ಲ. ಏಕೆಂದರೆ ಅವರು ಶಿಲುಬೆಯಲ್ಲಿ ಮೃತರಾಗಲಿಲ್ಲ. ಸಂತ ಯೋಹಾನನು ''ಕುರಿಕೊಯ್ಯಲ್ಪಟ್ಟದ್ದಾಗಿ'' (ಪ್ರಕಟಣೆ 5:6) ಒಂದು ದರ್ಶನದ ಮೂಲಕ ಕಂಡುದೆಂದು ಹೇಳಿದ್ದು ಯೇಸುಕ್ರಿಸ್ತರ ಮರಣಾವಸ್ಥೆಯನ್ನು ಹೋಲುವ ಕುರಿತು ಒಂದು ಸಂಜ್ಞೆಯೆಂದೂ ಅಥವಾ ಶಿಲುಬೆಯಲ್ಲಿ ಅನುಭವಿಸಬೇಕಾದ ಭಯಂಕರ ಅವಸ್ಥೆಯು ಮರಣವನ್ನು ಹೋಲುತ್ತಿದ್ದು ಅದನ್ನೇ ಮರಣವೆಂದು ಸೂಚಿಸಿರಬಹುದೆಂದೂ ನಾವು ತಿಳಿಯಬೇಕಾಗಿದೆ.

ದೇವರು ಯೇಸುಕ್ರಿಸ್ತರನ್ನು ಶಿಲುಬೆಯಿಂದ ರಕ್ಷಿಸುವನೆಂಬುದಕ್ಕೆ ಹಲವು ಭವಿಷ್ಯವಾಣಿಗಳಿವೆ. ಅವುಗಳಲ್ಲಿ ಕೆಲವನ್ನು ನಾನು ಮೊದಲನೆಯ ಅಧ್ಯಾಯದಲ್ಲಿ ಸೂಚಿಸಿರುವೆನು. ಯೇಸುಕ್ರಿಸ್ತರು ಶಿಲುಬೆಯಿಂದ ಬದುಕಿ ರಕ್ಷಿಸಲ್ಪಡುವುದರ ಕುರಿತು ಎಲ್ಲರೂ ಚಿಂತಿತರಾಗಿದ್ದಾಗ ದೇವರು ಅವರನ್ನು ಮರಣದಿಂದ ರಕ್ಷಿಸಿ ಅವರ ಯಥಾರ್ಥ ಭವಿಷ್ಯವಾಣಿ ಪೂರ್ತಿಗೊಳಿಸಿದನು–ಯೋನಾ ಪ್ರವಾದಿ ತಿಮಿಂಗಿಲದ ಹೊಟ್ಟೆಯೊಳಗೆ ಜೀವದಿಂದಿದ್ದಂತೆ ಯೇಸುಕ್ರಿಸ್ತರು ಶವಕುಟೀರದಲ್ಲಿ ಜೀವದಿಂದಿದ್ದರು.

[ ಮುಂದುವರಿಯುವುದು ]

# SOME OF OUR ENGLISH PUBLICATIONS

1. Economic Struc ure of Islamic Society
By Hazrat Mirza Bashiruddin Mahmud Ahmad.
2. Islamic Teachings on the Moral Condition of man.
By Hazrat Mirza Ghulam Ahmad.
3. The Contribution of Islam to the Solution of world Problems.
By Sir Muhammad Zafrulla Khan.
4. Wisdom of the Holy Prophet Muhammad.
By Sir Muhammad Zafrulla Khan.
5. The Holy Prophet Muhammad
By Hazrat Mirza Bashiruddin Mahmud Ahmad.
6. The Life of Muhammad.
By Hazrat Mirza Bashiruddin Mahmud Ahmad.
7. Muhammad in the Bible.
By Dr. Khalil Ahmad Nasir Ph. D.
8. Islam & Slavery
By Hazrat Mirza Bashir Ahmad, M. A.
9. Truth About Khatme Nubuwat
By Hazrat Mirza Bashir Ahmad, M. A.
10 How Jesus Survived Crucifixion?
11. Did Jesus Redeem Mankind?
By Hazrat Mirza Bashruddin Mahmud Ahmad.
12. Why Did Early Christians Accept Islam?
By J D Shams
13. The Christian Doctrine of Atonement.
By Dr. M. M. Sadiq, D. D; LL. D., S. S. P. (Lond)
14. A Review of Christianity from a New point of view.
By Hazrat Mirza Ghulam Ahmad.
15 Jesus in Kashmir
16 Four Questions by a Christian and their Answers.
By late Hazrat Mirza Ghulam Ahmad
17. How to Get Rid of the Bondage of Sin?
By Hazrat Mirza Ghulam Ahmad.
18 The Last Message of the Prince of Peace.
By Hazrat Mirza Ghulam Ahmad.
19. Moral Principles as the Basis of Islamic Culture.
By Sir Muhammad Zafrulla Khan.
20. The Babee and Bahaee Religions.

**NAZIR DAWAT-O-TABLIGH**
P. O. QADIAN – 143516 (Punjab)

Regd. with the Registrar of Newspapers for India, Regd. No. R. N. 27354/75
YUGARASHMI Kannada Quarterly,
October - December 1976 / Ikha - Fatah 1355


# BOOKS ON ISLAM AND CONTEMPORARY RELIGIONS

| | | |
|---|---|---|
| 1. | **Holy Quran with Arabic Text and English Translation** | 12-00 |
| 2. | **Ahmadiyyat or The True Islam**<br>By Hazrat Mirza Bashiruddin Mahmud Ahmad. | 8-00 |
| 3. | **New World Order**<br>By Hazrat Mirza Bashiruddin Mahmud Ahmad | 2-25 |
| 4. | **The Teachings of Islam**<br>By Hazrat Mirza Ghulam Ahmad | 6-00 |
| 5 | **Characteristics of the Quramic Teachings**<br>By Hazrat Mirza Bashiruddin Mahmmd Ahmad. | 1-00 |
| 6. | **Where did Jesus Die ?**<br>By J. D. Shams | 2-25 |
| 7. | **The Tomb of Jesus**<br>By sufi M. R. Bengali | 0-75 |
| 8 | **Jesus in India**<br>By Hazrat Mirza Ghulam Ahmad | 2-25 |
| 9. | **The Christian Doctrine of Atonement**<br>By Dr. Mufti Muhammad Sadiq. | 1-50 |
| 10. | **An Interpretation of Islam**<br>By Prof Dr. Laura Veccia Vaglieri | 1 50 |

Write to

**NAZIR DAWAT-O-TABLIGH**

**P. O. QADIAN - 143516. (Punjab)**


Printed by: A. B Sunder Ram Shetty, at Aruna Printing Press, Dongerkery Mangalore and Edited and Published by Muhammad Yusuf on behalf of Jamath Ahamadiyya Mangalore, at 23/1008 Ansari Road, Bunder, Mangalore-575001.